ಸಂಪುಟ 23 ಸಂಚಿಕೆ 7
ಫೆಬ್ರವರಿ 18, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಪೆಕ್ಸ್‌ರಂಗ



ಗುಲ್ಬರ್ಗ:

ಗೋಳು ತೋಡಿಕೊಂಡ ರೈತರಿಗೆ ಕೋಳ ತೊಡಿಸಿ ಬಡಿದ ಪೋಲೀಸರು

ಅಬ್ಬಬ್ಬಾ ಎನ್ನೀ ಶುಲ್ಕ ಏರಿಕೆ!



ಭೂಕಂಪವನ್ನೂ ಬಿಡದ ದುಷ್ಟರು



ಮಾರ್ದನಿಸಿದ ರೈತ ಚಳುವಳಿ

ಬಸು ಹತ್ಯೆಗೆ ಆನಂದ ಮಾರ್ಗದ ಯತ್ನ

ಎರಡು ದಿನಗಳ ನಂತರ ನನ್ನ ಮೇಲೆ ಹಲ್ಲೆ ನಡೆಯಿತು. ಈ ಬಾರಿ ಕೊಲ್ಲುವ ಉದ್ದೇಶದಿಂದಲೇ ಈ ಹಲ್ಲೆ ಮಾಡಲಾಯಿತು. ಇದೊಂದು ಪ್ರತ್ಯೇಕವಾದ ಪ್ರಕರಣವೇನೂ ಅಲ್ಲ. ಸಿಪಿಐ(ಎಂ) ಕಾರ್ಯಕರ್ತರು ಮತ್ತು ಮುಖಂಡರ ಮೇಲೆ ದಿನನಿತ್ಯವೆನ್ನುವಂತೆ ಆಕ್ರಮಣಗಳು ನಡೆಯುತ್ತಲೇ ಇದ್ದವು. ನಮ್ಮ ವಿರುದ್ಧದ ಪಿತೂರಿಯ ಅಂಗವೇ ಆಗಿಬಿಟ್ಟಿತ್ತದು.

ಮಾರ್ಚ್ 31 ರಂದು ನಾನು ಪಕ್ಷದ ಕೆಲಸದ ಮೇಲೆ ಪಾಟ್ನಾಗೆ ಹೋಗಿದ್ದೆ. ಬೆಳಿಗ್ಗೆ ಎಂಟುಗಂಟೆ ಹೊತ್ತಿಗೆ ರೈಲು ನಿಲ್ದಾಣವನ್ನು ತಲುಪಿದಾಗ ಸಾವಿರಾರು ಜನರು ಕೆಂಬಾವುಟ ಮತ್ತು ಪತಾಕೆಗಳನ್ನು ಬೀಸುತ್ತಿದ್ದನ್ನು ಕಂಡೆ. ಬಿಹಾರದಲ್ಲಿ ಪಕ್ಷದ ನೆಲೆ ವಿಸ್ತರಿಸಿರುವುದನ್ನು ಗಮನಿಸಿ ಬಹಳ ಸಂತೋಷವಾಯಿತು. ನಾನು ನಿಲ್ದಾಣದಿಂದ ಹೊರಬಂದೆ.

ಇದ್ದಕ್ಕಿಂದ್ದಂತೆ ನಮ್ಮಿಂದ 10 ಅಡಿ ದೂರ ಎಡಭಾಗದಲ್ಲಿ ಬೆಂಕಿಯ ಸೆಳಕೊಂಡು ಕಂಡು ಕಣ್ಣಿಗೆ ಕತ್ತಲು ಕವಿದಂತಾಯಿತು. ಏನೋ ನನ್ನ ಬೆರಳನ್ನು ಸೋಂಕಿದ ಅನುಭವವಾಯಿತು. ಏನಾಯಿತೆಂದು ತಿಳಿಯುವುದರೊಳಗೆ ಯಾರೋ ಕೂಗಿದ್ದು ಕೇಳಿಸಿತು. ನನ್ನ ಹಿಂದೆ ನಿಂತಿದ್ದ ಒಬ್ಬ ವ್ಯಕ್ತಿ ಕೆಳಗೆ ಉರುಳಿದ, ಆತನ ಬಟ್ಟೆ ರಕ್ತಸಿಕ್ತವಾಗಿತ್ತು. ಹಠಾತ್ತನೆ ಈ ಘಟನೆ ನಡೆದಿದ್ದರಿಂದ ನಾನು ಅವಾಕ್ಕಾಗಿ ಹೋದೆ. ಭಯಾನಕ ಕೋಲಾಹಲದಿಂದಾಗಿ ನನ್ನ ಮೌನ ಭಂಗವಾಯಿತು. ಕೆಲವು ಜನರು ಆಕ್ರಮಣ ನಡೆಸಿದ ದುಷ್ಕರ್ಮಿಯನ್ನು ಅಟ್ಟಿಸಿಕೊಂಡು ಹೋದರು. ಆದರೆ ಆ ಹೊತ್ತಾಗಾಗಲೇ ದುಷ್ಕರ್ಮಿ ತಪ್ಪಿಸಿಕೊಂಡು ಹೋಗಿದ್ದ.

ಗುಂಡೇಟಿನಿಂದ ಗಾಯಗೊಂಡ ವ್ಯಕ್ತಿ ಅಲಿ ಇಮಾಮ್ ಎಂಬುವವರು ಎಂದು ಗೊತ್ತಾಯಿತು. ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಆತ ಮೃತಪಟ್ಟ. ಆತ ನಮ್ಮ ಪಕ್ಷದ ಬೆಂಬಲಿಗನಾಗಿದ್ದು ಎಲ್.ಐ.ಸಿ.ಯಲ್ಲಿ ಕೆಲಸ ಮಾಡುತ್ತಿದ್ದ ಕಾಮ್ರೆಡ್ ಇ.ಎಂ.ಎಸ್. ನಬೂದರಿ ಪಾಡ್ ಅವರು ಅಲಿ ಇಮಾಮರ ಮನೆಯಲ್ಲಿ ಕೆಲವು ದಿನಗಳ ಹಿಂದಷ್ಟೆ ಉಳಿದುಕೊಂಡಿದ್ದರು. ವಾಸ್ತವವಾಗಿ ನಾನು ಕೂಡ ಆತನ ಅತಿಥಿಯಾಗಬೇಕಿತ್ತು. ನನ್ನನ್ನು ಸ್ವಾಗತಿಸಲೆಂದೇ ಆತ ಸ್ಟೇಷನ್‌ಗೆ ಬಂದಿದ್ದ. ಇದಕ್ಕೆ ಪ್ರತಿಯಾಗಿ ಆತ ತನ್ನ ಪ್ರಾಣವನ್ನೇ ತೆರಬೇಕಾಯಿತು. ನನ್ನ ಬೆರಳಿಗೆ ಸ್ವಲ್ಪ ಗಾಯವಾಗಿತ್ತು.

ಗುಂಡು ಹಾರಾಟದ ಸುದ್ದಿ ಹಬ್ಬುತ್ತಲೇ ಪಟ್ನಾ ನಗರದಲ್ಲಿ ಪರಿಸ್ಥಿತಿ ಉದ್ವಿಗ್ನವಾಯಿತು. ಸುಮಾರು 20 ಸಾವಿರ ಜನರಿದ್ದ ಒಂದು ರ್‍ಯಾಲಿ ರಾಜ್ಯಾ ವಿಧಾನಸಭೆಯತ್ತ ಸಾಗಿತು. ಸಂಜೆ ಒಂದು ಬೃಹತ್ ಸಾರ್ವಜನಿಕ ಸಭೆ ನಡೆಯಿತು.ರ್‍ಯಾಲಿಯನ್ನುದ್ದೇಶಿಸಿ ನಾನೂ ಮಾತನಾಡಿದೆ.

ಹಲ್ಲೆಗೆ ಯಾರು ಕಾರಣರಿರಬಹುದು ಎಂಬುದು ನಿಮ್ಮ ಭಾವನೆ ಎಂದು ಪಾಟ್ನಾದ ಪತ್ರಕರ್ತರು ನನ್ನನ್ನು ಕೇಳಿದರು. ಯಾವುದೇ ಒಬ್ಬ ವ್ಯಕ್ತಿ ಇದಕ್ಕೆ ಹೊಣೆಯಲ್ಲ ಎಂಬುದು ನನ್ನ ನಂಬಿಕೆ, ಇದೊಂದು ರಾಜಕೀಯ ಪಿತೂರಿ ಎಂದು ನಾನು ಉತ್ತರಿಸಿದೆ.

ಆನಂದ ಮಾರ್ಗ

ಹಲ್ಲೆ ನಡೆಸಿದವನು ಆನಂದ ಮಾರ್ಗಕ್ಕೆ ಸೇರಿದವನು ಎಂಬುದು ನನಗ ಆಮೇಲೆ ಗೊತ್ತಾಯಿತು. ನಾನು ಅಲಿ ಇಮಾಮರ ಮನೆಗೆ ತೆರಳಿ ಆತ ಒಬ್ಬ ಹುತಾತ್ಮ ಎಂದು ಹೇಳಿದೆ. ಆತನ ಹೆಡತಿ ಕೆಲವು ವರ್ಷಗಳ ಹಿಂದೆ ಮೃತರಾಗಿದ್ದರು. ಈಗ ಅವರ ಮಗ ಮತ್ತು ಮಗಳು ಅನಾಥರಾದರು. ಅಂದಿನ ಒಂದೊಂದು ಘಟನೆಗಳೂ ಒಂದೊಂದು ರೀತಿಯಲ್ಲಿ ನನಗೆ ಮುದ ಹಾಗೂ ಬೇಸರ ಎರಡೂ ತಂದಿತ್ತವು. ಪಾಟ್ನಾಗೆ ನನ್ನ ಆಗಮನ, ಉತ್ಸಾಹಪೂರಿತ ಸ್ವಾಗತ, ನನ್ನ ಕೊಲೆಗೆ ಯತ್ನ, ಅಲಿ ಇಮಾಮರ ಹತ್ಯೆ, ಅವರ ಮಕ್ಕಳು ಅನಾಥರಾಗಿದ್ದು ಇವೆಲ್ಲ ಘಟನೆಗಳು ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು.

ಅತ್ತ ಕಲ್ಕತ್ತದಲ್ಲಿ ಬಹಳಷ್ಟು ಸುದ್ದಿಗಳು ನನಗಾಗಿ ಕಾದಿದ್ದವು. ಪಾಟ್ನಾದಲ್ಲಿ ನನ್ನ ಹತ್ಯೆಗೆ ಪ್ರಯತ್ನ ನಡೆಯಿತೆಂದು ಸುದ್ದಿ ಹಬ್ಬುತ್ತಿದ್ದಂತೆಯೇ ಪಶ್ಚಿಮ ಬಂಗಾಳದ ಹಲವೆಡೆ ವಿದ್ಯಾರ್ಥಿಗಳು ಬೀದಿಗಿಳಿದರು. ಕೆಲವು ಕೇಂದ್ರಗಳಲ್ಲಿ ಹೈಯರ್ ಸೆಕೆಂಡರಿ ಪರೀಕ್ಷೆಗಳನ್ನೂ ಮುಂದಕ್ಕೆ ಹಾಕಲಾಯಿತು. ಕೈಗಾರಿಕೆಗಳು ಮುಚ್ಚಿದ್ದವು. ಸದಾ ಚಟುವಟಿಕೆಯಿಂದ ಕೂಡಿರುತ್ತಿದ್ದ ಡಾಲ್ ಹೌಸಿ ಪ್ರದೇಶದಲ್ಲಿಕಚೇರಿಗಳು ಖಾಲಿಖಾಲಿಯಾಗಿದ್ದವು.

ಇಡೀ ಪಟ್ಟಣವೇ ಸಾರ್ವತ್ರಿಕ ಹರತಾಳವನ್ನು ಆಚರಿಸುತ್ತಿರುವಂತೆ ಕಾಣುತ್ತಿತ್ತು. ನೂರಾರು ಜನರು ನಮ್ಮ ಪಕ್ಷದ ಕಚೇರಿಗೆ ಬಂದು ನನ್ನ ಆರೋಗ್ಯದ ಬಗ್ಗೆ ವಿಚಾರಿಸತೊಡಗಿದರು.

ಇವೆಲ್ಲದರಿಂದ ನಮಗೆ ಬಹಳ ಉತ್ತೇಜನ ಸಿಕ್ಕಿದಂತಾಯಿತು. ಕಾಂಗ್ರೆಸ್ ಮತ್ತು ಅದರ ಬೆಂಬಲಿಗರು ನಮ್ಮ ವಿರುದ್ಧ ನಡೆಸುತ್ತಿದ್ದ, ವೈರದ ಪ್ರಚಾರ ಇದ್ದಗ್ಯೂ ನಮ್ಮ ಕಾರ್ಯಕ್ರಮವನ್ನು ಎತ್ತಿ ಹಿಡಿದು ಮುಂದಕ್ಕೊಯ್ಯಲು ಹೊಸ ಸ್ಫೂರ್ತಿ ಸಿಕ್ಕಿತು.

ಪ್ರೀತಿಗೆ ಮಿಗಿಲಾದುದು ಇನ್ನೇನಿದೆ.

ಜೀವನದಲ್ಲಿ ಜನರ ಪ್ರೀತಿಗಿಂತ ಅಮೂಲ್ಯವಾದುದು ಇನ್ನಾವುದೂ ಇಲ್ಲ. ಮಹಾನ್ ಧ್ಯೇಯವೊಂದಕ್ಕಾಗಿ ನಮ್ಮ ಪ್ರಾಣವನ್ನು ಅರ್ಪಿಸಲು ನಾವು ಸದಾಸಿದ್ದರು. ಸಮಯ ಬಂದಾಗ ಈ ವಿಚಾರದಲ್ಲಿ ನಾವು ಹಿಂದೆ ಬೀಳಲೇಬಾರದು. ನಮ್ಮ ಸಮಯವನ್ನು ಹಾಳುಮಾಡುತ್ತ ಜೀವನವನ್ನು ವ್ಯರ್ಥಗೊಳಿಸಬಾರದು. ಯಾವುದೇ ಪ್ರಯೋಜನಕ್ಕೆ ಬಾರದ ಜೀವನವನ್ನು ನಡೆಸಿದ್ದೆಲ್ಲಾ ಎಂದು ಆಮೇಲೆ ಪಶ್ಚಾತಾಪ ಪಡುವಂತಾಗಲಾರದು. ಈ ವಿಚಾರಕ್ಕೆ ನಾನೂ ಯಾವತ್ತೂ ಒತ್ತು ನೀಡುತ್ತಿದ್ದೆ.

ಏಪ್ರಿಲ್ 2000ರಂದು ಶಹೀದ್ ಮಿನಾರ್‌ನಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಪ್ರಮೋದ್ ದಾಸ್‌ಗುಪ್ತಾ ವಹಿಸಿದ್ದರು. ಸಭೆಯ ಸಂದೇಶ ಸುಸ್ಪಷ್ಟವಾಗಿತ್ತು. ಹಿಂಸಾ ಮಾರ್ಗಗಳ ಮೂಲಕ ನಮ್ಮ ಪ್ರಜಾಸತ್ತಾತ್ಮಕ ಆಂದೋಲಗಳನ್ನು ಹಾಳುಮಾಡಲು ಹಾಗೂ ನಮ್ಮನ್ನು ನಾಶಮಾಡುವ ಉದ್ದೇಶ ಇರುವವರಿಗೆ ಜನತಾ ವೇದಿಕೆ ಮೂಲಕ ಪ್ರಬಲ ಸವಾಲನ್ನು ಒಡ್ಡಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು.

ಈ ನಡುವೆ, ರಾಜ್ಯದಲ್ಲಿನ ರಾಷ್ಟ್ರಪತಿ ಆಡಳಿತ ಕೊನೆಗೊಳ್ಳುವ ಯಾವ ಲಕ್ಷಣವೂ ಕಾಣಿಸಲಿಲ್ಲ. ಪರೋಕ್ಷವಾಗಿ ಕಾಂಗ್ರೆಸ್ಸೇ ರಾಜ್ಯದಲ್ಲಿ ಆಡಳಿತ ನಡೆಸುತ್ತಿತ್ತು. ನಾವು ನಮ್ಮ ಚಳುವಳಿಯ ...... ಹಾಗೇ ಉಳಿಸಿಕೊಂಡು ಬಂದೆವು... ಪಶ್ಚಿಮ ಬಂಗಾಳ ಅನ್ಯಾಯವನ್ನು ವಹಿಸಿಕೊಳ್ಳುವುದಿಲ್ಲ ಎಂಬ ಸಂದೇಶ ಸಾರಿದ್ದು ಮಾರ್ಚ್ 17 ರ ಸಾರ್ವತ್ರಿಕ ಮುಷ್ಕರ.

ಸಿಐಟಿಯು ಎಸ್.ಎಫ್.ಐ ಜನನ.

ಪೂರ್ಣವಾಗಿ ರಾಜಕೀಯ ಅರಾಜಕತೆ ಹಾಗೂ ಆಕ್ರೋಶ ಆಂದೋಲನಗಳ ನಡುವೆ ಎರಡು ಮಹತ್ವದ ಸಮ್ಮೇಳನಗಳು ನಡೆದವು. ಕಾರ್ಮಿಕ ವರ್ಗದ ಮಾರ್ಗದರ್ಶಿಯಾಗಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಮತ್ತು ದೇಶದ ವಿದ್ಯಾರ್ಥಿ ವಿಭಾಗದ ಮಿತ್ರನಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ಈ ಸಮ್ಮೇಳನಗಳಲ್ಲಿ ಜನ್ಮ ತಳೆದವು.

ಪಕ್ಷ ವಿಭಜನೆಯಾದರೂ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಐಟಕ್)ನಲ್ಲಿ ನಾವು ಇನ್ನೂ ಒಟ್ಟಾಗಿಯೇ ಇದ್ದೇವು. ಆದರೆ ಈ ಸಂಘಟನೆಯ ಅಧಿಕಾರ ಕೇಂದ್ರವನ್ನು ಕಬಳಿಸಲು ಡಾಂಗೆ ನಿಷ್ಠರು ಪ್ರಯತ್ನಿಸಿದರು; ದುಡಿಯುವ ವರ್ಗದ ಮೇಲಿನ ದೌರ್ಜನ್ಯ ದಬ್ಬಾಳಿಕೆಗೆ ವಿರೋಧವಾಗಿ ಅದು ಒಂದೇ ಒಂದು ರಾಷ್ಟ್ರವ್ಯಾಪಿ ಮುಷ್ಕರಕ್ಕೂ ಕರೆಕೊಡಲಿಲ್ಲ.

ಐಟಕ್‌ನ ಒಳಗೆ ಇದ್ದುಕೊಂಡೇ ಜನರಿಗಾಗಿ ನಾವು ಹೋರಾಟ ನಡೆಸಬಹುದು. ಹಾಗೂ ಪ್ರತಿಗಾಮಿ ಶಕ್ತಿಗಳತ್ತ ಸಾಗಿರುವ ಅದರ ಒಲವನ್ನು ಬದಲಾಯಿಸಬಹುದು ಎಂದು ನಾವು ಭಾವಿಸಿದೆವು. ಆದರೆ ಹಾಗಾಗಲಿಲ್ಲ, ಅದಕ್ಕೆ ಬದಲು ಡಾಂಗೆ ನಿಷ್ಠರು ಮಾಲಿಕರ ಲಾಭಿಯತ್ತ ವಾಲಿದರು. ಕಾರ್ಮಿಕರ ಹಿತಾಸಕ್ತಿಗೆ ಹಾನಿಯುಂಟುಮಾಡಿದರು. ಆದರೆ ಕಾರ್ಮಿಕರನ್ನು ಮುಖಂಡರನ್ನಾಗಿ ಮಾಡುವುದು ಸಾಧ್ಯವಿಲ್ಲ. ತಮ್ಮ ಸಮಸ್ಯೆಗಳಿಗೆ ಐಟಕ್ ಉತ್ತರವಲ್ಲ ಎಂಬುದನ್ನು ಕಾರ್ಮಿಕರು ಮನಗಂಡರು. ಅದರ ಸಹಜ ಫಲಿತಾಂಶವೇ ಹೊಸ ಸಂಘಟನೆ, ಸಿಐಟಿಯು ದುಡಿಯುವ ವರ್ಗದ ಕಲ್ಯಾಣದ ವಿಚಾರದಲ್ಲಿ ರಾಜಿ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು .... ನಾಯಕರು ಘೋಷಿಸಿದರು.

1978 ಮೇ 28ರಿಂದ 31ರವರೆಗೆ ಸಮ್ಮೇಳನ ನಡೆದ ಊರು ಯಾವುದೆಂದು ಪರಿಶೀಲಿಸಿ ನಮೂದಿಸಿ ನಡೆದ ಅಖಿಲ ಭಾರತ ಸಮ್ಮೇಳನದಲ್ಲಿ ಸಿಐಟಿಯು ಜನನವನ್ನು ಅಧಿಕೃತವಾಗಿ ಪ್ರಕಟಿಸಲಾಯಿತು. ಸಮ್ಮೇಳನ ಸ್ಥಳವಾದ ರಣಜಿ ಸ್ಟೇಡಿಯಂಗೆ 'ಲೆನಿನ್‌ಗಾರ' ಎಂದು ಹೆಸರಿಡಲಾಗಿತ್ತು.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 58

ಕಾಮ್ರೇಡ್ ಬಿ.ಟಿ.ರಣದಿವೆ ಸಿಐಟಿಯು ಸ್ಥಾಪಕ ಅಧ್ಯಕ್ಷರು ಹಾಗೂ ಕಾಮ್ರೇಡ್ ಪಿ.ರಾಮಮೂರ್ತಿ ಸ್ಥಾಪಕ ಪ್ರಧಾನ ಕಾರ್ಯದರ್ಶಿ ಸಮ್ಮೇಳನದಲ್ಲಿ ಆಯ್ಕೆ.

1970 ರ ಡಿಸೆಂಬರ್‌ನ ಕೊನೆವಾರ ತಿರುವನಂತಪುರದಲ್ಲಿ ಎಸ್.ಎಫ್.ಐ. ಪ್ರಥಮ ಸಮ್ಮೇಳನ ನಡೆಯಿತು.

ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ (ಎಐಎಸ್‌ಎಫ್) ಪರಿಷ್ಕರಣವಾದಿಗಳ ಹಿಡಿತಕ್ಕೆ ಸಿಲುಕಿ ನಲುಗುತ್ತಿತ್ತು. ದಾರಿ ತಪ್ಪಿಸಲಾಗುತ್ತಿರುವ ವಿದ್ಯಾರ್ಥಿ ಸಮುದಾಯವನ್ನು ರಕ್ಷಿಸಲು ಒಂದು ಪರ್ಯಾಯವನ್ನು ರಚಿಸುವುದು ಅನಿವಾರ್ಯವಾಗಿತ್ತು.

ಕೇರಳದಲ್ಲಿ ನಡೆದ ಸಮ್ಮೇಳನದಲ್ಲಿ ಎಸ್‌ಎಫ್‌ಐಗೆ ಅಂತಿಮ ರೂಪ ಸಿಕ್ಕಿತು. ಸಿ.ಭಾಸ್ಕರನ್ ಮತ್ತು ಬಿಮನ್ ಬೋಸ್ ಅನುಕ್ರಮವಾಗಿ ಅಧ್ಯಕ್ಷ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಎಸ್‌ಎಫ್‌ಐ ಜನನದ ವೇಳೆ ಅದರ ಸದಸ್ಯರ ಸಂಖ್ಯೆ ಸುಮಾರು 1.2 ಲಕ್ಷದಷ್ಟು ಮಾತ್ರ ಇತ್ತು. ವಿದ್ಯಾರ್ಥಿ ಸಮೂಹದ ಹೊಸ ಆಶಾಕಿರಣ ಹುಟ್ಟಿದ ಸಂಘಟನೆ ಬಿಳಿ ಹಿನ್ನೆಲೆಯಲ್ಲಿ ಕೆಂಪು ನಕ್ಷತ್ರವುಳ್ಳ ಧ್ವಜವನ್ನು ಅಂಗೀಕರಿಸಿತು. 'ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದ' ಅದರ ಧ್ಯೇಯವಾಯಿತು. ಅದನ್ನು ಧ್ವಜದ ಮೇಲೆ ಬರೆಯಲಾಯಿತು.

ಭಯ..... ಕೊಲೆಗಳು....
ಅರಾಜಕತೆ...

(ಮುಂದಿನ ಸಂಚಿಕೆಯಲ್ಲಿ)

ಕಾರ್ಮಿಕ ಇಲಾಖೆಯ ಸಭೆಯೂ ಕಾರ್ಮಿಕರ ಸಮಸ್ಯೆಗಳ ಚರ್ಚೆಯೂ....

ಕಾರ್ಮಿಕ ಇಲಾಖೆಯು ಕಾರ್ಮಿಕರ ಸಮಸ್ಯೆಗಳ ಕುರಿತು ಚರ್ಚಿಸುವ ಸಲುವಾಗಿ ಬೆಂಗಳೂರಿನಲ್ಲಿ ಸಭೆಯೊಂದನ್ನು ಕರೆದಿತ್ತು.

ಇದೇ ಫೆಬ್ರವರಿ ಒಂದನೇ ತಾರೀಖಿನಂದು ಕಾರ್ಮಿಕ ಸಚಿವರಾದ ಎ.ಎಂ.ಹಿಂಡಸಗೇರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳಾದ ಬುಳ್ಳಾ ಸುಬ್ಬರಾವ್, ಕಾರ್ಮಿಕ ಆಯುಕ್ತರಾದ ಲೂಕೋಸ್ ವಲ್ಲತರೈ, ಅಪರ ಕಾರ್ಮಿಕ ಆಯುಕ್ತರಾದ ಸಿ.ಎಂ. ಸೀತಮದಿ ಹಾಗೂ ಎನ್. ಗೋವಿಂದರೆಡ್ಡಿ, ಉಪ ಕಾರ್ಮಿಕ ಆಯುಕ್ತರಾದ ಎಸ್. ನರಸಿಂಹಮೂರ್ತಿ ಮುಂತಾದವರು ಹಾಜರಿದ್ದರು.

ಕಾರ್ಮಿಕರ ಪರವಾಗಿ ಸಿಐಟಿಯುವಿನ ಎಸ್. ಸೂರ್ಯನಾರಾಯಣರಾವ್, ವಿ.ಜೆ.ಕೆ. ನಾಯರ್, ಎ.ಐ.ಟಿ.ಯು.ಸಿ.ಯ ನರಸಿಂಹನ್ ಅನಂತಸುಬ್ಬರಾವ್ ಜೊತೆಗೆ ಬಿಎಂಎಸ್., ಹೆಚ್‌ಎಂಎಸ್ ಸಂಘಗಳ ಮುಖಂಡರು ವ್ಯಕ್ತಿಗತ ಸಂಘಟನೆಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಕಳೆದ ವರ್ಷವೂ ಸಹ (29.1.2000) ಇಂಥದೇ ಸಭೆಯನ್ನು ಕರೆದು ಕಾರ್ಮಿಕರ ಸಮಸ್ಯೆಗಳ ಕುರಿತು ಗಂಟೆಗಟ್ಟಲೆ ಚರ್ಚಿಸಲಾಗಿತ್ತು. ಮತ್ತೆ ಒಂದು ವರ್ಷಕ್ಕೆ ಸರಿಯಾಗಿ ಕಾರ್ಮಿಕ ಇಲಾಖೆ "ಸಭೆಯ ವಾರ್ಷಿಕೋತ್ಸವವನ್ನು" ನಡೆಸಿತು. ಗಣೇಶೋತ್ಸವದ ರೀತಿಯಲ್ಲಿ ಪ್ರತಿ ವರ್ಷ ಕಾರ್ಮಿಕರ ಸಭೆ ನಡೆಸುವ ಉದ್ದೇಶ ಕಾರ್ಮಿಕ ಇಲಾಖೆಗಿರಬಹುದೇನೋ.

ಸಭೆ ನಡೆದದ್ದೇನೋ ಸಂತೋಷ. ಕಾರ್ಮಿಕರ ಸಮಸ್ಯೆಗಳ ಕುರಿತು ಸಭೆ ಕರೆದಿದ್ದೂ ಇನ್ನೂ ಸಂತೋಷ, ಆದರೆ ಸಭೆಗಳಲ್ಲಿ ಚರ್ಚೆಯಾಗುವ ಸಮಸ್ಯೆಗಳಿಗೆ ಕಾರ್ಮಿಕ ಮುಖಂಡರ ಸಲಹೆ, ಸೂಚನೆಗಳು ಅಭಿಪ್ರಾಯಗಳಿಗೆ ಮಾತ್ರ ಮೋಕ್ಷವಿಲ್ಲವಷ್ಟೆ. ಸಭೆಯ ನಡವಳಿಕೆಗಳನ್ನು ಸರ್ಕಾರಿ ಮಟ್ಟದಲ್ಲಿ ದಾಖಲಿಸಿದ ವರದಿಗಳು ಮಾತ್ರ ಕಾರ್ಮಿಕರಿಗೆ ದಕ್ಕುತ್ತವೆಯೇ ವಿನಃ ಜಾರಿಯ ಕುರಿತು ಮಾತೆತ್ತುವಂತಿಲ್ಲ. ಹೀಗಾಗಿ ಮತ್ತೊಂದು ವಾರ್ಷಿಕ ಸಭೆ ಕಾರ್ಮಿಕ ಮುಖಂಡರ ಸಿಟ್ಟಿಗೆ ಗುರಿಯಾಗಬೇಕಾಯಿತು.

ಸಭೆಯ ಪ್ರಾರಂಭದಲ್ಲಿ ಚರ್ಚೆ ನಡೆಸುತ್ತಾ ಸಿಐಟಿಯು ವಿನ ರಾಜ್ಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್‌ರವರು ಈ ಕುರಿತು ಕಟುವಾಗಿಯೇ ಮಾತನಾಡಿದರು.

ಸಭೆ ಆಯೋಜಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ ಔಪಚಾರಿಕವಾಗಿ ಕೇವಲ ಸಭೆಗಳಾದರೆ ಪ್ರಯೋಜನವಿಲ್ಲ. ಕಾರ್ಮಿಕ ಮುಖಂಡರ ಸಲಹೆ ಸೂಚನೆ ಸಭೆಯ ತೀರ್ಮಾನಗಳನ್ನು ಜಾರಿಗೊಳಿಸಬೇಕು. ಅಸಂಘಟಿತ ಕಾರ್ಮಿಕರು ಕನಿಷ್ಟ ವೇತನವಿಲ್ಲದೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಅವರಿಗೆ ಕನಿಷ್ಟ ಕೂಲಿ ಸಿಗಬೇಕು. ಕನಿಷ್ಟ ಕೂಲಿ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಮುಂತಾಗಿ ಆಗ್ರಹ ಪಡಿಸಿದರು. ಸರ್ಕಾರದ ಹತ್ತಾರು ವಿಧಿ ವಿಧಾನಗಳು ಕಾರ್ಮಿಕರಿಗೆ ನ್ಯಾಯ ದೊರಕುವಲ್ಲಿ ಅಡ್ಡಗಾಲಾಕುತ್ತಾ ಇವೆ. ಕಾರ್ಮಿಕರಿಗೆ ನ್ಯಾಯ ಸಿಗುವಲ್ಲಿ ವಿಳಂಬ ಆಗ್ತಾ ಇದೆ. ಸಕಾಲಕ್ಕೆ ಅವರಿಗೆ ಪರಿಹಾರ ಸಿಗ್ತಾ ಇಲ್ಲ. ಸಂಧಾನ ಪ್ರಕ್ರಿಯೆಗಳು ಸಹ ವಿಳಂಬಗತಿಯಲ್ಲಿ ನಡೀತಾ ಇವೆ ಎಂದು ಸೂರಿಯವರು ಕಟುವಾಗಿ ದೂಷಿಸಿದರು. ಬಹುಪಾಲು ಅಸಂಘಟಿತ ಕಾರ್ಮಿಕರಿದ್ದು ಅವರಿಗೆ ಪಿ.ಎಫ್. ಗ್ರಾಚ್ಯುಟಿ, ಕನಿಷ್ಟ ವೇತನಗಳಂತಹ ಕನಿಷ್ಟ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಹತ್ತು ಹಲವು ಕಾರ್ಮಿಕ ಕಾಯ್ದೆಗಳಿದ್ದಾಗ್ಯೂ ಕಾರ್ಮಿಕರಿಗೆ ಸರಿಯಾಗಿ ಸೌಲಭ್ಯಗಳು ಸಿಗುತ್ತಿಲ್ಲ ಸರಿಪಡಿಸುವಲ್ಲಿ ಕಾರ್ಮಿಕ ಇಲಾಖೆಯ ಕ್ರಮಗಳು ತೃಪ್ತಿದಾಯಕವಾಗಿಲ್ಲವೆಂದು ದೂರಿದರು.

ಇವುಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ತನಿಖಾ ಕಾರ್ಯವನ್ನು ಚುರುಕುಗೊಳಿಸಿ ಅನಿರೀಕ್ಷಿತ ತನಿಖೆ - ದಾಳಿಗಳನ್ನು ನಡೆಸುವ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡಿದರು. ಜೊತೆಗೆ "ತ್ರಿಪಕ್ಷೀಯ ಮಂಡಳಿ" ಯನ್ನು ರಚಿಸಿ ಕಾರ್ಮಿಕರ, ಮಾಲೀಕರ ಹಾಗೂ ಇಲಾಖೆಯ ಪ್ರತಿನಿಧಿಗಳನ್ನು ಸೇರಿಸುವ ಮೂಲಕ ಕಾರ್ಮಿಕರ ಸಮಸ್ಯೆಗಳ ಕುರಿತು ಸೂಕ್ತ ಸಮಾಲೋಚನೆ ನಡೆಸಿ ಉತ್ತಮ ಪರಿಹಾರ ಕಂಡುಕೊಳ್ಳಬೇಕೆಂದು ಸಲಹೆಯಿತ್ತರು. ರಾಜ್ಯದಲ್ಲಿ ಕಾರ್ಮಿಕ-ಮಾಲೀಕರ ಕೈಗಾರಿಕಾ ಬಾಂಧವ್ಯ, ಕೈಗಾರಿಕಾ ಶಾಂತಿಯನ್ನು ಕಾಪಾಡಿಕೊಳ್ಳಲು ಸೂರಿಯವರು ಮಾರ್ಗೋಪಾಯಗಳನ್ನು ಸೂಚಿಸಿದರು.

ಪಟ್ಟಭದ್ರರ ಹಿಡಿತ ಮೂಲೆಗುಂಪಾದ ಕಾರ್ಮಿಕರ ಕಡತ

ಆದಿ ಚುಂಚನಗಿರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಕಾರ್ಮಿಕರನ್ನ ಕೆಲಸದಿಂದ ಹೊರಹಾಕಲಾಗಿದೆ. ಅಲ್ಲಿ ದುಡಿಯುತ್ತಿದ್ದ ಕಾರ್ಮಿಕರು ಕನಿಷ್ಟ ಕೂಲಿ ಕೇಳಿದ್ದೇ ತಪ್ಪಾಗಿದೆ. ಕಾರ್ಮಿಕರು ಸಂಘ ಮಾಡಿಕೊಂಡು ನೊಂದಾಯಿಸಲು ಕೋರಿ ವರ್ಷವಾಗುತ್ತಾ ಬಂದರು ಇಲಾಖೆಯಿಂದ ಪ್ರತಿಕ್ರಿಯೆ ಇಲ್ಲ. ಕಾರ್ಮಿಕರ ದಾಖಲಾತಿಗಳು ಕಡತ ಸೇರಿದಂತಾಗಿದೆ. ಆದಿ ಚುಂಚನಗಿರಿಯ ಸ್ವಾಮಿಗಳ ಪ್ರಭಾವದಿಂದಾಗಿ ನೌಕರರ ಸಮಸ್ಯೆಗಳು ಬಗೆಹರಿಯುತ್ತಿಲ್ಲ ವಜಾ ಆದ ಕಾರ್ಮಿಕರ ವಿಷಯಗಳನ್ನು ಪಂಚಾಯ್ತಿಗೆ ಒಪ್ಪಿಸಿಲ್ಲ. ಪಟ್ಟಭದ್ರ ಹಿತಾಸಕ್ತಿಗಳೇ ಮೇಲುಗೈ ಸಾಧಿಸುತ್ತಿವೆ.

ಕರ್ನಾಟಕ ಈ ವಾರ ಒಂದು ನೋಟ

ಬರೀ ಸೈಬರ್ ಅಲ್ಲ ಈಗ ಸಸ್ಪೆಂಡ್ ಕೃಷ್ಣ

ಮುಖ್ಯಮಂತ್ರಿ ಕೃಷ್ಣರವರು ಬಲು ಚುರುಕು, ಆಡಳಿತ ಪಾರದರ್ಶಕ ಮಾತ್ರವಲ್ಲ, ಪಾದರಸ. ಬೆಳಿಗ್ಗೆ 9 ರೊಳಗೆ ಓಣಿಗಳಲ್ಲಿ ಚರಂಡಿ, ನೀರು, ರಸ್ತೆ ನೋಡುತ್ತಾರೆ. ಜನ ಮುಗಿ ಬಿದ್ದಾಗ ತಕ್ಷಣದಲ್ಲಿ ಸಮಸ್ಯೆ ಪರಿಹಾರಕ್ಕೆ ಆದೇಶಿಸಿ ಮುಂದೆ ನಡೆಯುತ್ತಾರೆ. 9 ಗಂಟೆಗೆ ಜನತಾದರ್ಶನ. ಅಲ್ಲಿಯೂ ಸಡನ್ ಆಜ್ಞೆಗಳೇ. ಜನರಿಗೆ ಮು.ಮಂ. ಮುಖದರ್ಶನವಾದ ಖುಷಿ. ನಂತರ ಕಛೇರಿ, ಎಂಪಿಎಂಸಿ ಹೀಗೆ ದಿಢೀರ್ ಭೇಟಿ. ಹಲವು ಅಧಿಕಾರಿಗಳ ಸಸ್ಪೆಂಡ್.... ಈ ವರಸೆಗಳ್ನು ನೋಡಿದರೆ ಅದೇ ಹಳೇ ರಾಗ ಅದೇ ರೋಗದಲ್ಲೇ ನರಳುತ್ತಿರುವ ಆಡಳಿತಕ್ಕೆ ಚುರುಕಿನ ಇಮೇಜ್ ಕೊಡಲು ನಡೆಸಿದ ಪ್ರಯತ್ನಗಳು ಎಂಬುದರಲ್ಲಿ ಯಾರಿಗೂ ಅನುಮಾನವೇ ಉಳಿಯದು.

ರೈತರ ಫಸಲನ್ನು ಖರೀದಿ ಮಾಡಲು ಆದೇಶಿಸಿದ್ದರೂ ಏನೊಂದೂ ಕ್ರಮ ವಹಿಸಲಿಲ್ಲ, ಕರ್ತವ್ಯ ಲೋಪ ಎಸಗಿದ್ದಾರೆಂದು ಆಹಾರ ಇಲಾಖೆಯ ಮುಖ್ಯಸ್ಥ ಐ.ಎ.ಎಸ್. ಅಧಿಕಾರಿ ಬಿ.ಎಲ್.ಶ್ರೀಧರ ಹಾಗೂ ಇತರ ಕೆ.ಎ.ಎಸ್. ಅಧಿಕಾರಿಗಳನ್ನು ಮುಖ್ಯಮಂತ್ರಿಗಳು ಸಸ್ಪೆಂಡ್ ಮಾಡಿದ್ದಾರೆ. ಇದು ಎಲ್ಲಾ ಅಧಿಕಾರಿಗಳೂ, ಆಡಳಿತ ಯಂತ್ರಕ್ಕೂ ಎಚ್ಚರಿಕೆ ಎಂದಿದ್ದಾರೆ. ಆದರೆ ವಿವರಣೆ ಸಹ ಕೇಳದೇ ಹೀಗೆ ಮಾಡಿದ್ದರ ಬಗ್ಗೆ ಸಚಿವ ಸಂಪುಟದಲ್ಲಿಯೂ ಈ ಪ್ರಕರಣ ಭಿನ್ನಾಭಿಪ್ರಾಯಗಳಿಂದ ಕೊನೆಗೂ ಅನುಮೋದನೆ ದೊರೆತಿದೆ.



ಆದರೆ ನಿಜವಾಗಿಯೂ ಇಂತಹ ಕ್ರಮಗಳು ಆಡಳಿತವನ್ನು ಚುರುಕಗೊಳಿಸಬಲ್ಲದೇ? ಆಗುವ ತಪ್ಪುಗಳನ್ನು ತಡೆಗಟ್ಟಬಲ್ಲವೇ? ಎಂಬ ಪ್ರಶ್ನೆ ಸಹಜವಾಗಿಯೇ ಎದ್ದಿದೆ. ಆಡಳಿತವನ್ನು ಸರಿಪಡಿಸುವ, ದಕ್ಷತೆ ಹೆಚ್ಚಿಸುವುದನ್ನು ಹೀಗೆ ವೈಯಕ್ತಿಕ ನೆಲೆಯಲ್ಲಿ ಸಸ್ಪೆಂಡ್ ಮೂಲಕ, ಅದೂ ವಿಚಾರಣೆ ಇಲ್ಲದೇ ಸರಿಪಡಿಸಬಹುದು ಎಂಬುದೇ ತಪ್ಪು. ಅದರಲ್ಲಿಯೂ ಬೆದರಿಸಿ ಆಡಳಿತ ಸುಧಾರಿಸಬಹುದು ಎಂದು ತಿಳಿದಿದ್ದರೆ ಅದು ಕೇವಲ ಭ್ರಮೆ.

ಆಡಳಿತವನ್ನು ಸುಧಾರಿಸಿ ಚುರುಕಗೊಳಿಸಲು ಇಡೀ ಸರ್ಕಾರ ಸಚಿವ ಸಂಪುಟದ ರಾಜಕೀಯ ಇಚ್ಛಾಶಕ್ತಿ ಇರಬೇಕಿದೆ. ಭ್ರಷ್ಟರನ್ನು, ಅದಕ್ಷರಿಗೆ ಆಶೀರ್ವದಿಸಿ, ಸಲಹುವದಕ್ಕೆ ಕಡಿವಾಣವೂ ಬೇಕು. ಸ್ಥಳೀಯ ಸಂಸ್ಥೆಗಳನ್ನು, ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಮುಖ್ಯವಾಗಿ ಜನತೆಯಲ್ಲಿ ಜಾಗೃತಿ ತರಬೇಕು. ಅಂತಹ ಪ್ರಕರಣಗಳು ಬಯಲಾದಾಗ ನಿಷ್ಟುರ ಕ್ರಮ ಜರುಗಿಸಬೇಕು. ಜನರೊಂದಿಗೆ ಸಂವಾದ ಸಾಧ್ಯವಾಗಬೇಕು. ಇಲ್ಲವಾದರೆ ಇಂತಹ ಸಸ್ಪೆಂಡ್‌ಗಳು, (ಎಷ್ಟೇ ಬಾರಿ ಪಕ್ಷಪಾತಿಂದಲೂ ಕೂಡಿರುತ್ತವೆ) ನಂತರ ಅದರಿಂದ ಮುದ್ರೆಯೂ ಸುಲಭವಾಗಿ ಸಿಗುತ್ತದೆ. ಸ್ಥಿತಿ ಮಾತ್ರ ಯಥಾರೀತಿ ಉಳಿಯುತ್ತವೆ. ಇಷ್ಟೆಲ್ಲಾ ಮಾಡಿದ್ದರೂ ರೈತರ ಫಸಲು ಖರೀದಿಯಂತೆ? ಎಂದು ಮಾತ್ರ ಕೇಳಬೇಡಿ. ಆ ಸಮಸ್ಯೆ ಉಲ್ಬಣಗೊಂಡಿದೆ. ರೈತರ ಪರದಾಟ ನಿಂತಿಲ್ಲ. ಎಷ್ಟೋ ಜಿಲ್ಲೆಗಳಿಗೆ ಇನ್ನೂ ಆವರ್ತ ನಿಧಿಯೇ ಸರ್ಕಾರದಿಂದ ತಲುಪಲ್ಲ ಎಂಬ ಕೂಗು. 'ಸಸ್ಪೆಂಡ್' ಬೇರೆ ಕಿವಿಗೆ ಬಿದ್ದಿಲ್ಲವಂತೆ. ಪತ್ರಿಕಾ ಹೇಳಿಕೆ ನೀಡಿ ಬಿದ್ದು ಬಿಟ್ಟರೆ ಎಲ್ಲವೂ ತಾವಾಗಿಯೇ ಆಗುತ್ತದೆ ಎಂದು ಮು.ಮಂ. ಭಾವಿಸಿರಬಹುದು. ಈಗ ಸಸ್ಪೆಂಡ್ ಆಗಬೇಕಾದವರು ಯಾರು?

ಬೆಳೆಯುತ್ತಿರುವ ರೈತ ಹೋರಾಟ: ಬಾಯಿ ಬಿಡುತ್ತಿರುವ ಮಂತ್ರಿಗಳು

WTO ನಿಂದಾಗಿ 14 ಕೃಷಿ ವಸ್ತುಗಳು ಆಮದಾಗುತ್ತಿರುವುದು ಬಿಕ್ಕಟ್ಟಿಗೆ ಕಾರಣ ಎಂದು ರಾಜ್ಯದ ಕೃಷಿ ಸಚಿವ ಜಯಚಂದ್ರ ಸತ್ಯವನ್ನು ಬಾಯಿ ಬಿಡಲೇಬೇಕಾಗಿ ಬಂಧಿದೆ. ಕೇಂದ್ರ ನೀತಿಗಳು ರೈತರ ಸಂಕಷ್ಟಗಳಿಗೆ ಕಾರಣವೆಂದು ಹೇಳತೊಡಗಿದ್ದಾರೆ. ಕೃಷ್ಣರವರು 7 ರಂದು ದಿಡೀರನೇ ಕೃಷಿ ಮಾರುಕಟ್ಟೆಗೆ ಭೇಟಿ ನೀಡಿ ಡಬ್ಲ್ಯುಟಿಓ ಒಪ್ಪಂದಗಳ ಬಗ್ಗೆ ಚರ್ಚೆ ನಡೆಯಬೇಕೆಂದು ಹೇಳಿಕೆ ನೀಡಿದ್ದಾರೆ. ಈ ಜ್ಞಾನೋದಯಕ್ಕೆ ಕಾರಣವೇನು? ಹೇಗೆ ಇವರೆಲ್ಲಾ ಬಾಯಿ ಬಿಡಬೇಕಾಗಿ ಬಂದಿದೆ. ರಾಜ್ಯದಲ್ಲಿ ರೈತರ ಸಂಕಷ್ಟಗಳು ಹೆಚ್ಚುತ್ತಿರುವ ಹಾಗೂ ಚಳುವಳಿಯಾಗಿ ಆಸ್ಫೋಟಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಎಂಬುದೇ ಗಮನಾರ್ಹ. ಈಗ ಆಳುವವರು ಪ್ರಕ್ರಿಯಿಸಲೇ ಬೇಕಾಗಿ ಬಂದದ್ದು ಚಳುವಳಿಯ ಸಾಧನೆ.

ಎಸ್.ವೈ.ಗುರುಶಾಂತ್

ಡಬ್ಲ್ಯುಟಿಓ ಅನಾಹುತಗಳನ್ನು ಅರ್ಥಮಾಡಿಕೊಳ್ಳಲು ಇಷ್ಟು ಕಾಲ ಬೇಕಿತ್ತೇ ಎಂಬುದೇ ಪ್ರಶ್ನೆ. ಗೊತ್ತಿದ್ದರೂಹೇಳದೇ ಜನರಿಂದ ಮರೆಮಾಚುವ, ಡಬ್ಲ್ಯುಟಿಓ, ವಿಶ್ವಬ್ಯಾಂಕಿನ ಧಣಿಗಳ ಅಣತಿ ಪಾಲಿಸಲು ಕಟಿ ಬದ್ಧರಾಗಿರುವ ಇವರ ಸೋಗು ಅರ್ಥವಾಗದಿರುವಂತದಲ್ಲ. ಮೊದಮೊದಲು ಮಾರುಕಟ್ಟೆ ಸಮಸ್ಯೆಯನ್ನು ತಾವೇ ಬಗೆಹರಿಸುತ್ತೇವೆಂದು, ಅದಕ್ಕಾಗಿ ಆವರ್ತನಿಧಿಯ ನೀಡಿಕೆಯನ್ನು ಪ್ರಕಟಿಸಿ ರಾಜ್ಯದ ತುಂಬಾ ಓಡಾಡಿದರು. ಆದರೆ ಸಮಸ್ಯೆಯನ್ನು ಪರಿಹರಿಸಲು ಅಸಮರ್ಥರಾದರು. ಇಷ್ಟೆಲ್ಲಾ ಅನಾಹುತಗಳಿದ್ದರೂ, ಕೇಂದ್ರ ಸರ್ಕಾರದ ವಿರುದ್ಧ ಈಗಲೂ ಪರ್ಯಾಯ ಮಾರ್ಗಗಳಿಗಾಗಿ ಹೋರಾಡಲು ಸಿದ್ದರಿಲ್ಲ.

ಡಬ್ಲ್ಯುಟಿಓ ನೀತಿಗಳ ವಿರುದ್ಧ ಜನಜಾಗೃತಿ ಮೂಡಿಸುತ್ತಿಲ್ಲ. ಮೂಲಭೂತವಾಗಿ ಈ ಜಾಗತೀಕರಣ, ಉದಾರೀಕರಣದ ಉರುಳಿಗೆ ರಾಜ್ಯದ-ದೇಶದ ಜನರ ಕೊರಳು ಕೊಡುವುದನ್ನು ತಡೆಯಬೇಕು. ಈ ನೀತಿಗಳನ್ನು ಕಾಂಗ್ರೆಸ್ ಇಂದಿಗೂ ಕೈ ಬಿಟ್ಟಿಲ್ಲ.

ಮಾತಿನಲ್ಲಿ ವಿರೋಧ, ಕೃತಿಯಲ್ಲಿ ಜಾರಿ ಮಾಡುವ ಎಡಬಿಡಂಗಿತನ ಬಿಡಬೇಕು.

ಬಜೆಟ್: ಉಳ್ಳವರೊಂದಿಗೆ ಚರ್ಚೆ ಜನಸಾಮಾನ್ಯರಿಗೆ ಬಾರೇಟು ಹಾಕಲು ಸಿದ್ಧತೆ:

ಅತ್ತ ವಾಜಪೇಯಿ ಯವರು ವಾರ್ಷಿಕ ಬಜೆಟ್ ತಯಾರಿಸಲು ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು, ಬಹು ರಾಷ್ಟ್ರೀಯ ಕಂಪನಿಗಳು ಹಾಗೂ ದೇಶದ ದೊಡ್ಡ ಬಂಡವಾಳಗಾರರೊಂದಿಗೆ ಸಮಾಲೋಚನೆ ಆರಂಭಿಸಿದ್ದಾರೆ. ಇತ್ತ ಕೃಷ್ಣರವರು ಬಜೆಟ್ ಮುನ್ನ ರಾಜ್ಯದ ಉದ್ದಿಮೆದಾರರೊಂದಿಗೆ ಚರ್ಚೆ ಮಾಡಿದ್ದಾರೆ. ಸಣ್ಣ ಉದ್ದಿಮೆದಾರರೇನೋ ತಮ್ಮ ಕಷ್ಟಗಳನ್ನು ಹೇಳಿಕೊಂಡಿದ್ದಾರೆ. ಒಟ್ಟಾರೆ ಹೆಚ್ಚಿನ ತೆರಿಗೆ ಹಾಕುವ ಇಂಗಿತವನ್ನು ಮುಖ್ಯಮಂತ್ರಿಗಳು ವ್ಯಕ್ತಪಡಿಸಿದ್ದಾರೆ. ಆದರೆ ಬಜೆಟ್ ಪೂರ್ವದಲ್ಲಿ ಭೂಕಂಪ ನೆಪವಾಗಿರಿಸಿ ಹಲವಾರು ಹೊಸ ತೆರಿಗೆಗಳ ಪ್ರಸ್ತಾಪವನ್ನು ಕೇಂದ್ರ ಸರ್ಕಾರ ಮಂಡಿಸಿರುವಾಗಲೇ, ರಾಜ್ಯದಲ್ಲಿಯೂ ಹೊಸ ಸಂಪನ್ಮೂಲ ಕ್ರೋಢೀಕರಿಸಲು ಇರಾದೆ ಇದ್ದಂತಿಲ್ಲ. ಇಬ್ಬರೂ ಮತ್ತೇ ಜನಸಾಮಾನ್ಯರಿಗೆ ಹೊರೆ ಹಾಕಲು ಸಿದ್ಧವಾಗುತ್ತಿದ್ದಾರೆ.

ಈ ಬಜೆಟ್‌ಗಳು ಸಿದ್ಧಗೊಂಡು ಮಂಡನೆಗೆ ಅಂತಿಮಗೊಳ್ಳುವುದು ಐಎಂಎಫ್, ವಿಶ್ವಬ್ಯಾಂಕಿನ ಅಣತಿಗಳ ಅಂಗೀಕಾರದ ನಂತರವೇ ಎಂಬುದು ಸತ್ಯವಾದರೂ, ದೇಶದ ಉಳ್ಳವರ ಜೊತೆಗಿನ ಸಂವಾದವೇ ಸರ್ಕಾರ ಯಾರ ಹಿತ ಕಾಪಾಡ ಬಯಸುತ್ತದೆ ಎಂಬುದನ್ನು ಸೂಚಿಸುತ್ತದೆ. ಉದ್ದಿಮೆದಾರರಂತೆ ರೈತ-ಕೂಲಿಕಾರ, ಕಾರ್ಮಿಕ, ಯುವಜನ ವಿಭಾಗಗಳೊಂದಿಗೆ ಯಾಕೆ ಸಮಾಲೋಚಿಸುತ್ತಿಲ್ಲ? ಕೇಂದ್ರ - ರಾಜ್ಯ ಸರ್ಕಾರಗಳು ಬವಣೆಗಳಿಂದ ತತ್ತರಿಸುತ್ತಿರುವ ಜನಸಾಮಾನ್ಯರನ್ನೇ ಹಿಂಡಲು ಹಾತೊರೆಯುತಿರುವದು ❍

→

ಬೀಡಿ ಕಾರ್ಮಿಕರಿಗೆ ತಿಂಗಳಿಗೆ 3 ದಿವಸ ಕೆಲಸ ಇಲ್ಲ ಕನಿಷ್ಠ ಕೂಲಿ ನಿಗದಿ ಮಾಡಿಲ್ಲ. ಮಾಲಕ ವರ್ಗ ಹೈಕೋರ್ಟಿಗೆ ಅಪೀಲು ಹಾಕಿದಾಗ ಕಾರ್ಮಿಕ ಕಾರ್ಯದರ್ಶಿಗಳು ಅಡಿಷನಲ್ ಜನರಲ್ ಜೊತೆ ಮಾತುಕತೆಮಾಡಿ ಕೋರ್ಟಿನ ತಡೆಯಾಜ್ಞೆಯನ್ನು ತೆರವು ಮಾಡಿಸಲಿಲ್ಲ.

ಬಿಪಿಎಲ್ ಕಾರ್ಮಿಕರ ತಾತ್ಕಾಲಿಕ ಪರಿಹಾರವನ್ನು ಪರಿಶೀಲಿಸಿ ಹೈಕೋರ್ಟ್ ಪೀಠ ಹೇಳಿಕೆ ಹೊರಡಿಸಿದ್ದರು. ಪದೇ ಪದೇ ಒತ್ತಾಯಿಸಿದ್ದರೂ ಕ್ರಮ ವಹಿಸಿಲ್ಲ. ಸೌಜನ್ಯಕ್ಕಾದರೂ ಈ ಕುರಿತು ಮಾತನಾಡಿಲ್ಲ.

ಬೆಂಗಳೂರಿನ 70-80 ಸಾವಿರ ಪವರ್‌ಲೂಂ ಕಾರ್ಮಿಕರಿಗೆ ಹಾಜರಾತಿ ಪುಸ್ತಕವಿಲ್ಲ. ಹಾಜರಾತಿ ಪುಸ್ತಕವಿಡುವಂತೆ ಕಾರ್ಮಿಕ ಇಲಾಖೆ ಒತ್ತಾಯಿಸುತ್ತಿಲ್ಲ. ಅದೇ ರೀತಿ ರಾಯಚೂರು ಕೊಪ್ಪಳ ಜಿಲ್ಲೆಗಳಲ್ಲಿ 70 ರಿಂದ 80 ಅಕ್ಕಿಗಿರಣಿಗಳಿದ್ದು ಒಂದೊಂದರಲ್ಲಿ 50 ರಿಂದ 60 ಕಾರ್ಮಿಕರು ದುಡಿಯುತ್ತಿದ್ದಾರೆ. ಇಲ್ಲೂ ಸಹ ಕಾರ್ಮಿಕರಿಗೆ ಹಾಜರಾತಿ ಪುಸ್ತಕವಿಲ್ಲ. ಸರ್ಕಾರ ಸಂಬಳದ ಪ್ರಶ್ನೆಯನ್ನು ಇತ್ಯರ್ಥಪಡಿಸುವುದಿರಲಿ ಪ್ರಾಥಮಿಕ ಕೆಲಸಗಳನ್ನೂ ಮಾಡುತ್ತಿಲ್ಲ. ಮುಂತಾಗಿ ಸಿಐಟಿಯುವಿನ ಸೂರಿಯವರು ಸಭೆಯಲ್ಲಿ ಕಟುವಾಗಿ ದೂರಿದರು.

ಗುತ್ತಿಗೆ ಕಾರ್ಮಿಕರು ಕ್ಯಾಂಟೀನ್‌ನಲ್ಲಿ ಕೆಲಸ ಮಾಡುವುದನ್ನು ಖಾಯಂ ಮಾಡಲು ರಾಜ್ಯ ಸರ್ಕಾರ ಮತ್ತು ಹೈ ಕೋರ್ಟ್ ತೀರ್ಮಾನಿಸಿದೆ. ಆಡಳಿತ ವರ್ಗ ಸುಪ್ರಿಂ ಕೋರ್ಟ್‌ನಲ್ಲಿ ದಾವೆ ಹೂಡಿದೆಯೆಂದು ತಿಳಿಸಿ, ತಡೆಯಾಜ್ಞೆ ಇಲ್ಲದಿದ್ದರೂ ನೌಕರರನ್ನು ಖಾಯಂಗೊಳಿಸುವ ಕೆಲಸ ಮಾಡುತ್ತಿಲ್ಲ. ರಾಜ್ಯ ಕೇಂದ್ರ ಸರ್ಕಾರಗಳ ಸ್ವಾಮ್ಯದಲ್ಲಾದರೂ ಜಾರಿಗೊಳಿಸಲೇಬೇಕಲ್ಲವೆ. ಏಕೆ ಜಾರಿಮಾಡಿಲ್ಲವೆಂದು ಸೂರಿಯವರು ಕಾರ್ಮಿಕ ಸಚಿವರಿಗೆ ಪ್ರಶ್ನಿಸಿದಾಗ ಸರ್ಕಾರದ ಪರವಾಗಿ ಉತ್ತರವೇ ಬರಲಿಲ್ಲ.

ಹೀಗಾಗಿ ಸರ್ಕಾರ ಪಟ್ಟಭದ್ರ ಹಿತಗಳ ದೊಡ್ಡ ಬಂಡವಾಳಗಾರರ ಹಿಡಿತದಲ್ಲಿರುವುದರಿಂದ ಕಾರ್ಮಿಕ ವರ್ಗ ಐಕ್ಯ ಹೋರಾಟ ನಡೆಸದೆ ಅವರ ಯಾವ ಸಮಸ್ಯೆಗಳು ಬಗೆಹರಿಯುವುದಿಲ್ಲ. ಮಂತ್ರಿಗಳು ಸಭೆ ಕರೆಯುವುದು ಒಳ್ಳೆಯದು ಆದರೆ ಕಾರ್ಮಿಕರ, ಮುಖಂಡರ ಅಭಿಪ್ರಾಯವನ್ನು ಆಲಿಸಿದ ನಂತರ ಕ್ರಮ ತೆಗೆದುಕೊಳ್ಳದೆ ಹೋದರೆ ಸಭೆಗಳಿಂದ ಯಾವ ಪ್ರಯೋಜನವೂ ಇಲ್ಲವೆಂದು ಸೂರಿಯವರು ಅಭಿಪ್ರಾಯ ಪಟ್ಟರು.

ವರದಿ **ಎನ್. ಪ್ರಭಾವತಿ.**

ವಿಜೆಕೆ ಯವರಿಂದ ಸಿಐಟಿಯು ಪರವಾಗಿ ಸಚಿವರಿಗೆ ಸಮಸ್ಯೆಗಳ ಟಿಪ್ಪಣಿ

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿಜೆಕೆ ನಾಯರ್‌ರವರು ಸಭೆಯಲ್ಲಿ ಮಾತನಾಡಿ, ಕಾರ್ಮಿಕ ಸಚಿವಾಲಯದಿಂದ ಒಂದು ಅಧಿಸೂಚನೆ ಹೊರಡಲಿಕ್ಕೆ 7 ವರ್ಷ ಸಮಯ ತೆಗೆದುಕೊಂಡ ಉದಾಹರಣೆ ನಮ್ಮ ಮುಂದಿದೆ. ಹೆಂಚು ಉದ್ದಿಮೆಯಲ್ಲಿನ ದುಡಿಮೆಗಾರರಿಗೆ ಕನಿಷ್ಟ ವೇತನ ಪರಿಷ್ಕರಿಸುವ ಪ್ರಕ್ರಿಯೆ ಶುರುವಾದದ್ದು 1993 ರಲ್ಲಿ ಅಧಿಸೂಚನೆ ಹೊರಟದ್ದು 1999ರಲ್ಲಿ ಈ ಅವಧಿಯಲ್ಲಿ 3 ಸಲ ವೇತನ ಪರಿಷ್ಕರಣೆ ನಡೆಯಬೇಕೆಂಬುದನ್ನು ಸಚಿವರ ಹಾಗೂ ಸಭೆಯ ಗಮನಕ್ಕೆ ತಂದರು.

ಗುತ್ತಿಗೆ ಕಾರ್ಮಿಕರನ್ನು ಖಾಯಂ ಮಾಡುವ ಕುರಿತು ತೀರ್ಮಾನಗಳಿದ್ದರು 20 ವರ್ಷಗಳ ಹಿಂದೆಯೇ ಕಾನೂನುಗಳು ಬಂದಿದ್ದರು. ಸರ್ಕಾರಿ ಸ್ವಾಮ್ಯದ ಮೈಸೂರು ಪೇಪರ್ ಮಿಲ್‌ನಲ್ಲೇ ಗುತ್ತಿಗೆ ಕಾರ್ಮಿಕ ಪದ್ದತಿ ಚಾಲ್ತಿಯಲ್ಲಿದೆಯೆಂದು ದೂರಿದರು.

ಸ್ಟೀಲ್ ರೋಲಿಂಗ್ ಮಿಲ್‌ಗಳಲ್ಲಿ ಗುತ್ತಿಗೆ ಪದ್ದತಿ ರದ್ದಾಗಿದೆ. ಮಾಲೀಕರು ಸುಪ್ರೀಂ ಕೋರ್ಟ್‌ಗೆ ಹೋದದ್ದರಿಂದ ಸರ್ಕಾರ ರದ್ದತಿ ಆದೇಶವನ್ನು ತಾನಾಗೇ ಹಿಂತೆಗೆದುಕೊಂಡಿದೆ.

ಸ್ಪಿನ್ನಿಂಗ್ ಮಿಲ್ಸ್‌ಗಳಿಗೆ ಕನಿಷ್ಠ ಕೂಲಿ ಜಾರಿಗೆ ಬಂದಿದೆ. ಸಹಕಾರಿ ಇಲಾಖೆ ಜಾರಿ ಮಾಡುತ್ತಿಲ್ಲ. ಲೇಬರ್ ಇಲಾಖೆ ಇದು ನಮಗೆ ಸೇರಿದ್ದಲ್ಲ ಎನ್ನುತ್ತಿದೆ. ಬಿಪಿಎಲ್ ಕಾರ್ಮಿಕರ ವಿಷಯವಾಗಿ ನ್ಯಾಯಮೂರ್ತಿ ಗೋಪಾಲಗೌಡರ ಆದೇಶ ಇದೆ, ಆದರೆ ಮಧ್ಯಂತರ ಪರಿಹಾರ ಜಾರಿಯಾಗಿಲ್ಲ. ಹೆಜ್ಜಾಲದ ಫೈರಿಂಗ್ ಘಟನೆ ನಡೆದು ನಾಲ್ಕು ವರ್ಷ ಕಳೆದಿವೆ. ಮೂವರು ಸತ್ತರು. ಜಸ್ಟೀಸ್ ಹಿರೇಮಠರ ನೇತೃತ್ವದಲ್ಲಿ ನ್ಯಾಯಾಂಗ ತಿನಿಖೆ ನಡೆದಿದೆ. ಆದರೆ ತನಿಖೆಯ ವರದಿಯನ್ನು ಸರ್ಕಾರ ಪ್ರಕಟಿಸುತ್ತಿಲ್ಲ. ಹೆಜ್ಜಾಲ ಘಟನೆ ನಡೆದಾಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ನ್ಯಾಯಾಂಗ ತನಿಖೆಗೆ ತಾನೂ ಒತ್ತಾಯಪಡಿಸಿತ್ತು ಈಗ ವರದಿಯನ್ನು ಯಾಕೆ ಬಹಿರಂಗ ಪಡಿಸುತ್ತಿಲ್ಲ ಮುಂತಾದ ಪ್ರಶ್ನೆಗಳನ್ನು ಎತ್ತಿದ್ದಾರೆ.

ಸಿದ್ದಾರ್ಥ ಮೆಡಿಕಲ್ ಕಾಲೇಜಿನಲ್ಲಿ ದುಡಿಯುತ್ತಿರುವ ನೌಕರರಿಗೆ ಕನಿಷ್ಠ ಕೂಲಿ ಜಾರಿಯಾಗಿದೆ. ಆದರೆ ದಾಖಲೆ ಇಲ್ಲ. ಗುತ್ತಿಗೆ ಪದ್ದತಿಯನ್ನು ಪ್ರತಿಪಾದಿಸಲಾಗುತ್ತಿದೆ. ಸಾಲದೆಂಬಂತೆ ಸಂಘದ ಮುಖಂಡರ ಮೇಲೆ ಕೇಸುಗಳನ್ನು ಹಾಕಲಾಗಿದೆ. ಕರ್ತವ್ಯ ಮಾಡಲು ಅಡ್ಡಿಪಡಿಸಲಾಯಿತೆಂದು ದೂರಿ ಸಂಘದ ಮುಖಂಡರನ್ನು ಸ್ವತಃ ಇನ್ಸ್ಪೆಕ್ಟರೆ ಜೈಲಿಗೆ ತಳ್ಳಿದ್ದರು ಎಂದು ಆರೋಪಿಸಿದರು ವಿಜೆಕೆ ನಾಯರ್.

ಆದಿ ಚುಂಚನಗಿರಿ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಕನಿಷ್ಠ ಕೂಲಿ ಕೇಳಿದ ತಪ್ಪಿಗೆ ಕಾರ್ಮಿಕರನ್ನು "ಕರುಣಾಮಯಿಗಳು" ನಿಷ್ಕರುಣೆಯಿಂದ ಕೆಲಸದಿಂದ ಹೊರ ಹಾಕಿದ್ದಾರೆ. ಲೋಕೋದ್ದಾರಕರಿಂದ ಕನಿಷ್ಠ ಕೂಲಿ ಜಾರಿ ಮಾಡಿಸಲು ಸಾಧ್ಯವಾಗಿಲ್ಲ. ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ 97 ರಿಂದ ಜಾರಿಯಾಗಿಲ್ಲ. ಈ ಎಲ್ಲಾ ಸಮಸ್ಯೆಗಳನ್ನು ಗಮನಿಸಿ ಕಾರ್ಮಿಕ ಇಲಾಖೆ, ಸಚಿವಾಲಯ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳಬೇಕೆಂದು ಸಿಐಟಿಯು ಪರವಾಗಿ ವಿಜೆಕೆ ಟಿಪ್ಪಣಿ ನೀಡಿದರು.

ಕಾರ್ಮಿಕ ಇಲಾಖೆಯೆಂಬುದು ಅನಾಲಾಯಕ್ಕಾಗಿ ವರ್ತಿಸುತ್ತಿದೆ. ಕಾರ್ಮಿಕರಿಗೆ ಫಲ ಸಿಗುತ್ತಿಲ್ಲವೆಂದು ಐಕ್ಯರಂಗದೊಂದಿಗೆ ಅಭಿಪ್ರಾಯಪಟ್ಟ ಇಬ್ಬರೂ ಮುಖಂಡರು ಈ ರೀತಿಯ ಸಭೆಗಳಿಂದ ಹೆಚ್ಚೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲವೆಂದು ತಿಳಿಸಿ ಕಾರ್ಮಿಕರು ಸಂಘಟಿತ ತೀವ್ರ ಹೋರಾಟಕ್ಕೆ ಸಜ್ಜಾಗದೆ ವಿಧಿ ಇಲ್ಲವೆಂದರು

ಶುಲ್ಕ ಏರಿಕೆಯ ಅಬ್ಬರ-ಉಬ್ಬರ - ಅಬ್ಬಬ್ಬ! ಏನಿದು! ಈ ಶುಲ್ಕ ಏರಿಕೆ!

1999-2000 ದ ಇಸವಿಯಲ್ಲಿ ಶಿಕ್ಷಣ ರಂಗದ ವಿವಿಧ ವಿಭಾಗಗಳಲ್ಲಿ ಶುಲ್ಕಗಳು ಹೆಚ್ಚಿದವು ಹಾಗೂ 2000-2001 ರ ಶೈಕ್ಷಣಿಕ ವರ್ಷದಲ್ಲಿ ವಿವಿಧ ಶಿಕ್ಷಣ ಶುಲ್ಕಗಳು ಎಷ್ಟಾಗಿವೆ ಎಂಬ (ವಿವರಗಳನ್ನು ಪಟ್ಟಿಯಲ್ಲಿ ಕೊಡಲಾಗಿದೆ) ಪಟ್ಟಿಯನ್ನು ಇಲ್ಲಿ ಕೊಡಲಾಗಿದೆ. ಈ ಸಂದರ್ಭದಲ್ಲಿ ನಾವು ಈಗಲೇ ಒಂದು ಎಚ್ಚರಿಕೆಯನ್ನು ನೀಡಿ ಬಿಡುತ್ತೇವೆ. ಈ ಲೇಖನ ಮುದ್ರಣಗೊಂಡು ಪತ್ರಿಕೆ ನಿಮ್ಮ ಸೇರುವ ಮುನ್ನ ಇನ್ನೂ ಹಲವು ಶುಲ್ಕಗಳಲ್ಲಿ ಏರಿಕೆಯಾದಲ್ಲಿ ನಿಮಗೆ ಅಪೂರ್ಣ ಮಾಹಿತಿ ಒದಗಿಸಿದ ಜವಾಬ್ದಾರಿ ನಮ್ಮದಲ್ಲ.

ಉಸಿರುಗಟ್ಟಿಸಲಾಗುತ್ತಿದೆ.

ಶಿಕ್ಷಣರಂಗದ ಮೇಲಿನ ಧಾಳಿಗಳಿಗೆ ಮೊತ್ತಮೊದಲ ಬಲಿ ವಿಶ್ವವಿದ್ಯಾಲಯಗಳು. ವಿಶ್ವ ವಿದ್ಯಾಲಯ ಧನ ಸಹಾಯ ಆಯೋಗ ಯುಜಿಸಿ ಗೆ ಕೇಂದ್ರ ಸರ್ಕಾರ ಕಳೆದ ಶೈಕ್ಷಣಿಕ ಸಾಲಿನಲ್ಲಿ ಶೇ 40 ರಷ್ಟು ಹಣವನ್ನು ಕಡಿತ ಮಾಡಿದೆ. ಸರ್ಕಾರದ ಹಣಕಾಸು ಕಡಿತ ನೀತಿಯಿಂದ ವಿಶ್ವವಿದ್ಯಾಲಯಗಳು ತತ್ತರಿಸಿವೆ. ಶೈಕ್ಷಣಿಕ ಪ್ರವಾಸ ರದ್ದು, ಎಂ.ಫಿಲ್ ಕೋರ್ಸ್ ರದ್ದು, ಸಂಶೋಧನಾ ಕೋರ್ಸುಗಳಲ್ಲಿ ಪ್ರವೇಶಾವಕಾಶಗಳ ಕಡಿತ, ಇಂತಹವು ವಿಶ್ವ

ಆರ್.ರಾಮಕೃಷ

ವಿಭಾಗ	1999-2000ರಲ್ಲಿ	2000-2001ರಲ್ಲಿ
ಮಾಧ್ಯಮಿಕ ಶಾಲೆ (ಸರ್ಕಾರಿ)	14-00	30-00
ಪ್ರೌಢಶಾಲೆ (ಸರ್ಕಾರಿ)	65-00	140-00
ಪದವಿ (ಸರ್ಕಾರಿ)	360-00	865-00
ಟಿ.ಸಿ.ಹೆಚ್. ಸರ್ಕಾರಿ	1325-00	2100-00
ಅನುದಾನಿತ - ಕಾಲೇಜಿನ ಶುಲ್ಕ	2075-00	8,100-00
ಬಿಎಡ್-ಸರ್ಕಾರಿ	3000-00	5,125-00
ಅನುದಾನಿತ ಕಾಲೇಜಿನ ಪಾವತಿ ಶುಲ್ಕ	4500-00	13,000-00
ಅನುದಾನರಹಿತ ಕಾಲೇಜಿನ ಪಾವತಿ ಶುಲ್ಕ	6,500-00	35,000-00
ಪಾಲಿಟೆಕ್ನಿಕ್ ಸರ್ಕಾರಿ ಬೋಧನ ಶುಲ್ಕ	210-00	16,00-00
ಇಂಜಿನಿಯರಿಂಗ್ ಸರ್ಕಾರಿ	5,720-00	11,740-00
ಖಾಸಗಿ ಪಾವತಿ ಸೀಟುಗಳು	25,000-00	44,000-00

ಅಬ್ಬಬ್ಬ!! ಏನಿದು ಈ ಶುಲ್ಕ ಏರಿಕೆ. ಪ್ರಾಥಮಿಕ ಹಂತದಿಂದ ಆರಂಭಿಸಿ, ಸ್ನಾತಕೋತ್ತರದವರೆಗೆ ಒಂದಲ್ಲ, ಎರಡಲ್ಲ ಮೂರು ನಾಲ್ಕು.... ಆರು, ಏಳು ಪಟ್ಟು ಏರಿಕೆ!!

ನುಂಗಲಾರದ ಬಿಸಿತುಪ್ಪವಾಗಿದೆ ನಮ್ಮ ಶಿಕ್ಷಣ

ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕೊಡುವು ಎಂದು ಸಾರಲಾಗುತ್ತಿದ್ದ ಪ್ರಾಥಮಿಕ ಹಂತದಲ್ಲಿ ಸರಕಾರಿ ಶಾಲೆಗಳಲ್ಲಿ 14 ರೂ.ಗಳಿದ್ದು ವಾರ್ಷಿಕ ಶುಲ್ಕ ಈ 30 ರೂ.ಗಳಿಗೆ ಏರಿಸಲಾಗಿದೆ. ಇದೇ ರೀತಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಇದುವರೆಗೆ 65 ರೂ. ಶುಲ್ಕವನ್ನು 140 ರೂ.ಗಳಿಗೆ ಏರಿಸಲಾಗಿದೆ. ಸರ್ಕಾರಿ ಪದವಿ ಕಾಲೇಜುಗಳಲ್ಲಿ (ವಿಶ್ವವಿದ್ಯಾಲಯಗಳ ನೊಂದಣಿ ಶುಲ್ಕ ಪರಿಕ್ಷಾ ಶುಲ್ಕ ಹೊರತುಪಡಿಸಿ) 360 ರೂ. ಇದ್ದ ಶುಲ್ಕ ಈಗ 865 ರೂ.ಗೆ ಏರಿಸಲಾಗಿದೆ. ಸರ್ಕಾರಿ ಟಿ.ಸಿ.ಎಚ್. ಗಳಲ್ಲಿ 1325 ರೂ. ಇದ್ದ ಶುಲ್ಕ ಈಗ 2100 ಆಗಿದ್ದರೆ ಇದೇ ಶುಲ್ಕ ಖಾಸಗಿ ಅನುದಾನಿತ ಟಿಸಿಎಚ್ ಕಾಲೇಜಿನಲ್ಲಿ 2,075 ರೂನಿಂದ 8,100 ರೂ.ಗಳಿಗೆ ಏರಿದೆ. ಇದೇ ರೀತಿ ಖಾಸಗಿ ಅನುದಾನಿತ ಬಿಎಡ್ ಕಾಲೇಜಿನಲ್ಲಿ ಪಾವತಿ ಸೀಟಿನ ಶುಲ್ಕ 4,500 ರಿಂದ 13,000 ರೂ. ಅನುದಾನರಹಿತ ಕಾಲೇಜಿನ ಪಾವತಿ ಶುಲ್ಕ 6500 ರೂ. ನಿಂದ 35,000 ರೂ. ಗೆ ಏರಿಕೆಯಾಗಿದೆ. ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ 210 ರೂ. ಇದ್ದ ವಾರ್ಷಿಕ ಬೋಧನಾ ಶುಲ್ಕವನ್ನು 1,600 ರೂ.ಗೆ ಏರಿಸಲಾಗಿದೆ. ಏಳೂವರೆ ಪಟ್ಟು ಶುಲ್ಕ ಏರಿಕೆ!! ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಶುಲ್ಕ 5.720 ರೂ ನಿಂದ 11,740 ರೂ.ಗೆ ಏರಿವೆ. ಖಾಸಗಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪಾವತಿ ಶುಲ್ಕಗಳು 25,000 ರೂ.ಗಳಿಂದ 44,000 ರೂ.ಗಳಿಗೆ ಏರಿಕೆಯಾಗಿದೆ. ಖಾಸಗಿ ಅನುದಾನಿತ ಕಾನೂನು ಕಾಲೇಜುಗಳಲ್ಲಿ ಇದುವರೆಗೆ ಇದ್ದ ಬೋಧನಾ ಶುಲ್ಕಗಳನ್ನು 4,000 ರೂ.ಗೆ ಏರಿಸಲಾಗಿದೆ.

ಇದು ಕೇವಲ ಶುಲ್ಕ ಏರಿಕೆಯ ಪ್ರಶ್ನೆಯಾಗಿ ಉಳಿದಿಲ್ಲ. ಒಂದು ನೀತಿಯ ಪ್ರಶ್ನೆ. 2000 ಮಾರ್ಚ್‌ನಲ್ಲಿ ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗಿರುವ ಬಜೆಟ್‌ನಲ್ಲಿ ಶುಲ್ಕ ಏರಿಕೆಯನ್ನು ಒಂದು ನೀತಿಯನ್ನಾಗಿ ಪ್ರಕಟಿಸಲಾಗಿದೆ. 2000-2001 ರ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಅನುದಾನವನ್ನು ಶೇಕಡಾ 15 ರಷ್ಟು ಕಡಿತಗೊಳಿಸಲು ನಿರ್ಧರಿಸಲಾಗಿದೆ.

ವಿಶ್ವವಿದ್ಯಾಲಯಗಳ

ವಿದ್ಯಾಲಯ ಕೇಂದ್ರಗಳಲ್ಲಿ ದಿನನಿತ್ಯದ ಸುದ್ದಿಯಾಗಿದೆ. ಹತ್ತಾರು ಸಾವಿರ ರೂ.ಗಳ ವಂತಿಗೆ ಆಧಾರದಲ್ಲಿ ಸ್ನಾತಕೋತ್ತರ ಕೋರ್ಸುಗಳಲ್ಲಿ ಪಾವತಿ ಸೀಟು ಪದ್ಧತಿಯನ್ನು ಜಾರಿಗೆ ತರಲಾಗಿದೆ. 'ಬಹುಬೇಡಿಕೆ'ಯ ಸ್ನಾತಕೋತ್ತರ ಕೋರ್ಸುಗಳನ್ನು ವಿಸ್ತರಿಸುವ ಬದಲಿಗೆ, ಹೊಸ ಹೊಸ ಕೋರ್ಸುಗಳಲ್ಲಿ ವಿಶ್ವ ವಿದ್ಯಾಲಯದಲ್ಲಿ ಆರಂಭಿಸುವ ಬದಲಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸ್ನಾತಕೋತ್ತರ ಕೇಂದ್ರಗಳ ಆರಂಭಕ್ಕೆ ಅನುಮತಿ ನೀಡಲಾಗುತ್ತಿದೆ.

ಮೈಸೂರು ವಿಶ್ವ ವಿದ್ಯಾಲಯದಲ್ಲಿನ ವಿವಿಧ ಸ್ನಾತಕೋತ್ತರ ಕೋರ್ಸುಗಳಲ್ಲಿ 40 ರಷ್ಟು ಸೀಟುಗಳನ್ನು ಪಾವತಿ ಸೀಟುಗಳಾಗಿ ಮಾಡಲಾಗಿದೆ. ಬೇಡಿಕೆಗೆ ತಕ್ಕಂತೆ ವಿವಿಧ ಕೋರ್ಸುಗಳಿಗೆ 20 ಸಾವಿರ, 25 ಸಾವಿರ, 30 ಸಾವಿರ ವಂತಿಗೆ ಶುಲ್ಕ ನಿಗದಿಗೊಳಿಸಲಾಗಿದೆ. ಇದೇ ಮಾದರಿಯಲ್ಲಿ ಮಂಗಳೂರು, ಗುಲ್ಬರ್ಗಾ ವಿಶ್ವ




ವಿದ್ಯಾಲಗಳಲ್ಲೂ ಪಾವತಿ ಸೀಟು ಪದ್ಧತಿಯನ್ನು ಆರಂಭಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಈ ವರ್ಷವೇ ಆರಂಭಿಸಬೇಕಿದ್ದ ಕೆಲವು ಕೋರ್ಸುಗಳಿಗೆ 50 ಸಾವಿರ ರೂ.ಗಳವರೆಗೆ ವಂತಿಗೆ ಶುಲ್ಕ ನಿಗದಿ ಮಾಡುವ ಉದ್ದೇಶ ಇತ್ತೆಂಬ ವರದಿ ಇದೆ. ವಿದ್ಯಾರ್ಥಿಗಳ ಪ್ರತಿಭಟನೆ ಸೇರಿದಂತೆ ಕೆಲವು ಕಾರಣಗಳಿಗಾಗಿ ಈ ನೀತಿಯನ್ನು ಮುಂದಿನ ವರ್ಷ ಜಾರಿ ಮಾಡಲಾಗುವುದು ಎಂದು ಹೇಳಲಾಗುತ್ತಿದೆ.

ಜೀವ ರಸಾಯನ ಶಾಸ್ತ್ರ(Bio-Chemistry) ಸೂಕ್ಷ್ಮ ಜೀವಾಣು ಶಾಸ್ತ್ರ (Micro Biology) ಎಂ.ಸಿ.ಎ(Master of Computer Aaplication) ಇತ್ಯಾದಿ ಕೋರ್ಸುಗಳಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಹಲವು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸ್ನಾತಕೋತ್ತರ ಕೇಂದ್ರ ಆರಂಭಿಸಲು ಈಗಾಗಲೇ ಅವಕಾಶ ನೀಡಲಾಗಿದೆ. ಶುಲ್ಕ ಲಕ್ಷಾಂತರ ರೂಪಾಯಿಗಳ ಶುಲ್ಕವನ್ನು ಈ ಶಿಕ್ಷಣ ಬಯಸುವ ವಿದ್ಯಾರ್ಥಿಗಳು, ಪೋಷಕರು ಕಕ್ಕಬೇಕಿದೆ. ಬೆಂಗಳೂರು ವಿ.ವಿ.ಯ ವಾಣಿಜ್ಯ ವಿಭಾಗದಲ್ಲಿ ಎಂ.ಎಫ್.ಎ(Master of Finance Accountancy) ಕೋರ್ಸ್‌ಗೆ ವಿದ್ಯಾರ್ಥಿಗಳು ವಾರ್ಷಿಕ 22 ಸಾವಿರ ರೂ. ಶುಲ್ಕ ತೆರುತ್ತಿದ್ದಾರೆ. ಇದು ಭಾಗಶಃ ಸ್ವಯಂ ಹಣಕಾಸು ಶಿಕ್ಷಣ ನೀತಿ ಅನ್ವಯವಾದ ಕೋರ್ಸು. ನಂಬಲರ್ಹವಾದ ಒಂದು ಮೂಲದಿಂದ ದೊರೆತ ಮಾಹಿತಿಯರತೆ ಮೈಸೂರು ವಿಶ್ವವಿದ್ಯಾಲಯ ಈಗ ಪ್ರತಿ ತಿಂಗಳು ಸುಮಾರು 66-67 ಲಕ್ಷ ರೂ.ಗಳ ಕೊರತೆಯನ್ನು ಅನುಭವಿಸುತ್ತಿದೆ. ಇಂತಹ ಕೊರತೆಯು ಒಟ್ಟು ಸೇರಿ 9 ಕೋಟಿ ರೂ ದಾಟಿದೆ.

ವಿಶ್ವವಿದ್ಯಾಲಯಗಳಲ್ಲಿ ಶೇಖರಗೊಳ್ಳುತ್ತಿರುವ ಈ ಬಿಕ್ಕಟ್ಟಿನ ಭಾರವನ್ನು ತಾಳದೆ ವಿ.ವಿ.ಗಳು ಯಾವಾಗ ಕುಸಿಯುತ್ತವೋ. ಈ ಬಿಕ್ಕಟ್ಟು ಯಾವಾಗ ಸ್ಫೋಟಿಸುತ್ತದೋ ಎಂಬ ಆತಂಕದ ಪರಿಸ್ಥಿತಿ ಇಂದು ಎದುರಾಗಿದೆ.

ಇಂತಹ ಒಂದು ಪರಿಸ್ಥಿತಿಗಾಗಿಯೇ ಕಾದು ಕುಳಿತಿವೆ, ಸರ್ಕಾರದ ಈ ವಿಶ್ವವಿದ್ಯಾಲಯವನ್ನೇ ನುಂಗಲು ಕಾದಿರುವ ಖಾಸಗಿ ಶಿಕ್ಷಣ ಶಕ್ತಿಗಳು ಎಂಬ ತಿಮಿಂಗಲಗಳು.

ಜನರ ಈವಿಶ್ವವಿದ್ಯಾಲಯಗಳನ್ನು ಕಳಚಿ ಖಾಸಗಿ ತೋಳಗಳಿಗೆ ಉಣಬಡಿಸಲು ಸಿದ್ಧವಾಗಿವೆ. ಕೇಂದ್ರ ರಾಜ್ಯ ಸರ್ಕಾರಗಳು 10 ಕೋಟಿ ರೂಪಾಯಿಗಳ ಬಂಡವಾಳ ಹೂಡಬಲ್ಲ ಯಾವುದೇ ಖಾಸಗೀ



ವ್ಯಕ್ತಿ-ಸಂಸ್ಥೆಗೆ ವಿಶ್ವವಿದ್ಯಾಲಯವನ್ನು ಆರಂಭಿಸಲು ಅನುಮತಿ ನೀಡುವ 'ಖಾಸಗಿ ವಿಶ್ವ ವಿದ್ಯಾಲಯ ಮಸೂದೆ'ಗೆ ಮತ್ತೆ ಜೀವ ತುಂಬುವ ಯೋಜನೆ ನಡೆದಿದೆ. ದೇಶದ ಪಾರ್ಲಿಮೆಂಟಿನಲ್ಲಿ 1995 ರಲ್ಲಿ ಮಂಡಿಸಲಾಗಿರುವ ಈ ಮಸೂದೆ ಇನ್ನೂ ಅಂಗೀಕಾರವಾಗಿಲ್ಲ. ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಮಂತ್ರಿ ಡಾ|| ಮುರುಳಿ ಮನೋಹರ ಜೋಷಿ, ರಾಜ್ಯ ಉನ್ನತ ಶಿಕ್ಷಣ ಸಚಿವ ಡಾ. ಜಿ.ಪರಮೇಶ್ವರ್ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಖಾಸಗಿ ವಿಶ್ವ ವಿದ್ಯಾಲಯವನ್ನು ಆರಂಭಿಸಲು ಅತ್ಯಂತ ಉತ್ಸಾಹಭರಿತರಾಗಿದ್ದಾರೆ. **ಬಾಯಿ ಮಾತಿನ ಬದ್ಧತೆಗೂ ಬೆನ್ನು**

ಪುಟ 10 ಕ್ಕೆ

ವಿದ್ಯಾರ್ಥಿ ಹೋರಾಟಕ್ಕೆ ಮಣಿದ ಸರ್ಕಾರ

ಪದವಿ ಶುಲ್ಕಗಳಲ್ಲಿ ಇಳಿಕೆ

ಶುಲ್ಕ ಏರಿಕೆಗಳ ಬಗೆಗೆ ಪುನರ್‌ವಿಮರ್ಶೆ ಇಲ್ಲವೇ ಇಲ್ಲ ಎನ್ನುತ್ತಲೇ ಬಂದ ಸರ್ಕಾರಕ್ಕೆ ಹೋರಾಟದ ಒತ್ತಡವನ್ನು ತಡೆಯುವುದು ಕೊನೆಗೂ ಆಗಲಿಲ್ಲ. ಬಗ್ಗಲೇಬೇಕಾಗಿ ಬಂತು. ಎಸ್‌ಎಫ್‌ಐ ನೇತೃತ್ವದಲ್ಲಿ ಡಿಸೆಂಬರ್ 19 ರಂದು ರಾಜ್ಯವ್ಯಾಪಿ ಹೋರಾಟ, ಜನವರಿ 19 ರಂದು ಎಸ್‌ಎಫ್‌ಐ-ಡಿವೈಎಫ್‌ಐ ಗಳ ನೇತೃತ್ವದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಮುಷ್ಕರದ ಭಾಗವಾಗಿ ಶುಲ್ಕ ಏರಿಕೆಗಳ ವಿರುದ್ಧ ವ್ಯಾಪಕ ಕಾರ್ಯಾಚರಣೆ. ರಾಜ್ಯದ 23 ಜಿಲ್ಲೆಗಳಲ್ಲಿ ಸುಮಾರು 60 ತಾಲ್ಲೂಕುಗಳಲ್ಲಿ 3 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡ ಈ ವಿದ್ಯಾರ್ಥಿ ಮುಷ್ಕರದಲ್ಲಿ ದಕ್ಷಿಣದ ಹೆಗ್ಗಡದೇವನಕೋಟೆಯಿಂದ ಉತ್ತರದ ತುದಿ ಬೀದರ್‌ನವರೆಗೆ, ಇತ್ತ ಮಂಗಳೂರುನಿಂದ, ಅತ್ತ ಬಳ್ಳಾರಿಯವರೆಗೆ ಸಹಸ್ರ ಸಹಸ್ರ ವಿದ್ಯಾರ್ಥಿಗಳ ಹೋರಾಟಕ್ಕೆ ತಲೆಬಾಗಿ ಸರ್ಕಾರ ಜನವರಿ 25 ರಂದು ವಿದ್ಯಾರ್ಥಿ ಸಂಘಟನೆಗಳನ್ನು ಮಾತುಕತೆಗೆ ಕರೆಯಿತು.

ಜಟ್ಟಿ ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ!

ಚರ್ಚೆಗೆ ಕರೆದದ್ದು ಹೋರಾಟದ ಕಾರಣದಿಂದಲ್ಲ ಶುಲ್ಕ ಏರಿಕೆ ಜೊತೆಗೆ ಇತರ ವಿಷಯಗಳ ಬಗೆಗೆ ಚರ್ಚಿಸಲಿಕ್ಕಾಗಿ ಎಂದು ಉನ್ನತ ಶಿಕ್ಷಣ ಸಚಿವರು ಹೇಳಿದರು. ಚರ್ಚೆಗೆ ಬಂದವರೆಲ್ಲಾ ವಿದ್ಯಾರ್ಥಿ ಹೌದೋ, ಅಲ್ಲವೋ ಎಂದು 'ತನಿಖೆ' ಮಾಡಲಾಯಿತು. ಶುಲ್ಕ ಇಳಿಕೆ ವಿಚಾರದಲ್ಲಿ ಚೌಕಾಶಿಗೆ ಪ್ರಯತ್ನಿಸಲಾಯಿತು. ಎಸ್‌ಎಫ್‌ಐ-ಎಐಎಸ್‌ಎಫ್ ಪರವಾಗಿ ಪ್ರತಿನಿಧಿಗಳು 'ಚೌಕಾಶಿ' ಪ್ರಶ್ನೆಯೇ ಇಲ್ಲ, ಶುಲ್ಕ ಏರಿಕೆ ವಾಪಸಾಗಲಿ ಎಂದು ತಮ್ಮ ಸ್ಪಷ್ಟ ನಿಲುವನ್ನು ತಿಳಿಸಿದರು. NSUI ಈ ಶುಲ್ಕ ಏರಿಕೆ ಸರಿ, ಪುನರ್ ಪರಿಶೀಲನೆ ಅಗತ್ಯವಿಲ್ಲ ಎಂದರೆ, ABVP ಶುಲ್ಕ ಏರಿಕೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಮಾಡುವುದು ಸರಿಯಲ್ಲ, ಮುಂದಿನ ವರ್ಷದ ಆರಂಭದಲ್ಲಿ ಶುಲ್ಕ ಏರಿಕೆ ಎಂದಾದರೆ ಯೋಚಿಸ ಬಹುದು ಎಂದು ತಮ್ಮ ಬಣ್ಣ ಬಯಲು ಮಾಡಿಕೊಂಡರು.

ನಮ್ಮೆದುರಿಗೆ ಮಾತುಕತೆ ನಡೆಸಿದಾಗ ಸಚಿವರು ಕ್ಯಾಬಿನೆಟ್‌ನಲ್ಲಿ ಚರ್ಚಿಸುತ್ತೇವೆ ಎಂದವರು ಮಾತುಕತೆ ಮುಗಿದ ಬೆನ್ನ ಹಿಂದೆಯೇ ಪತ್ರಕರ್ತರನ್ನು ಕರೆದು ಪದವಿ ಶಿಕ್ಷಣ ಶುಲ್ಕಗಳ ಪುನರ್‌ಪರಿಶೀಲನೆ ಇಲ್ಲ ಎಂದು ಸಾರಿದರು.

ಆದರೆ ಕೊನೆಗೂ ಸರ್ಕಾರ ಬೋಧನಾ ಶುಲ್ಕಗಳಲ್ಲಿ 100 ರೂ.ಗಳನ್ನು ನೋಂದಣಿ ಶುಲ್ಕಗಳಲ್ಲಿ 50 ರೂ.ಗಳನ್ನು ಕಡಿತಗೊಳಿಸಿ ತೀರ್ಮಾನ ಪ್ರಕಟಿಸಿದೆ. ಇದು ವಿದ್ಯಾರ್ಥಿ ಸಮುದಾಯದ ಸಂಘಟಿತ ಹೋರಾಟಕ್ಕೆ ಸಿಕ್ಕ ಜಯವಾಗಿದೆ. ಕೆಲವು ವಿ.ವಿ.ಗಳಲ್ಲಿಯೂ ಅಲ್ಪಸ್ವಲ್ಪ ಇಳಿಕೆಯಾಗಿದೆ.

ಭೂಕಂಪವನ್ನು ಬಿಡದ ದುಷ್ಟರು

ಈ ಘೋರ ಭೂಕಂಪದಲ್ಲಿ ಆದ ನಷ್ಟದ ಅಂದಾಜು ಸುಮಾರು 13,500 ಕೋಟಿ ರೂ.ಗಳು. ಇದಕ್ಕಾಗಿ ಜಗತ್ತಿನ ವಿವಿಧ ದೇಶಗಳಿಂದ ಹರಿದು ಬಂದಿದ್ದು 15,000 ಕೋಟಿ ರೂ.ಗಳು. ಮೇಲಾಗಿ ಭಾರತದ ಜನತೆ ನೀಡುತ್ತಿರುವ ಉದಾರ ಸಹಾಯ ಅಪಾರ. ಹೀಗಿದ್ದೂ ಕೇಂದ್ರ ಸರ್ಕಾರ ಶೇ 2 ರಷ್ಟು ಸರ್‌ಚಾರ್ಜ್ ವಿಧಿಸಿದೆ. ಹೊಸ ತೆರಿಗೆಗಳನ್ನು ಹೇರಬಯಸಿದೆ. ಇದು ಯಾತಕ್ಕಾಗಿ? ಅತ್ತ ಗುಜರಾತ್‌ನಲ್ಲಿ ಭೂಕಂಪದ ಬೆನ್ನು ಹತ್ತಿದ್ದಾರೆ ಸಂಘಪರಿವಾರ. ಇವರ ಅಮೋಘ ಸೇವೆಯೆಂದರೆ ಟಿ.ವಿ. ಪತ್ರಿಕೆಗಳಿಗೆ ಪೋಜು ಕೊಡುವುದು, ಪರಿಹಾರ ಸಾಮಗ್ರಿಗಳನ್ನು ಹಾದಿಯಲ್ಲೇ ಲೂಟಿ ಮಾಡುವುದು, ಜೈಶ್ರೀರಾಂ ಎಂದವರಿಗೆ ಮಾತ್ರ ರೊಟ್ಟಿ ಕೊಡುವುದು... ಇದು ಕೇವಲ ದುಷ್ಟತನವಲ್ಲ, ಫ್ಯಾಸಿಸ್ಟ್ ಮಾದರಿಯ ದುಷ್ಟತನ.

ಇದುವರೆಗೂ ಕಂಡರಿಯದ ಕರಾಳ ಭೂಕಂಪ ನಡೆದು ಹದಿನೈದು ದಿನಗಳು ಕಳೆದಿವೆ. ಗುಜರಾತಿನ ಭೂಕಂಪ ಪೀಡಿತರಿಗೆ ಎಲ್ಲಾ ಕಡೆಗಳಿಂದ ಸೌಹಾರ್ದತೆ ಮತ್ತು ಸಂಪನ್ಮೂಲಗಳು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಹರಿದು ಬರುತ್ತಿವೆ. ಹಲವು ಕಡೆಗಳಲ್ಲಿ ಪರಿಹಾರ ಸಾಮಗ್ರಿಗಳು ರಾಶಿ-ರಾಶಿ ಅನಾಥವಾಗಿ ಬಿದ್ದಿವೆ. ನಿಜ ಹೇಳಬೇಕೆಂದರೆ ಅಹಮದಾಬಾದ್ ಮತ್ತು ಭುಜ್ ವಿಮಾನ ನಿಲ್ದಾಣಗಳಲ್ಲಿ ಪರಿಹಾರ ಸಾಮಗ್ರಿಗಳು ಕೊಳೆತು ನಾರುತ್ತಿವೆ. ತೀರಾ ಅಗತ್ಯವಾದವರಿಗೆ ಇವನ್ನು ತಲುಪಿಸಲಾಗದೆ ರಾಜ್ಯ ಸರ್ಕಾರದ ಆಡಳಿತ ಇಡೀ ಸಮಸ್ಯೆಯ ಕೇಂದ್ರ ಮತ್ತು ಇಡೀ ಪರಿಹಾರ ಕಾರ್ಯಗಳಲ್ಲಿ ಎದ್ದು ಕಾಣುತ್ತಿರುವುದು ದುಷ್ಟ ರಾಜಕೀಯ.

ಫೆಬ್ರವರಿ 3 ರಂದು ಕೇಂದ್ರ ಸರ್ಕಾರವು ಸರ್ವಪಕ್ಷಗಳ ಸಭೆಯನ್ನು ಕರೆದಿತ್ತು. ಈ ಸಭೆಯಲ್ಲಿ ಪರಿಹಾರ ಕಾರ್ಯಗಳಲ್ಲಿ ಆಡಳಿತದ ವಿಫಲತೆಯನ್ನು ಸರ್ಕಾರ ಒಪ್ಪಿಕೊಂಡಿತ್ತು. ಸಿಪಿಐ(ಎಂ)ನ ಸೂಚನೆಯಂತೆ ಪರಿಹಾರ ಕಾರ್ಯಗಳಲ್ಲಿ ಉಸ್ತುವಾರಿ, ನಿರ್ವಹಣೆ ಮತ್ತು ಸಮನ್ವಯ ಸಾಧಿಸಲು ರಾಜಕೀಯ ಪಕ್ಷಗಳು ಮತ್ತು ಇತರೆ ಸಂಸ್ಥೆಗಳನ್ನು ಒಳಗೊಂಡ ರಾಷ್ಟ್ರೀಯ ಸಮಿತಿಯನ್ನು ರಚಿಸಲು ಪ್ರಧಾನ ಮಂತ್ರಿಯವರು ಒಪ್ಪಿದ್ದರು. ಆದರೆ ವಾಜಪೇಯಿ ಸರ್ಕಾರದ ಮಾಮೂಲಿ ವಾಡಿಕೆಯಂತೆ ಇದುವರೆಗೂ ಇಂತಹ ಸಮಿತಿಯೊಂದು ರಚನೆಯಾಗಲೇ ಇಲ್ಲ.

ಪರಿಹಾರ ಸಾಮಗ್ರಿ ಲೂಟಿ ಹೊಡೆದ ಶಿಸ್ತಿನ ದೇಶಭಕ್ತರು

ಆಡಳಿತದ ಇಂತಹ ನಿರ್ವೀರ್ಯ ನಿರ್ಲಕ್ಷ್ಯತೆಯು ಉದ್ದೇಶಪೂರ್ವಕ ವಾಗಿರಬಹುದು ಮತ್ತು ಆರ್‌ಎಸ್‌ಎಸ್ ಸಂಘಟನೆಗಳು ಪರಿಹಾರ ಕಾರ್ಯದ ಛಾಂಪಿಯನ್‌ಗಳೆಂದು ಬಿಂಬಿಸಲು ಈ ರೀತಿ ಮಾಡಲಾಗುತ್ತಿದೆ ಎಂಬ ವರದಿಗಳು ಗಾಬರಿಹುಟ್ಟಿಸುವಂತಹವು. ಇದು ಅಮಾನವೀಯ ಮತ್ತು ಬೇಜವಾಬ್ದಾರಿತನದ್ದು. ದಿನಾಂಕ 7 ರ 'ಹಿಂದೂ' ಪತ್ರಿಕೆಯ ವರದಿಯ ಪ್ರಕಾರ ಪರಿಹಾರ ಸಾಮಗ್ರಿಗಳನ್ನು ಪ್ರಾರಂಭದಲ್ಲಿ ಲೂಟಿ ಮಾಡಿದ್ದು ಆರ್‌ಎಸ್‌ಎಸ್ ನ ಕೆಲವು ತುತ್ತೂರಿ ಸಂಘಟನೆಗಳು! ಆರ್‌ಎಸ್‌ಎಸ್‌ನ ಹಿರಿಯ ನಾಯಕರು ಬಹಳ ಜೋರಾಗಿ ನಾಚಿಕೆಯಿಲ್ಲದೆ ಹೇಳುವಂತೆ ಉರ್ದುವಿನಲ್ಲಿ ಬರೆದುಕೊಂಡು ಹೋಗುತ್ತಿದ್ದ ಟ್ರಕ್ಕುಗಳನ್ನು ಮಾತ್ರ ಲೂಟಿ ಮಾಡಲಾಗಿದೆಯಂತೆ! ವರದಿಗಳು ಬಹಿರಂಗಪಡಿಸುವಂತೆ ಮುಸ್ಲಿಮರು ಹೆಚ್ಚಿರುವ ಹಳ್ಳಿಗಳಿಗೆ ಪರಿಹಾರ ತಲುಪದ ಹಾಗೆ ತಡೆಯಲಾಗಿದೆ, ಜೊತೆಗೆ, ಪೋಪ್‌ರವರು ನೀಡುವುದಾಗಿ ಹೇಳಿರುವ 20 ಕೋಟಿ ರೂ.ಗಳನ್ನು ನೆರವನ್ನು ಸರ್ಕಾರ ಒಪ್ಪಿಕೊಳ್ಳಬಾರದೆಂದು ವಿಶ್ವ ಹಿಂದೂ ಪರಿಷತ್ ಬೆದರಿಕೆಯನ್ನು ಹಾಕಿದೆ. ಸಾವಿನ

ಸಂಘ ಪರಿವಾರದ ದುಷ್ಟ ರಾಜಕೀಯ ವಾಜಪೇಯಿ ಆಶೀರ್ವಾದ!

ಸಂಕಷ್ಟಕಗಳ ದುರಂತದ ಈ ಯಾತನಾಮಯ ಸನ್ನಿವೇಶವನ್ನು ಕೋಮುವಾದಗೊಳಿಸುವ ಇದಕ್ಕಿಂತಲೂ ದೊಡ್ಡ ಕ್ರಿಮಿನಲ್ ಸಂಚು ಇರಲು ಸಾಧ್ಯವೇ? ಜನರನ್ನು ಸುಟ್ಟ ಬೆಂಕಿಯಲ್ಲಿ ಬೇಳೆ ಬೇಯಿಸುವ ಇಂತಹವರನ್ನು ಮನುಷ್ಯರೆಂದು ಕರೆಯಲು ಸಾಧ್ಯವೇ? ಬೆಂಕಿಗೆ ತುಪ್ಪ ಸುರಿಯುವ ಹಾಗೆ ಸರ್ವಪಕ್ಷಗಳ ಸಭೆಯಲ್ಲಿ ಒಪ್ಪಿಕೊಂಡಂತೆ ರಾಷ್ಟ್ರೀಯ ಸಮಿತಿಯನ್ನು ರಚಿಸಲು ನಿಧಾನ ಮಾಡುವ ಮೂಲಕ ವಾಜಪೇಯಿಯವರು ಆರ್‌ಎಸ್‌ಎಸ್ ನವರ ಇಂತಹ ದುಷ್ಟ ಸಂಚನ್ನು ಜಾರಿಗೊಳಿಸಲು ಸಂಪೂರ್ಣವಾಗಿ ಸಹಕರಿಸುತ್ತಿದ್ದಾರೆ.

ಈಗ ಸರ್ಕಾರದ್ದೂ ಲೂಟಿ

ಮತ್ತೊಂದು ಮಾನಗೇಡಿ ಸಂಗತಿಯೆಂದರೆ, ಆರ್ಥಿಕ ರಂಗದಲ್ಲಿ ಸಂಪೂರ್ಣ ವಿಫಲವಾಗಿರುವ ವಾಜಪೇಯಿ ಸರಕಾರ ಈ ರಂಗದಲ್ಲಿನ ತನ್ನ ವಿಫಲತೆ ಮತ್ತು ನಿರ್ವಹಣೆಯ ಅಸಾಮರ್ಥ್ಯವನ್ನು ಮುಚ್ಚಿಕೊಳ್ಳಲು ಗುಜರಾತ್ ದುರಂತವನ್ನು ಉಪಯೋಗಿಸಿಕೊಳ್ಳುತ್ತಿದೆ. ನಾಶದ ಪ್ರಮಾಣ ಮತ್ತು ಪುನರ್ ನಿರ್ಮಾಣಕ್ಕೆ ಬೇಕಾದ ಸಂಪನ್ಮೂಲಗಳ ಬಗ್ಗೆ ಒಂದು ವೈಜ್ಞಾನಿಕ ಅಂದಾಜನ್ನು ಮಾಡ ಬೇಕಾದ ವಾಜಪೇಯಿ ಸರ್ಕಾರವು ಆದಾಯ ತೆರಿಗೆ ಮತ್ತು ಕಂಪನಿ ತೆರಿಗೆಯ ಮೇಲೆ ಸಾರಾಸಗಟು ಶೇ 2 ರಷ್ಟು ಸರ್ಚಾರ್ಜ್‌ನ್ನು ವಿಧಿಸಿದೆ. ಇದಕ್ಕೆ ಸಂಬಂಧಿಸಿ ಸಿಪಿಐ(ಎಂ) ಪಕ್ಷವು ಆದಾಯದ ಕೆಳಹಂತದಲ್ಲಿರುವ ವರನ್ನು ಹೆಚ್ಚಿನ ಹೊರೆಯಿಂದ ತಪ್ಪಿಸಬೇಕು, ಅದಕ್ಕಾಗಿ ಸರ್ಚಾರ್ಜ್‌ನ್ನು ಗ್ರೇಡೆಡ್ ತೆರಿಗೆಯಾಗಿ ಪರಿವರ್ತಿಸ ಬೇಕೆಂದು ಸಲಹೆಯನ್ನು ನೀಡಿದ್ದರೂ ಸರ್ಕಾರ ಅದನ್ನು ಸಾರಾಸಗಟಾಗಿ ತಿರಸ್ಕರಿಸಿದೆ. ಇನ್ನು ಸಂತ್ರಸ್ಥರ ನೆರವಿಗೆಂದು ಅಂತರ್‌ರಾಷ್ಟ್ರೀಯ ಸಹಾಯ ಯಥೇಚ್ಛವಾಗಿ ಹರಿದು ಬರುತ್ತಿದೆ. ಆದರೆ ಸರ್ಕಾರ ಇದನ್ನು ಪಾರದರ್ಶಕವಾಗಿಟ್ಟಿಲ್ಲ. ಸರ್ವಪಕ್ಷಗಳ ಸಭೆಯಲ್ಲಿ ಕೇಂದ್ರ ಸರ್ಕಾರ ತಿಳಿಸಿದ ಹಾಗೆ ಭೂಕಂಪದಿಂದಾಗಿ ಒಟ್ಟು ನಷ್ಟದ ಅಂದಾಜು ರೂ. 13,500 ಕೋಟಿಗಳು. ವಿಶ್ವಬ್ಯಾಂಕ್, ಏಷ್ಯಾ ಅಭಿವೃದ್ಧಿ ಬ್ಯಾಂಕ್, ವಿಶ್ವಸಂಸ್ಥೆ, ಅಲ್ಲದೆ ಹಲವಾರು ದೇಶಗಳು ನೀಡುತ್ತಿರುವ ಹಣಕಾಸಿನ ಸಹಾಯ ಸುಮಾರು 3 ಬಿಲಿಯನ್ ಡಾಲರ್‌ಗಳು. ಅಂದರೆ 15,000 ಕೋಟಿ ರೂಪಾಯಿಗಳು. ಜೊತೆಗೆ ದೇಶದೊಳಗೆ ಸಂಗ್ರಹವಾಗಿರುವ ಹಣಕಾಸಿನ ನೆರವು. ಇದಲ್ಲದೆ ವಸ್ತುಗಳ ರೂಪದಲ್ಲಿ ಬರುತ್ತಿರುವ ನೆರವು ಅಪಾರವಾಗಿದೆ. ಅಂದರೆ ಸರ್ಕಾರದ ನಷ್ಟದ ಅಂದಾಜಿಗಿಂತಲೂ ಹೆಚ್ಚು ನೆರವು ಈಗಾಗಲೇ ಪ್ರಕಟವಾಗಿದೆ. ಇಂತಹ ಸಂದರ್ಭದಲ್ಲಿ ಈ ಎಲ್ಲಾ ನೆರವನ್ನು ಹೇಗೆ ಬಳಸಲಾಗುವುದು ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾಗಿರಬೇಕಾಗುತ್ತದೆ. ಇನ್ನೂ ನೆರವು ಬೇಕಾಗಿದ್ದರೆ ಜನರಿಗೆ ವಿವರಿಸಬೇಕಾಗುತ್ತದೆ ಮತ್ತು ಆ ನೆರವು ಏತಕ್ಕಾಗಿ ಎಂಬುದನ್ನು ಹೇಳಬೇಕಾಗುತ್ತದೆ.



ದಿನಾಂಕ 7 ರ 'ಹಿಂದೂ' ಪತ್ರಿಕೆಯ ವರದಿಯ ಪ್ರಕಾರ ಪರಿಹಾರ ಸಾಮಗ್ರಿಗಳನ್ನು ಪ್ರಾರಂಭದಲ್ಲಿ ಲೂಟಿ ಮಾಡಿದ್ದು ಆರ್‌ಎಸ್‌ಎಸ್ ನ ಕೆಲವು ತುತ್ತೂರಿ ಸಂಘಟನೆಗಳು!

ತೆರಿಗೆಯೆಂಬ ಸುಲಿಗೆ ಮತ್ತೇಕೆ?

ಪರಿಸ್ಥಿತಿ ಹೀಗಿದ್ದರೂ ಆಶ್ಚರ್ಯಕರ ಸಂಗತಿಯೆಂದರೆ ಈ ಸರ್ಕಾರ ಜನರ ಮೇಲೆ ತೆರಿಗೆಗಳನ್ನು ಹೇರಲು ತೀರ್ಮಾನಿಸಿದೆ. ಮತ್ತೊಂದು ಕಡೆಯಲ್ಲಿ ಮಾರ್ಚ್ 31, 2000 ದ ವೇಳೆಗೆ ಆದಾಯ ಮತ್ತು ಕಂಪನಿ ತೆರಿಗೆ, ಕಸ್ಟಂಸ್ ಮತ್ತು ಅಬಕಾರಿ ತೆರಿಗೆಗಳ ಬಾಬ್ತಿನಿಂದ 62,392 ಕೋಟಿ ರೂ.ಗಳು ಬರಬೇಕೆಂದು ಸರ್ಕಾರವೇ ಒಪ್ಪಿಕೊಂಡಿದೆ. ಇದರಲ್ಲಿ ಕಂಪನಿ ತೆರಿಗೆಗಳ ಬಾಕಿಯೇ 28,348 ಕೋಟಿ ರೂ.ಗಳಿದೆ. ಇಷ್ಟೊಂದು ದೊಡ್ಡ ಪ್ರಮಾಣದ ತೆರಿಗೆ ಬಾಕಿಗಳನ್ನು ವಸೂಲಿ ಮಾಡುವುದರ ಬದಲಿಗೆ ವಾಜಪೇಯಿ ಸರ್ಕಾರ ಜನರ ಮೇಲೆ ಹೊಸ ತೆರಿಗೆಗಳನ್ನು ಹಾಕಲು ತೀರ್ಮಾನಿ ಸಿದೆ. ಇದರರ್ಥ ಭೂಕಂಪದ ಘೋರ ಸಂದರ್ಭವನ್ನು ಉಪಯೋಗಿಸಿಕೊಂಡು ಸರ್ಕಾರ ತನ್ನ ಹಣಕಾಸು ಕೊರತೆಯನ್ನು ತುಂಬಿಕೊಳ್ಳುವ ಕೆಲಸ ಮಾಡುತ್ತಿದೆ.

ಈ ಅಂಶಗಳ ಬಗ್ಗೆ ಸರ್ಕಾರ ಜನರಿಗೆ ವಿವರಿಸಬೇಕಾಗುತ್ತದೆ. ಭೂಕಂಪದ ಘೋರ ಮಾನವ ದುರಂತವನ್ನು ಅತ್ಯಂತ ಸಮರ್ಥವಾಗಿ ಎದುರಿಸಲು ಭಾರತದ ಜನತೆ ಮತ್ತು ಅಂತರ್‌ರಾಷ್ಟ್ರೀಯ ಸಮುದಾಯ ದೊಡ್ಡ ಪ್ರಮಾಣದಲ್ಲಿ ಸಹಾಯ ಹಸ್ತವನ್ನು ಚಾಚಿದೆ. ಜನತೆಯ ಈ ಹೃದಯ ವೈಶಾಲ್ಯತೆಯನ್ನು, ಮಾನವ ಪ್ರೇಮವನ್ನು ಆರ್.ಎಸ್.ಎಸ್. ಮತ್ತು ಅದರ ರೆಂಬೆ ಕೊಂಬೆಗಳು ತಮ್ಮ ಕೋಮು ರಾಜಕೀಯದ ಲಾಭಕ್ಕೆ ಬಳಸಿಕೊಳ್ಳುವುದನ್ನು ಖಂಡಿತಾ ಸಹಿಸಲಾಗದು. ದುರಂತದ ಸಂತ್ರಸ್ಥರಿಗೆ ಬೇಕಾದ ಎಲ್ಲಾ ನೆರವನ್ನು ಸಮರೋಪಾದಿಯಲ್ಲಿ ಯಾವುದೇ ಪಕ್ಷಪಾತ ಮಾಡದೆ ಒದಗಿಸುವುದು ಸಂದರ್ಭದ ಅಗತ್ಯವಾಗಿದೆ. ಇದರಲ್ಲಿನ ಯಾವುದೇ ಕೊರತೆಯೂ ಗುಜರಾತ್ ಅಥವಾ ಕೇಂದ್ರ ಸರ್ಕಾರಗಳನ್ನು ಸ್ಪಷ್ಟವಾಗಿ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸುತ್ತದೆ.


- ಕೆ. ಪ್ರಕಾಶ್

ಕೇರಳದಲ್ಲಿ ಕಾಂಗ್ರೆಸ್‌ನ ವಿಮೋಚನಾ ಯಾತ್ರೆ

ಮಾರ್ಕ್ಸಿಸ್ಟರನ್ನು ರಾಜಕೀಯ ವನವಾಸಕ್ಕೆ ಕಳುಹಿಸಿಕೊಡಲಿಕ್ಕಾಗಿಯೇ ತಾನು ಕೇರಳ ವಿಮೋಚನಾ ಯಾತ್ರೆ ಕೈಗೊಳ್ಳುತ್ತಿದ್ದೇನೆ ಎಂದು ಕೇರಳದಲ್ಲಿ ಕಾಂಗ್ರೆಸ್ ನಾಯಕ ಎ.ಕೆ.ಆಂಟನಿ ಘೋಷಿಸಿಕೊಂಡಿರುತ್ತಾರೆ. ಕಾಸರಗೋಡಿನಿಂದ ತಿರುವನಂತಪುರದವರೆಗೆ ಎ.ಕೆ.ಆಂಟನಿಯವರು ಜೀಪ್ ಯಾತ್ರೆ ಕೈಗೊಂಡಷ್ಟಕ್ಕೆ ಉರುಳಿ ಬೀಳುವ ಟೊಳ್ಳು ಮಣ್ಣಿನ ಗೋಪುರದಲ್ಲಿ ಕೇರಳದ ಕಮ್ಯುನಿಸ್ಟ್ ಚಳುವಳಿ. 1957 ರಲ್ಲಿ ಇ.ಎಂ.ಎಸ್. ಮಂತ್ರಿಮಂಡಲದ ಕಾಲದಿಂದಲೇ ಆಂಟನಿ ಮತ್ತು ಅವರ ಹಿಂಬಾಲಕ ಸಿಬ್ಬಂದಿ ಈ ವಿಮೋಚನಾ ಸಮರದ ಪಾಲಗ ಊದುತ್ತಲೇ ಬಂದಿರುತ್ತಾರೆ. ಕೇರಳದಲ್ಲಿ ಒಡೆದ ಮನೆಯಾಗಿರುವ ಕಾಂಗ್ರೆಸ್ಸಿನಲ್ಲಿ ಎಡ ಸರ್ಕಾರವನ್ನು ವಿರೋಧಿಸುವಲ್ಲಿಯೂ ಪೈಪೋಟಿ, ಜಗಳ. 1959 ರಲ್ಲಿ ವಿಮೋಚನಾ ಸಮರ ನೆಪದಿಂದ ಪ್ರಥಮ ಕಮ್ಯುನಿಸ್ಟ್ ಮಂತ್ರಿ ಮಂಡಲವನ್ನು ಕೆಳಗಿಳಿಸಲಾಯಿತು. ಆದರೆ ಚರಿತ್ರೆ ಅಲ್ಲಿಗೇ ಮುಕ್ತಾಯವಾಗಲಿಲ್ಲ. ಕಮ್ಯುನಿಸ್ಟರ ನೇತೃತ್ವದಲ್ಲಿ ಮುಂದೆ ಐದು ಬಾರಿ ಪುಟ್ಟ ಕೇರಳ ರಾಜ್ಯದಲ್ಲಿ ಮಂತ್ರಿ ಮಂಡಲ ಅಧಿಕಾರಕ್ಕೆ ಬಂದಿತು.

ವಿರೋಧಿ ಪಕ್ಷಕ್ಕೆ ಸಾಮರ್ಥ್ಯವಿಲ್ಲದ ಕಾರಣ ಎಡರಂಗ ಸರ್ಕಾರ ಐದು ವರ್ಷದ ಅವಧಿ ಪೂರ್ಣಗೊಳಿಸಿದೆ ಎಂದು ಕಾಂಗ್ರೆಸ್ ನಾಯಕ ಕರುಣಾಕರನ್ ಎ.ಕೆ.ಆಂಟನಿ ಬಗ್ಗೆ ಟೀಕೆ ಮಾಡುತ್ತಾರೆ. ಆದರೆ ಆಂಟನಿ ಹೇಳುವುದೇನೆಂದರೆ ಕರುಣಾಕರನ್ ವಿರೋಧ ಪಕ್ಷದ ನಾಯಕರಾಗಿದ್ದಾಗಲೇ 1987 ರಿಂದ 1991 ರ ವರೆಗೆ ಆಡಳಿತ ಮಾಡಿರುವ ಎಡರಂಗ ಸರ್ಕಾರ ನಾಲ್ಕೂವರೆ ವರ್ಷದ ಅವಧಿ ಪೂರೈಸುವ ಒಳಗೆ ಸ್ವಯಂ ಚುನಾವಣೆ ಘೋಷಿಸಿದ ಕಾರಣ ಎಡರಂಗ ಐದು ವರ್ಷ ಪೂರೈಸಿತು ಎಂದು ಆಂಟೋನಿಯ ಉತ್ತರ.

ಇವರಿಬ್ಬರ ಈ ಪೈಪೋಟಿಯು ನಡುವೆ ಆರಂಭವಾದ ಈ ಕೇರಳ ವಿಮೋಚನಾ ಯಾತ್ರೆಯ ಉದ್ದೇಶವೇನು? ಕೇರಳ ರಾಜ್ಯ ಭಾರತದಿಂದ ಪ್ರತ್ಯೇಕಗೊಂಡ ಒಂದು ಗಣರಾಜ್ಯವೇ? ಭಾರತದ ಸಂವಿಧಾನದ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುವ ರಾಜ್ಯವಲ್ಲವೇ ಕೇರಳ? ಕೇಂದ್ರ ಸರ್ಕಾರದ ಆರ್ಥಿಕ ನೀತಿ ಈ ರಾಜ್ಯವನ್ನು ಬಾಧಿಸುತ್ತಿಲ್ಲವೇ? ಗ್ಯಾಟ್ ಒಪ್ಪಂದ, ಉದಾರೀಕರಣ, ಮುಕ್ತ ಆರ್ಥಿಕ ನೀತಿ ಇವುಗಳಿಂದ ಕೇರಳದ ಕೃಷಿರಂಗ ಸಂಪೂರ್ಣವಾಗಿ ನಿಶ್ಚಲವಾಗಿದೆ.


ಆಂಟನಿ

ಈ ಮಧ್ಯೆ ಹಿಂದೂ ಮತೀಯ ಫ್ಯಾಸಿಸ್ಟ್ ರಾಜಕೀಯ ಮುಖವಾಡದ ಬಿಜೆಪಿ ಕೇಂದ್ರದಲ್ಲಿ ಅಧಿಕಾರದ ಮೂಲಕ ಮತೀಯ ರಾಜಕೀಯ ನಡೆಸುತ್ತಿರುವ ಸಂದರ್ಭದಲ್ಲಿ ಇದನ್ನು ತೀವ್ರವಾಗಿ ಪ್ರತಿರೋಧಿಸುತ್ತಿರುವ ಒಂದು ಎಡ ಪ್ರಜಾಪ್ರಭುತ್ವ

ರೈತರು ಬರುವರು ದಾರಿಬಿಡಿ ರೈ

ಈ ಘೋಷಣೆ ಮತ್ತೆ ಕರ್ನಾಟಕದ ರೈತರ ಹೃದಯದಿಂದ ಹೊರಹೊಮ್ಮಲಿರುವ ಸಂಘಟನೆಯನ್ನು ಫೆ. 5-7 ರ ಚಳುವಳಿಯಲ್ಲಿ ರೈತರು ನೀಡುತ್ತಿದ್ದಾರೆ.

ಕರ್ನಾಟಕದಾದ್ಯಂತ ರೈತ ಚಳುವಳಿಯ ಜ್ವಾಲೆ ಹೊರ ಹೊಮ್ಮಲಾರಂಭಿಸಿದೆ. ಇತ್ತೀಚಿನ ತಿಂಗಳುಗಳಲ್ಲಿ ಬೆಲೆ ಕುಸಿತ ದೊಂದಿಗೆ ಕಂಗಾಲಾದ ರೈತರು ತನ್ನಿಂದ ತಾನೆ ಹಲವಾರು ಕಡೆ ಹೋರಾಟದ ಕಣಕ್ಕೆ ಧುಮುಕಿದ್ದರು. ವಿದ್ಯುತ್ ಬಾಕಿ ವಸೂಲಿ ಹಾಗೂ ದರ ಏರಿಕೆಯ ವಿರುದ್ಧ ಮತ್ತೊಂದೆಡೆ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ಸಂಘಟಿತವಾದ ಮತ್ತು ಯೋಜಿತವಾದ ಹೋರಾಕ್ಕಿಳಿಸಿದ್ದರು. ಈ ಎಲ್ಲ ರೈತರ ಹೋರಾಟದ ಧಾರೆಗಳನ್ನು ಬೆಸೆಯುವಂತೆ ಅಖಿಲ ಭಾರತ ರೈತ ಚಳುವಳಿಯ ಕರೆ ಮೊಳಗಿತು. ರಾಷ್ಟ್ರಮಟ್ಟದ ಎಡಪಂಥೀಯ ರೈತ-ಕೂಲಿಕಾರರ ಸಂಘಟನೆಗಳು ಸೇರಿ ದೇಶಾದ್ಯಂತ ಸಮಾವೇಶ, ಪ್ರಚಾರ ಜಾಥಾ ಹಾಗೂ ದೆಹಲಿ ಚಲೋ ಸಂಘಟಿಸಿದ್ದವು. ಕೊರೆಯುವ ಚಳಿಯನ್ನು ಲೆಕ್ಕಿಸದೆ ದೆಹಲಿಗೆ ಧಾವಿಸಿದ ರೈತರು ಅಲ್ಲಿ ಚಳುವಳಿಯ ಬಿಸಿಯಿಂದ ಕಾದು ಹದವಾಗಿ ಕರ್ನಾಟಕಕ್ಕೆ ಮರಳಿ ಬಂದರು. ತಮ್ಮ ಸಂಕಟಗಳಿಗೆ ಯಾರು ಕಾರಣರೆಂಬ ಸ್ಪಷ್ಟ ಅರಿವನ್ನು ತಲೆಯಲ್ಲಿ ಹೊತ್ತು ಬಂದರು.

ಮರಳಿ ಬಂದವರೇ ಹಳ್ಳಿ ಹಳ್ಳಿಗಳಿಗೆ ದೆಹಲಿಯ ಸಂದೇಶವನ್ನು ಮುಟ್ಟಿಸಿದರು. ಅನೇಕ ತಾಲ್ಲೂಕುಗಳಲ್ಲಿ 5-10 ದಿನಗಳು ಜಾಥಾ ಹೊರಟಿತು. ಜಿಲ್ಲೆ ಜಿಲ್ಲೆಗಳಲ್ಲಿ ಲಕ್ಷಾಂತರ ಕರಪತ್ರಗಳು ರೈತರ ಮನೆಬಾಗಿಲನ್ನು ತಲುಪಿದವು. ಹಿಂದಿನ 5-6 ವರ್ಷಗಳಲ್ಲಿ ಸಂಘಗಳಚಿರು ಮಾತನಾಡಲಾರಂಭಿಸಿದರೆ ಏನಾಗಿದೆ ಇವರಿಗೆ? ಎನಿವು ಅರ್ಥವಾಗದ ಗ್ಯಾಟ್, ಡೆಂಕಲ್, ವಿಶ್ವ ವ್ಯಾಪಾರ ಸಂಸ್ಥೆಗಳ ಐ.ಎಂ.ಎಫ್., ವಿಶ್ವಬ್ಯಾಂಕ್ ಗಳು ಎಂದು ಒಂದು ಕ್ಷಣ ಕಿವಿಗೊಟ್ಟು ಮುಂದೆ ಹೋಗುತ್ತಿದ್ದ ರೈತರು ಇದು ಗಂಟೆಗಟ್ಟಲೆ ನಿಂತು ಇನ್ನಷ್ಟು, ಮತ್ತಷ್ಟು ಎಂದು ಕೇಳುತ್ತಿದ್ದಾರೆ.

ಮಾತ್ರವಲ್ಲ ಹಲವು ತಾಲೂಕುಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ರಸ್ತಾ ರೋಕೋ, ಪಿಕೆಟಿಂಗ್‌ಗಳಿಗೆ ಭಾಗವಹಿಸಿದ್ದಾರೆ. ರಾಜ್ಯಾದ್ಯಂತ ಹಲವು ರೀತಿಯಲ್ಲಿ ಈ ಉತ್ಸಾಹ ಚಿಮ್ಮಿ ಬಂದಿದೆ. ತನ್ನಿಂದ ತಾನೆ ಆಗಿಂದಾಗಲೇ ಸ್ಫೋಟಗೊಳ್ಳುತ್ತಿದ್ದ ರೈತರ ಚಳುವಳಿ ನಿಧಾನವಾಗಿ ಸಂಘಟಿತ ರೂಪ ಪಡೆಯುತ್ತಿದೆ. ತನ್ನ ಗುರಿಯನ್ನು ಕಂಡುಕೊಳ್ಳುತ್ತಿದೆ.

ಮತ್ತೆ 1980 ರಲ್ಲಿ ನರಗುಂದ - ನವಲಗುಂದ ಬಂಡಾಯಗಳೊಂದಿಗೆ ರಾಜ್ಯಾದ್ಯಂತ ಒಮ್ಮಿಂದೊಮ್ಮಲೇ ಸ್ಫೋಟವಾದ ರೈತ ಚಳುವಳಿಯ ಪ್ರಮಾಣಕ್ಕೆ ಏರುತ್ತಿದೆ.

1991 ರಿಂದ ಆರಂಭವಾದ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಧಾಳಿಗೆ ಹಿಂದೆ ಹಿಂದೆ ಸರಿಯುತ್ತಿದ್ದ ರೈತರು, ಆ ಪೆಟ್ಟುಗಳನ್ನೆಲ್ಲಾ ಸಹಿಸಿಕೊಂಡು, ಹೇಗೋ ಮಾಡಿ ಬದುಕಿಬಿಡುತ್ತೇವೆಂದು ಹೆಣಗಿದ ರೈತರು ಇಂದು ನಮಗೆ ಬೇರೆ ಯಾವ ಮಾರ್ಗವೂ ಇಲ್ಲ. ಆ ಬೆಳೆ ನಷ್ಟ ಇದರ ಬೆಲೆ ಕುಸಿಯಿತು ಎಂದು ಮತ್ತೊಂದು ಬೆಳೆ ಹಿಡಿದರೆ ಅದು ಕೂಡ ಮಣ್ಣಾಯಿತು ಎಂದು ಅರಿತುಕೊಳ್ಳುತ್ತಿದ್ದಾರೆ. ಗುಲ್ಬರ್ಗ ರೈತರು ಆತ್ಮಹತ್ಯೆ ಮಾಡಿಕೊಂಡರು ಎಂಬ ಸುದ್ದಿ ಅಯ್ಯೋಪಾಪ ಎಂದು ಲೊಚಗುಟ್ಟಿ ಸುಮ್ಮನಾಗಿದ್ದ ಕರ್ನಾಟಕದ ಇತರ ಭಾಗಗಳ ರೈತರು ಈ ಆತ್ಮಹತ್ಯೆಯ ಕೇಡು ತಮ್ಮನ್ನೇ ಅರಸಿ ಬರುತ್ತಿರುವ ಪರಿಯನ್ನು ನೋಡಿ ಆತಂಕಗೊಂಡಿದ್ದಾರೆ.

ಇಷ್ಟೆಲ್ಲಾ ಅಲ್ಲೋಲ ಕಲ್ಲೋಲವಾಗುತ್ತಿದ್ದರೂ ಮಿಣ್ಣನೆ ತಣ್ಣಗಿರುವ ಬಿಜೆಪಿ ಕೂಟದ ಕೇಂದ್ರ ಸರ್ಕಾರದ ಬಗ್ಗೆ, ಕೇವಲ ಮಾತು, ಮಾತು, ಮಾತಿನ ಕರಾಮತ್ತಿನಲ್ಲೇ ತೃಪ್ತಿ ಪಡಿಸಲು ಯತ್ನಿಸುತ್ತಿರುವ ರಾಜ್ಯ ಸರ್ಕಾರದ ಬಗ್ಗೆ ಅತೃಪ್ತರಾಗಿದ್ದಾರೆ. ಸಿಡಿದೇಳಲು ಅಣಿಯಾಗುತ್ತಿದ್ದಾರೆ

ರೈತರು ಬರುವರು ದಾರಿಬಿಡಿ
ರೈತರ ಕೈಗೆ ರಾಜ್ಯಕೊಡಿ

ಎಂಬ ಘೋಷಣೆ ಮೊಳಗಿಸಲು ತಾಲೀಮು ನಡೆಸುತ್ತಿದ್ದಾರೆ.

ಕೇಳ್ ಕೇಳ್ ಕೇಳೆಲೋ ಜೋಡಿ
ನೀನಲ್ಲೊ ನಮ್ಮ ಸಮಾನ ಜೋಡಿ
ಸರಿ ಸರಿ ಸರಿ ಹಿಂದಕ್ಕ
ಸಾಗಿ ಬರುತೇವ ಮುಂದಕ್ಕ
ಈಗ ಮಾಡಿವಿ ಆರಂಭ
ದೆಲ್ಲಿಲ್ಲಿ ಊರೀವಿ ರಣಗಂಭ

ಎಂದು ವಾಜಪೇಯಿಗೆ ಅವರ ಕೂಟಕ್ಕೆ ಹೇಳಲು ಕಾತರರಾಗಿದ್ದಾರೆ. ರೈತರ ಹೋರಾಟವೂ ಅಲೆ ಹೊರಹೊಮ್ಮಲಿ, ನಾಡು ಜಾಗತೀರಣದ ಶಾಪದಿಂದ ಮುಕ್ತವಾಗಲಿ.

ಜಿ.ಎನ್.ನಾಗರಾಜ್

ರಾಜ್ಯಾದ್ಯಂತ ನಡೆದ ಪಿಕೆಟಿಂಗ್, ಜೈಲ್‌ಭರೋ ಉಕ್ಕಿ ಹರಿದ ಹೋರಾಟ

ಬಳ್ಳಾರಿ: ಫೆಬ್ರವರಿ 5 ರಂದು ಬಳ್ಳಾರಿ ನಗರದಲ್ಲಿ ಒಟ್ಟು 300 ಜನ ರೈತ ಕೂಲಿಕಾರರು, ಹಮಾಲರು ಮತ್ತು ಸಿಐಟಿಯು,ಎಐಟಿಯುಸಿ, ಎಸ್‌ಎಫ್‌ಐ ಕಾರ್ಯಕರ್ತರು ಸಿಪಿಐ(ಎಂ) ಮುಖಂಡರಾದ ಕಾಂ. ಎಸ್.ವೈ.ಗುರುಶಾಂತ್, ಸಿಪಿಐ ಮುಖಂಡರಾದ ಕಾಂ. ಅರವಿಂದ ಮಲೆಬೆನ್ನೂರ್, ಪ್ರಸನ್ನ, ಬಸವರಾಜ್ ಭಾಗವಹಿಸಿದ ಬೃಹತ್ ಪ್ರತಿಭಟನಾ ಮೆರವಣಿಗೆ ನಗರದಲ್ಲಿ ನಡೆಸಿ, ಜಿಲ್ಲಾಧಿಕಾರಿಗಳ ಪಿಕೆಟಿಂಗ್ ನಡೆಸಿ ಸುಮಾರು 150 ಜನರನ್ನು ಪೋಲೀಸರು ಬಂಧಿಸಿ ಬಿಡುಗಡೆ ಮಾಡಿದರು. ಅಂಚೆ ಹಾಗೂ ಜಿಲ್ಲಾಧಿಕಾರಿಗಳ ಕಛೇರಿ ಎದುರು ಸುಮಾರು ಒಂದೂವರೆ ತಾಸು ರಸ್ತೆ ತಡೆ, ಪಿಕೆಟಿಂಗ್ ನಡೆಯಿತು.

ಶಿರಗುಪ್ಪ ತಾಲೂಕಿನಲ್ಲಿ 500 ಕ್ಕೂ ಹೆಚ್ಚು ಜನರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ 60 ಕ್ಕೂ ಹೆಚ್ಚು ಮಹಿಳೆಯರಿರುವ 300 ರಷ್ಟು ರೈತ ಕೂಲಿಕಾರ, ಹಮಾಲರು ಬಂಧನಕ್ಕೊಳಗಾದರು.

ಮೊಳಕಾಲ್ಮೂರನಲ್ಲಿ ಸುಮಾರು 300 ಜನ ರೈತರು, ಕೂಲಿಕಾರರು, ನಾಗರೀಕರು ರಾಂಪುರದಲ್ಲಿ ಬೆಂಗಳೂರು-ಬಳ್ಳಾರಿ ಹೆದ್ದಾರಿಯಲ್ಲಿ ರಸ್ತೆ ತಡೆಯನ್ನು 3 ತಾಸುಗಳ ಕಾಲ ನಡೆಸಲಾಗಿದೆ. ನಂತರ ಫೆ. 7 ರಂದು ಮೊಳಕಾಲ್ಮೂರಿನಲ್ಲಿ ಪಿಕೆಟಿಂಗ್ ನಡೆಸಲಾಗಿದೆ. ಇದರ ಪೂರ್ವದಲ್ಲಿ ರೈತ ಸಂಘದ ವಿಭಾಗೀಯ ಮಟ್ಟದ ರೈತರ ಸಮಾವೇಶ ನಡೆಸಲಾಗಿದೆ. ಕಾಂ. ಜಿ.ಸಿ.ಬಯ್ಯಾರೆಡ್ಡಿ ಹಾಜರಿದ್ದರು. ಪಿಕೆಟಿಂಗ್‌ನಲ್ಲಿ ಪಾಲ್ಗೊಂಡವರ ಸಂಖ್ಯೆ 200 ಕ್ಕೂ ಅಧಿಕವಾಗಿತ್ತು. ಹಳ್ಳಿ, ಹಳ್ಳಿಗಳಲ್ಲಿ ಬಹಿರಂಗ ಸಭೆ ನಡೆಸಲಾಗಿದೆ.

ಸಂಡೂರು: ತೋರಣಗಲ್ಲು ಗ್ರಾಮದಲ್ಲಿ ವಿದ್ಯುತ್ ಪ್ರಶ್ನೆಯ ಮೇಲೆ ಸುಮಾರು 250 ಕ್ಕೂ ಹೆಚ್ಚು ಪಂಪ್‌ಸೆಟ್‌ದಾರರು ಜನವರಿ 15 ರಂದು ಪ್ರತಿಭಟನೆ ನಡೆಸಿದರು. ಬಹಿರಂಗ ಸಭೆಯಲ್ಲಿ ಪಿಕೆಟಿಂಗ ಚಳುವಳಿ ಬಗೆ ವಿವರಿಸಲಾಗಿದೆ. ಫೆ 7 ರಂದು ಕುರೇಕುಪ್ಪ ಹತ್ತಿರದ ಸುಮಾರು 350 ಜನ ರೈತರು ಭಾಗವಹಿಸಿ ಬಳ್ಳಾರಿ-ಹೊಸಪೇಟೆ ಹೆದ್ದಾರಿಯನ್ನು ಸುಮಾರು 2 ಗಂಟೆಗಳ ಕಾಲ ತಡೆದು 150 ಜನರು ಬಂಧನಕ್ಕೊಳಗಾದರು. ವಾಹನ ಸೌಲಭ್ಯವಿಲ್ಲದೆ ಉಳಿದವರು ಬಂದಿಸಲ್ಪಟ್ಟಿಲ್ಲ. ಕರ್ನಾಟಕ ಪ್ರಾಂತರೈತ ಸಂಘ, ಡಿವೈಎಫ್‌ಐ ಹಾಗೂ ಕುರೇಕುಪ್ಪ ಭಗತ್ ಸಿಂಗ್ ಯುವಕರ ಸಂಘ ರಸ್ತೆ ತಡೆಯಲ್ಲಿ ನಾಯಕತ್ವ ವಹಿಸಿದ್ದವು.

ಫೆ. 7 ರಂದು ಹೊಸಪೇಟೆ ನಗರದಲ್ಲಿ ಅಂಗನವಾಡಿ ನೌಕರರ ಸಂಘ ಹಾಗೂ ಸಿಐಟಿಯು ಮತ್ತು ಡಿವೈಎಫ್‌ಐ ನಾಯಕತ್ವದಲ್ಲಿ ಸುಮಾರು ಒಂದು ತಾಸು ರಸ್ತೆ ತಡೆಯನ್ನು 150 ಜನರು ನಡೆಸಿ ಬಂಧನಕ್ಕೊಳಗಾದರು. ಇವರಲ್ಲಿ ಸುಮಾರು 100 ಜನ ಮಹಿಳೆಯರು ಪಾಲ್ಗೊಂಡಿದ್ದು ವಿಶೇಷ

ನಾಲ್ಕು ಹಳ್ಳಿಗಳಲ್ಲಿ ಪ್ರತಿಕೃತಿ ದಹನ, ಸಹಿ ಸಂಗ್ರಹ ಹಾಗೂ ಬಹಿರಂಗ ಸಭೆ ನಡೆಸಲಾಗಿದೆ. ನೂರಾರು ರೈತ, ಕೂಲಿಕಾರರ ಮೆರವಣಿಗೆ ಹಾಗೂ ಪಿಕೆಟಿಂಗ್ ಫೆ 5 ರಂದು ನಡೆಸಿ ಸುಮಾರು 50 ಕ್ಕೂ ಹೆಚ್ಚಿನ ಕಾರ್ಯಕರ್ತರು ಬಂಧನಕ್ಕೊಳಗಾಗಿದ್ದಾರೆ.


ಬೆಂಗಳೂರು

ಒಟ್ಟಾರೆ ಸುಮಾರು 5000 ಕ್ಕೂ ಹೆಚ್ಚಿನ ಜನರು ಪಿಕೆಟಿಂಗ್ ಚಳುವಳಿ, ಬಹಿರಂಗ ಸಭೆಯಲ್ಲಿ ಪಾಲ್ಗೊಂಡರೆ, ಸುಮಾರು 1000 ಜನರು ಬಂಧನಕ್ಕೊಳಗಾಗಿದ್ದಾರೆ. ಸುಮಾರು 2000 ಜನರು ಪ್ರತಿಭಟನಾ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ.

ಬೆಂಗಳೂರು ಜಿಲ್ಲೆ : ಹೊಸಕೋಟೆ - ಈ ಚಳುವಳಿ ಉದ್ದೇಶಗಳನ್ನು ವಿವರಣೆಗಾಗಿ ಹಳ್ಳಿ ಹಳ್ಳಿಗಳಿಗೆ 7 ದಿನಗಳ ವ್ಯಾನ್ ಮೂಲಕ ಪ್ರಚಾರ ಜಾಥಾ ತಾಲೂಕಿನಲ್ಲಿ ನಡೆದಿದೆ. 5 ರಂದು ನಂದಗುಡಿ(ಹೋಬಳಿ) ಯಲ್ಲಿ ಸುಮಾರು 400 ರೈತರಿಂದ 2 ಗಂಟೆಗಳ ರಸ್ತೆ ತಡೆ ನಡೆದಿದೆ. 7 ರಂದು ಹೊಸಕೋಟೆ ಪಟ್ಟಣದಲ್ಲಿ ಸುಮಾರು 1500 ರೈತರ ಬೃಹತ್ ಮೆರವಣಿಗೆ ನಡೆಸಿ, ಕೆಪಿಟಿಸಿಲ್ ಕಛೇರಿಗೆ ಮುತ್ತಿಗೆ ಹಾಕಿದ್ದಾರೆ. ರಾಷ್ಟ್ರೀಯ ಹೆದ್ದಾರಿಯನ್ನು ಎಸ್‌ಎಫ್‌ಐ ಮತ್ತು ಅಂಗನವಾಡಿ ನೌಕರರು, ರೈತರು ಸುಮಾರು 3 ಗಂಟೆಗಳ ಕಾಲ ಬಂದ್ ಮಾಡಲಾಗಿದೆ. ಈ ಚಳುವಳಿ ಆರಂಭಗೊಳ್ಳುವ ಮೊದಲೇ ಕೆಪಿಟಿಸಿಎಲ್‌ನ ಕಛೇರಿಗೆ ಬೀಗ ಹಾಕಿ ಸಿಬ್ಬಂದಿ ಖಾಲಿಯಾದದ್ದು ವಿಶೇಷ. ಪ್ರಾಂತ ರೈತ ಸಂಘ, ಪಂಪಸೆಟ್ ಬಳಕೆದಾರರ ಸಂಘ, ಅಂಗನವಾಡಿ ನೌಕರರು, ಎಸ್‌ಎಫ್‌ಐ ಮುಂತಾದ ಸಂಘಟನೆಗಳುಭಾಗವಹಿಸಿವೆ. ಬೃಹತ್ ಬಹಿರಂಗ ಸಭೆಯಲ್ಲಿ ರೈತ ಮುಖಂಡ ಆರ್.ಆರ್.ಮನೋಹರ್ ಡಿವೈಎಫ್‌ಐ ಮುಖಂಡ ಎಸ್.ವೈ.ಗುರುಶಾಂತ್, ವಕೀಲರ ಸಂಘದ ನಾಯಕ ಆರ್.ಆರ್.ಹರೀಂದ್ರ, ಎಸ್‌ಎಫ್‌ಐ ರಾಜ್ಯ ಕಾರ್ಯದರ್ಶಿ ರಾಮಕೃಷ್ಣ ಆರ. ಅಂಗನವಾಡಿ ಪ್ರಭಾ, ಅಭಾ ಸಿಂಗ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಮಾಜಿ ಶಾಸಕರಾದ ಸೂರಂ ರಾಮಯ್ಯ ಮುಂತಾದವರು ಮಾತನಾಡಿದರು.

ದೊಡ್ಡಬಳ್ಳಾಪುರ: ನೂರಾರು ರೈತರಿಂದ ತಾಲೂಕು ಕಛೇರಿ ಕಛೇರಿ ಪಿಕೆಟಿಂಗ್

ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ನೂರಾರು ರೈತರು ಪುರಸಭೆ ಆವರಣದಿಂದ ಮೆರವಣಿಗೆ ಹೊರಟು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಂತರ ತಾಲ್ಲೂಕು ಕಛೇರಿಯನ್ನು ಮುತ್ತಿಗೆ ಹಾಕಿದರು.

ಕಛೇರಿಯ ಮುಖ್ಯದ್ವಾರವನ್ನು ಕಬ್ಬಿಣದ ಸರಳುಗಳಿಂದ ಬಿಗಿಗೊಳಿಸಲಾಗಿ ರೈತರು ಅಲ್ಲೇ ಕುಳಿತು ಸುಮಾರು ಮೂರುವರೆ ಗಂಟೆಗಳ ಕಾಲ ಕಛೇರಿಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಿದರು. ಈ ಸಂದರ್ಭದಲ್ಲಿ ಧರಣಿ ನಿರತರನ್ನು ಉದ್ದೇಶಿಸಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಮುಗುವಾಳಪ್ಪ, ಜೈರಾಂ, ಕೆಪಿಆರ್‌ಎಸ್ ನ ಚಂದ್ರುತೇಜಸ್ವಿ, ಸಿಐಟಿಯುವಿನ ಮೀನಾಕ್ಷಿ ಸುಂದರಂ, ಜನವಾದಿ ಮಹಿಳಾ ಸಂಘಟನೆಯ ಎನ್.ಪ್ರಭಾ, ಡಿವೈಎಫ್‌ಐ ನ ಸಂಜೀವಪ್ಪ, ಎಸ್‌ಎಫ್‌ಐ ನ ರಾಜಶೇಖರ್


ಬಳ್ಳಾರಿ

...ರ ಕೈಗೆ ರಾಜ್ಯಕೋಡಿ

ವಿರೋಧಿ ನೀತಿಗಳನ್ನು ಖಂಡಿಸಿದರು. ಜೊತೆಗೆ ಗುಲ್ಬರ್ಗಾದಲ್ಲಿ ರೈತರಿಗೆ ಕೈಕೋಳ ತೊಡಿಸಿ ಉದ್ಧಟತನ ಪ್ರದರ್ಶಿಸಿದ ಸರ್ಕಾರದ ವಿರುದ್ಧ ಖಂಡನಾ ನಿರ್ಣಯನ್ನು ಅಂಗೀಕರಿಸಿದರು.

ಇದಕ್ಕೂ ಪೂರ್ವಭಾವಿಯಾಗಿ ಫೆ 5 ರಂದು ತಾಲೂಕಿನ ಕೆಲವು ಕಡೆ ರಸ್ತ ತಡೆ ನಡೆಸಲಾಯಿತು.

ಕೋಲಾರ-ತುಮಕೂರು ರಸ್ತೆಯ ದೊಡ್ಡ ಬೆಳವಂಗಲದಲ್ಲಿ ಸುಮಾರು ಎರಡು ನೂರು ಜನ ಭಾಗವಹಿಸಿದ್ದ ರಸ್ತೆ ತಡೆ ಕಾರ್ಯಕ್ರಮ. ಒಂದೂವರೆ ಗಂಟೆಗಿಂತಲೂ ಹೆಚ್ಚು ಕಾಲ ನಡೆಯಿತು. ಈ ಸಂದರ್ಭದಲ್ಲಿ ಸಾರ್ವಜನಿಕರಿಂದ ಹೋರಾಟಕ್ಕೆ 700 ರೂಪಾಯಿಗಳಷ್ಟು ನಿಧಿ ಸಂಗ್ರಹಿಸಲಾಯಿತು. ರಸ್ತೆ ತಡೆಯ ನೇತೃತ್ವವನ್ನು ಪ್ರಭಾ, ಮೀನಾಕ್ಷಿ ಸುಂದರಂ, ನಾರಾಯಣಚಾರ್, ಜಯರಾಂ, ಸುರೇಶ್, ವಿಜಯಕುಮಾರ್, ಗಂಗಾಧರ್ ಮುಂತಾದವರು ವಹಿಸಿದ್ದರು. ದೊಡ್ಡಬಳ್ಳಾಪುರ-ಚಿಕ್ಕಬಳ್ಳಾಪುರದ ನಡುವಿನ ಮಳೇಕೋಟೆ ಕ್ರಾಸ್‌ನಲ್ಲಿ ಸುಮಾರು 200-250 ರೈತರು ಬೀದಿಗಿಳಿದು ಒಂದೂವರೆ ಗಂಟೆ ಕಾಲ ರಸ್ತೆ ತಡೆ ನಡೆಸಿದರು. ಚಂದ್ರುತೇಜಸ್ವಿ, ಗೋವಿಂದರಾಜು, ಕೃಷ್ಣಮೂರ್ತಿ, ನಾಗರಾಜು, ಮಂಜುನಾಥ್ ಮುಂದಾಳತ್ವ ವಹಿಸಿದ್ದರು. ದೊಡ್ಡಬಳ್ಳಾಪುರ-ಆರೂಡಿ ನಡುವಿನ ನೇರಳಘಟ್ಟ ಗ್ರಾಮದ ಬಳಿ 200 ರೈತರು ಒಂದೂವರೆ ಗಂಟೆ ಕಾಲ ರಸ್ತೆ ತಡೆ ನಡೆಸಿದರು. ರಮೇಶ್, ಕೆಂಪೇಗೌಡ, ಮಾದೇಶ ಮುಂತಾದವರು ನೇತೃತ್ವ ವಹಿಸಿದ್ದರು.

ದೊಡ್ಡಬಳ್ಳಾಪುರ-ನೆಲಮಂಗಲ ನಡುವಿನ ಅರಳುಮಲ್ಲಿಗೆ ಗ್ರಾಮದಲ್ಲಿ 350 ರಿಂದ 400 ರೈತರು, ಯುವಜನರು ಸೇರಿ ಒಂದೂವರೆ ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿದರು. ಹೇಮಂತರಾಜು, ವೆಂಕಟೇಶ್, ಶಾಂತಮ್ಮ ಅಂಜನಾಮೂರ್ತಿ, ಸಂಜೀವಪ್ಪ ಮುಂತಾದವರು ನಾಯಕತ್ವ ವಹಿಸಿದ್ದರು.

ಮೂರು ದಿನಗಳ ವ್ಯಾನ್ ಪ್ರಚಾರ, ಸೈಕಲ್ ಜಾಥಾ ಹಳ್ಳಿಗಳ ಭೇಟಿ ಮುಂತಾದವುಗಳ ಮೂಲಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲಾಯಿತು.

ಬೆಂಗಳೂರು ಜಿಲ್ಲೆಯ ಆನೇಕಲ್ಲ, ಚಂದ್ರಾಪುರ, ಉತ್ತರ-ದಕ್ಷಿಣ ತಾಲೂಕುಗಳಲ್ಲಿ ಚಳುವಳಿ ನಡೆದ ವರದಿಗಳಿವೆ.



ಗುಲಬರ್ಗಾ: ಗೋಳು ತೋಡಿಕೊಂಡವರಿಗೆ ಕೋಳ ತೊಡಿಸಿ ಬಡಿದ ಪೋಲೀಸರು

ಮಾನ್ವಡೆ, ನೀಲಾ, ವೀರೂಪಾಕ್ಷ ಮತ್ತು ನ್ಯಾಯಕ್ಕಾಗಿ ನಿಂತವರು ಜೈಲಿನಲ್ಲಿ

ನಿನ್ನೆ ದಿನ ನನ್ನ ಜನ
ಬೆಟ್ಟದಂತೆ ಬಂದರು
ಕಪ್ಪು ಮುಖ ಬೆಳ್ಳಿ ಗಡ್ಡ ಉರಿಯುತ್ತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ....

ಇತ್ತೀಚೆಗೆ ಗುಲಬರ್ಗಾದಲ್ಲಿ ನಡೆದ ಇಂತಹ ಹೋರಾಟದ ಜನಸಾಗರವನ್ನು ನೋಡಿಯೇ ಸಿದ್ದಲಿಂಗಯ್ಯನವರು ಮೇಲಿನ ಕವನ ಬರೆದಿರಬೇಕು.

'ನಿನ್ನೆ ರಾತ್ರಿ ನಿದ್ದೀನಿ ಬಂದಿಲ್ಲ ನೋಡ ಚಂದಮ್ಮ, ಬೆಟ್ಟ ಬೆಳಗಾನ ಬೇಚೈನಿ ಅಂದ್ರ ಬೇಚೈನಿ. ಊಟಕುಂತ ಊಟನ ಹೋಗಿಲ. ಮೇಡಮ್ ಸಾಬ್ರು ಯಾವಾಗ ಬರತಾರಂತ. ಕುದಿ ಆಗತಿ ಪೋಲೀಸರಿಗೆ ಬಟ್ಟೆ ಬಿಚ್ಚಿ ಹೊಡೀಬೇಕು' ಅಂತಾ ಗುಂಪು ಗುಂಪಾಗಿ ಮಹಿಳೆಯರು ಮಾತಾಡೋ ಸುದ್ದಿ ಇಡೀ ಗುಲ್ಬರ್ಗಾದ ಉಪ್ಪ ಓಣ್ಯಾಗ ಚರ್ಚೆನೇ ಚರ್ಚೆ. ಇಡೀ ರಾತ್ರಿಯೆಲ್ಲಾ ಚಂದಮ್ಮ ಗುರುತಾಯಿ, ಪದ್ಮಿನಿ, ಮರುಳಮ್ಮ ಸಂಗಮ್ಮ ಸಕುಬಾಯಿ ಇನ್ನೂ ಹತ್ತಾರು ಮಹಿಳೆಯರು ಅನೇಕ ರೈತ-ಕಾರ್ಮಿಕರು, ವಿದ್ಯಾರ್ಥಿ-ಯುವಜನರು ಓಡಾಡಿ ಬೀದಿಗೆ ಜೀವ ತುಂಬಿದ್ದರು.

ಗುಲ್ಬರ್ಗಾ ಅಂತಾ ಗುಲ್ಬರ್ಗಾದ ಇಡೀ ಜನ ಪೋಲೀಸರದ ತಪ್ಪೈತಿ ಬಿಡ್ರಿ ಅಂತಾ ಅನ್ನೋದು ಪೋಲೀಸರ ಎದ್ಯಾಗ ಚುರುಕು ಮೂಡಿಸಿತ್ತು. ಅದಕ್ಕ ಈಗ ಏನಾತೈತೋ ಇನ್ನೂ ಸ್ವಲ್ಪ ಹೊತ್ತಿನಾಗ ಏನು ಆತೈತೋ ಅಂತ ಪೋಲೀಸ್ ಅಧಿಕಾರಿಗಳು ಗಾಬರಿಯಾಗಿದ್ದು, ಕಕ್ಕಾಬಿಕ್ಕಿಯಾಗಿದ್ದು ರಾಷ್ಟ್ರೀಯ ಪತ್ರಿಕೆಗಳೇ ವರದಿ ಮಾಡಿವೆ.

ಕೇಂದ್ರ ಸರ್ಕಾರದ ಆಮದು ನೀತಿ ವಿರೋಧಿಸಿ, ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳ ವಿರೋಧಿದಿ ವಿವಿಧ ರೈತ ಸಂಘಟನೆಗಳು ಸೇರಿ ರಾಷ್ಟ್ರವ್ಯಾಪಿ ಕರೆಕೊಟ್ಟಿದ್ದ ರಸ್ತಾರೋಕೋ, ಪಿಕೆಟಿಂಗ್, ಜೈಲ್‌ಭರೋ ಕಾರ್ಯಕ್ರಮದಂಗವಾಗಿ ಗುಲ್ಬರ್ಗಾದಲ್ಲಿಯೂ ಫೆಬ್ರವರಿ 5 ರಂದು ಜಿಲ್ಲೆಯ ವಿವಿಧ ತಾಲೂಕು ಕೇಂದ್ರಗಳಲ್ಲಿ ಮತ್ತು ಪ್ರಮುಖ ಕೇಂದ್ರಗಳಲ್ಲಿ ಅತ್ಯಂತ ಯಶಸ್ವಿಯಾಗಿ ರಸ್ತಾರೋಕೋ ಕಾರ್ಯಕ್ರಮಗಳು ನಡೆದುವು. ರೈತರು, ಮಹಿಳೆಯರು, ಕಾರ್ಮಿಕರು, ವಿದ್ಯಾರ್ಥಿ, ಯುವಜನರು ಮೈ ಚಳಿ ಬಿಟ್ಟು ಬೀದಿಗೆ ಬಂದಿದ್ದರು.

ದಿನಾ ದಿನಾ ಸಾಯೋದಕ್ಕಿಂತ ಗುಜರಾತ್‌ನಂಗೆ ಒಮ್ಮೆ ಇಲ್ಲಿಯೂ ಭೂಕಂಪ ಬಂದಿದ್ರ ರೈತರನ್ನು ಸುಲಿಯೋ ಜನಾನಾದ್ರೂ ಕಮ್ಮಿ ಆಗ್ತಿದ್ರು. ಆತ್ಮಹತ್ಯೆ ಮಾಡಿಕೊಳ್ಳೋದು ತಪ್ಪಿತ್ತು ಅಂತ ಜನ ಆಡಿಕೊಳ್ಳೋ ಹೊತ್ನ್ಯಾಗ ಪ್ರಾಂತ ರೈತ ಸಂಘದವರು, ಯುವಕರು ಊರೂರಿಗೆ ಸೈಕಲ್ ಜಾಥಾ, ಜೀಪ್ ಜಾಥಾ ಮಾಡಿ ಸಭೆ, ಚರ್ಚೆ ಮುಖಾಂತರ ಜಾಗೃತಿ ಮೂಡಿಸಿ ರೈತರಿಗೆ ಸಾಯುವುದೊಂದೇ ದಾರಿ ಎಂದು ಸಾರಿ ಸಾರಿ ಹೇಳಿದ ಮುಖಂಡರ ಮಾತಿಗೆ ಬೆಲೆ ಕೊಟ್ಟು ಎಲ್ಲ ಕಡೆ ಸಾವಿರಾರು ಸಂಖ್ಯೆಯಲ್ಲಿ ರೈತರು, ಯುವಜನರು, ಮಹಿಳೆಯರು ಸೇರಿ ಹತ್ತು ಹಲವು ಕರೆ ರಸ್ತಾರೋಕೋ ಕಾರ್ಯಕ್ರಮ ಯಶಸ್ವಿ ಯಾಗಿ ನಡೆಸಿದರು. ಬೆವರು ಸುರಿಸಿ ಬೆಳೆದ ತೊಗರಿಯನ್ನು ಬೀದಿಗೆ ಚೆಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದರು.

ಜಿಲ್ಲೆಯ ಆಳಂದ, ಚಿಂಚೋಳಿ, ಶಹಾಪುರ, ಸುರಪೂರ, ಅಫಜಲಪುರ, ಜೇವರ್ಗಿ, ಯಾದಗಿರಿ,



ಸೇಡಂ, ಕಮಲಾಪುರ, ಮಹಾಗಾಂವ ಕ್ರಾಸ್, ಪರಜಾಬಾದ್ ಮತ್ತು ಚಿತ್ತಾಪೂರ ತಾಲೂಕಿನ ಮಾಡಬಾಳ ಕ್ರಾಸ್ ಬಳಿ ಯಶಸ್ವಿ ರಸ್ತಾರೋಕೋ ಕಾರ್ಯಕ್ರಮಗಳು ನಡೆದವು. ಅನೇಕ ಕಡೆ ಬಹುಸಂಖ್ಯೆಯಲ್ಲಿ ಮಹಿಳೆಯರು ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ರೈತರ ಮೇಲೆ ಲಾಠಿ ಚಾರ್ಜ್

ಚಿತ್ತಾಪೂರ ತಾಲೂಕಿನ ಮೂಡಬೂಳ ಕ್ರಾಸಿನಲ್ಲಿ ರೈತರು, ವಿದ್ಯಾರ್ಥಿಯುವ ಜನರು, ಮಹಿಳೆಯರು ಸೇರಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳನ್ನು ವಿರೋಧಿಸಿ ಜನತೆಯ ಬೇಡಿಕೆಗಳಿಗೆ ಒತ್ತಾಯಿಸಿ ರಸ್ತಾರೋಕೋ ಕಾರ್ಯಕ್ರಮ ಯಶಸ್ವಿಯಾಗಿ 4 ತಾಸುಗಳವರೆಗಾದರೂ ತಾಲೂಕಿನ ಯಾವೊಬ್ಬ ಅಧಿಕಾರಿಗಳು ಚಳುವಳಿಗಾರರ ಬೇಡಿಕೆಗಳಿಗೆ ಸ್ಪಂದಿಸಲು ಭೇಟಿಗೆ ಬರಲಿಲ್ಲ.

ನಮ್ಮ ಗೋಳನ್ನು ತೋಡಿಕೊಳ್ಳಲು ಅಧಿಕಾರಿಗಳನ್ನು ಕರೆಸಿ, ನಾವು ನಿಮಗೆ ಮನವಿ ಕೊಡುವುದಿಲ್ಲ ಎಂದು ಉತ್ತರಿಸಿದಾಗ ಪೋಲೀಸರ ಲಾಠಿಗೆ ಸ್ವಾತಂತ್ರ್ಯ ಸಿಕ್ಕಿತು. ಸಿಕ್ಕಾಪಟ್ಟೆ ಲಾಠಿ ಚಾರ್ಜ್ ಮಾಡಿದರು. ರೈತರು, ಮಹಿಳೆಯರು ದಿಕ್ಕುಪಾಲಾದರು. ಸಿಕ್ಕ ಸಿಕ್ಕವರನ್ನು ದರದರ ಎಳೆದು ವ್ಯಾನಿನೊಳಗೆ ತುಂಬಿ ಬುರ್ ಅಂತ ಶಹಾಬಾದ್ ಪೋಲೀಸ್ ಠಾಣೆಯೊಳಗೆ ಕೂಡಿ ಹಾಕಿದರು. ಅನ್ಯಾಯವಾಗಿ ಬಂಧಿಸಿರುವುದಷ್ಟೇ ಅಲ್ಲ ಸುಳ್ಳು ಮೊಕ್ಕದಮೆಗಳನ್ನು ಹಾಕಿ ಮೈ ಕೈ ಕಾಲುಗಳಿಗೆ ಲಾಠಿಯಿಂದ ಮಾತನಾಡಿಸಿರುವುದು ಪೋಲೀಸರ ಕ್ರೌರ್ಯಕ್ಕೆ ಸಾಕ್ಷಿಯಾಗಿದೆ.

ಸುದ್ದಿ ತಿಳಿದ ತಕ್ಷಣ ರೈತ ಮುಖಂಡರು, ಮಹಿಳಾ ಮುಖಂಡರು ನೇರವಾಗಿ ಶಹಾಬಾದ ಪೋಲೀಸ್ ಠಾಣೆಗೆ ಧಾವಿಸಿ ಪೋಲೀಸರು ಲಾಠಿ ಚಾರ್ಜ್ ಮಾಡಿರುವ ಕ್ರಮವನ್ನು ಖಂಡಿಸಿದರು. ಪರಿಸ್ಥಿತಿಯನ್ನರಿತ ಪೋಲೀಸರು ರಾತ್ರಿ ಮೂರು ಗಂಟೆಗೆ ಗುಲಬರ್ಗಾದ ಸೆಂಟ್ರಲ್ ಜೈಲಿಗೆ ಕಳಿಸಿದರು. ಮರುದಿನ ಭೇಟಿ ಮಾಡಲು ಹೋದ ಮುಖಂಡರು ಚಳುವಳಿಗರಿಗಾಗಿರುವ ಪೆಟ್ಟು ಕಂಡು ತಕ್ಷಣ ಆಸ್ಪತ್ರೆಗೆ ದಾಖಲು ಮಾಡಲು ಒತ್ತಾಯಿಸಿದರು. ಜೈಲಿನ ಅಧಿಕಾರಿಗಳು ಪೋಲೀಸರು ಗಂಭೀರವಾಗಿ ಯೋಚಿಸಿ ಹೊತ್ತು ಮುಳುಗುವ ಸಮಯದಲ್ಲಿ ಗುಲಬರ್ಗಾದ ಸಾರ್ವಜನಿಕ ಆಸ್ಪತ್ರೆಗೆ 11 ಜನ ಕಾರ್ಯಕರ್ತರನ್ನು ಕೆಗಳಿಗೆ ಬೇಡಿ ಹಾಕಿ ಚಿಕಿತ್ಸೆಗಾಗಿ ಕಳಿಸಿದರು.

ರೈತರ ಕೈಗೆ ಬೇಡಿ..... ಮುಖಂಡರ ಮೇಲೆ ಮಾರಣಾಂತಿಕ ಹಲ್ಲೆ

ಕಾರ್ಯಕರ್ತರ ಆರೋಗ್ಯ ವಿಚಾರಿಸಲೆಂದು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ಮಾಡಲು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಜಿಲ್ಲಾ ಕಾರ್ಯದರ್ಶಿಯಾದ ವಿರೂಪಾಕ್ಷಪ್ಪ ತಡಕಲ್, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ನೀಲಾ ಕೆ. ಮತ್ತು ಜಿಲ್ಲಾ ಸಂಚಾಲಕಿ ಗಂಗಮ್ಮ ಬಿರಾದಾರ ಮತ್ತಿತರರು ಹೋದಾಗ ರೈತ-ಯುವಜನರ ಕೈಗಳಿಗೆ ಬೇಡಿ ತೊಡಿಸಿರುವುದು ನೋಡಿ ತೀವ್ರವಾಗಿ ಪ್ರತಿಭಟಿಸಿದರು. ಸಂಕೋಲೆಗಳನ್ನು ಕಳಚಲು ಒತ್ತಾಯಿಸಿದರು. ನ್ಯಾಯಯುತ ಬೇಡಿಕೆಗಳಿಗೆ ಹೋರಾಟ ಮಾಡುವ ಚಳುವಳಿಗಾರರಿಗೆ ಬೇಡಿ ತೊಡಿಸುದು ಸಮಂಜಸವಲ್ಲ. ಬೇಡಿಯನ್ನು ತೆಗೆಯಲೇ ಬೇಕು. ಇಲ್ಲದಿದ್ದರೆ ತೀವ್ರ ಪ್ರತಿಭಟನೆ ಎದುರಿಸಬೇಕಾಗುತ್ತದೆಂದು ಪೋಲೀಸರಿಗೆ ಎಚ್ಚರಿಕೆ ನೀಡಿದರು. ಆಗ ಆಸ್ಪತ್ರೆಯ ಆವರಣದಲ್ಲಿ 8-10 ಜನರಿದ್ದ ಪೋಲೀಸರು ಕ್ಷಣಾರ್ಧದಲ್ಲಿ ನೂರಾರು ಜನರಾದರು. ಆಗ ಪೋಲೀಸರೇ ಪ್ರಕ್ಷುಬ್ಧ ವಾತಾವರಣ ನಿರ್ಮಾಣ ಮಾಡಿ ಮನಸ್ಸಿಗೆ ಬಂದಂತೆ ಲಾಠಿ ಪ್ರಹಾರ ಮಾಡಲು ಪ್ರಾರಂಭಿಸಿದರು.


ಇತ್ತೀಚೆಗೆ ಬಿರ್ಗಿಯವರಿಗೆ ಘೇರಾವೋ ಹಾಕಿ ಹಿಗ್ಗಾಮುಗ್ಗ ಮಾಡಿ, ಸರ್ಕಾರದಿಂದ ರೈತರ ತೊಗರಿಗೆ 2 ಕೋಟಿ ರೂ. ಬಿಡುಗಡೆ ಮಾಡಿಸುವಲ್ಲಿ ಸಫಲರಾಗಿದ್ದ ರೈತ ಸಂಘದ ಚಳುವಳಿಯಿಂದ ಕಕ್ಕಾಬಿಕ್ಕಿಯಾಗಿದ್ದ, ಕೋಪಗೊಂಡಿದ್ದ ಗುಲ್ಬರ್ಗಾದಲ್ಲಿಯೇ ಸುಮಾರು ವರ್ಷಗಳಿಂದ ಬೀಡು ಬಿಟ್ಟ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿ ಡಿ.ಸಿ.ರಾಜಪ್ಪನವರ ಮಿಂಚಿನ ಕಾರ್ಯಾಚರಣೆಯ ನಿರ್ದೇಶನದ ಮೇರೆಗೆ ಬ್ರಹ್ಮಪುರ ಪೋಲೀಸ್ ಠಾಣೆಯ ರಮೇಶ ಕುಮಾರ ಅವರು ಮುಖಂಡರ ಮೇಲೆ ಲಾಠಿ ಪ್ರಹಾರ ಮಾಡಿ, ಜಿಲ್ಲಾ ಕಾರ್ಯದರ್ಶಿ ವಿರುಪಾಕ್ಷಪ್ಪ ತಡಕಲ್ ತಲೆಗೆ ಬಲವಾಗಿ ಲಾಠಿಯಿಂದ ಹೊಡೆದಾಗ ರಕ್ತ ಹರಿಯಿತು ಬೀದಿಗೆ. ಮಾರುತಿ ಮಾನ್ಪಡೆಯವರನ್ನು ಎ.ಎಸ್.ಪಿ. ರಾಜಪ್ಪನವರೇ ರೋಷದಿಂದ ಥಳಿಸಿದರು. ತಕ್ಷಣವೇ ನಾಲ್ಕು ಜನ ಮುಖಂಡರನ್ನು ಅಮಾನುಷವಾಗಿ ಕರೆದೊಯ್ದರು.

ಹರಿಯಿತು ರಸ್ತ ಬೀದಿಗೆ, ಬೀದಿಯ ತುಂಬ ಮೆರವಣಿಗೆ

ಫೆಬ್ರವರಿ 6ರ ರಾತ್ರಿ 8.30 ರ ಸುಮಾರಿಗೆ ನಡೆದ ರೈತ ಮಹಿಳಾ ಮುಖಂಡರ ಮೇಲೆ ನಡೆಸಿದ ಪೋಲೀಸರ ಹಲ್ಲೆ, ಬಂಧನದ ಸುದ್ದಿ ಕಾಡ್ಗಿಚ್ಚಿನಂತೆ ಜಿಲ್ಲೆಯಾದ್ಯಂತ ಹಬ್ಬಿತು. ಏನಾಗುವುದೋ ಎಂಬ ದುಗುಡದ ನಡುವೆ ಕಾಲ ಕಳೆದ ಪೋಲೀಸರು ಇಡೀ ಗುಲ್ಬರ್ಗಾ ನಗರವನ್ನು ಬೆಳಗಾಗುವುದರೊಳಗೆ ಪೋಲೀಸುಮಯ ಮಾಡಿದರು.

ಫೆಬ್ರವರಿ 7 ರಂದು ಸೂರ್ಯನ ಪ್ರಖರ ಬೆಳೆದಂತೆಲ್ಲಾ ಮೂಲೆ ಮೂಲೆಗಳಿಂದ ಸಾಗರದಂತೆ

ಪುಟ 9ಕ್ಕೆ



ಕಲಬೆರಕೆ ರಾಸಾಯನಿಕ ಗೊಬ್ಬರ ಪತ್ತೆಯಲ್ಲಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ವಿರೂಪಾಕ್ಷಪ್ಪ ತಡಕಲ್ ಮತ್ತು ಮಾನ್ಪಡೆ

ಹಣ ನುಂಗುವ 'ಆಶ್ರಯ'ಕ್ಕಾಗಿ ಶಾಸಕ ಸಂಪಂಗಿ ಮತ್ತು ಕಾಂಗ್ರೆಸ್‌ನ ಪಿತೂರಿಗಳು

ಆಶ್ರಯ ಯೋಜನೆಯಡಿಯಲ್ಲಿ ಹಣ ಬಾಚಿಕೊಳ್ಳುವ ಕಾಂಗ್ರೆಸ್ ಹಾಗೂ ಶಾಸಕ ಸಂಪಂಗಿ ನಡುವೆ ನಡೆದ ಹಗ್ಗಾಹಗ್ಗ, ಮಾಡಿದ ಅವ್ಯವಹಾರಗಳನ್ನು ಮುಚ್ಚಿಕೊಳ್ಳಲು ಫೆಬ್ರವರಿ 7 ರ ರೈತರ ಚಳುವಳಿಯನ್ನೇ ನೆಪವಾಗಿ ಬಳಸಿದರು. ಹಿಂದೆ ಮುಷ್ಟಿಯುದ್ಧ ಮಾಡಿ ಮುಖ ಊದಿಸಿಕೊಂಡವರು ಈಗ ಬೆಸೆದುಕೊಂಡಿರುವುದರ ಗೂಡಾರ್ಥವೇನು? ಪೋಲೀಸರ ಪಾಲೆಷ್ಟು?

ವರದಿ ಭಾಸ್ಕರ ರೆಡ್ಡಿ

ಬಾಗೇಪಲ್ಲಿಯು ತಾಲೂಕು ಪಂಚಾಯ್ತಿ ಕಛೇರಿ ಬಡವರಿಗೆ, ಚಿತ್ರಹಿಂಸೆ ನೀಡುವ ಕೇಂದ್ರವಾಗಿ ಪರಿಣಮಿಸಿದೆ. ಒಬ್ಬ ಸಾಮಾನ್ಯನಿಗೆ ಒಂದು ಮನೆಯಾಗಲೀ, ಒಂದು ಭಾಗ್ಯಜ್ಯೋತಿಯಾಗಲಿ, ಒಂದು ಚಿಕ್ಕ ಸಾಲವಾಗಲೀ ಸಿಗುವುದಿಲ್ಲ. ಅಲ್ಲಿ ಕೇವಲ ದುಡ್ಡಿದ್ದವರಿಗೆ, ಮಾತ್ರ ಲಭ್ಯ. ಇಲ್ಲದಿದ್ದರೆ ಸಾಧ್ಯವಿಲ್ಲ. ಒಂದು ಪೈಲು ಮುಂದೆ ಹೋಗಬೇಕಾದರೆ ನೂರಾರು ರೂಪಾಯಿಗಳ ಖರ್ಚಿನೊಂದಿಗೆ ತಿಂಗಳಾನುಗಟ್ಟಲೆ ತಿರುಗಾಡಬೇಕಾಗುವುದು. ಯಾವಾಗ ಬಂದರೂ ಇ.ಓ. ಸಾಹೇಬರು ಮಾತ್ರ ಕಛೇರಿಯಲ್ಲಿ ಇರುವುದಿಲ್ಲ ಬದಲಿಗೆ ಶಾಸಕರಿಗೆ ಇಷ್ಟವಾದ ಸ್ಥಳದಲ್ಲಿಯೇ ಅಥವಾ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಿಗೆ ಇಷ್ಟವಾದ, ಸ್ಥಳದಲ್ಲಿಯೇ ಕಛೇರಿಯ ಕೆಲಸ ನಿರ್ವಹಿಸುತ್ತಾ ಇರುವ 'ನಿಷ್ಠಾವಂತ'. ಇದರಿಂದ ಅವರು ಜನರ ಕೈಗೆ ಸಿಗುವುದಿಲ್ಲ. ಯಾವುದೇ ಯೋಜನೆಗೆ ಪಲಾನುಭವಿಗಳ ಆಯ್ಕೆ ಗ್ರಾಮ ಸಭೆಗಳ ಬದಲು ಬೆಂಗಳೂರಿನ ಶಾಸಕರ ಭವನದಲ್ಲಿಯೇ ಅಥವಾ ಇನ್ನಾವುದೋ ಹೋಟಲಿನಲ್ಲಿಯೇ ನಡೆಯುವುದು. ಅದರಿಂದ ಬಡಪಾಯಿಯವರೆಗೂ ಸರ್ಕಾರದ ಸೌಲಭ್ಯ ಬರುವುದಿಲ್ಲ. ಕೇವಲ ಉಳ್ಳವರಿಗೆ ಮಾತ್ರ ಅಂದರೆ, ಹಣ ಕೊಟ್ಟವರಿಗೆ ಮಾತ್ರ ಮನೆ, ಬಾಗ್ಯಜ್ಯೋತಿ ಇತ್ಯಾದಿ. ಸರ್ಕಾರಿ ಸೌಲಭ್ಯ ತಾರತಮ್ಯವಿಲ್ಲದೆ ಪಕ್ಷಬೇದ, ಜಾತಿಭೇದವಿಲ್ಲದೆ ಎಲ್ಲರಿಗೂ ಗ್ರಾಮ ಸಭೆಗಳ ಮೂಲಕ ಹಂಚಲ್ಪಟ್ಟಾಗ ಜನರಲ್ಲಿ ಅಸಮಾದಾನ, ಅತೃಪ್ತಿ ಅಷ್ಟಿರುವುದಿಲ್ಲ. ಅದರ ಬದಲು ಹಣ ಕಿತ್ತು ಆಯ್ಕೆ ಮಾಡಿದರೆ ಜನರಿಗೆ ಕೋಪ ಬರುವುದು ಸಹಜ.

ಅಂತಹ ಉದಾಹರಣೆ ಫೆಬ್ರವರಿ 7 ರಂದು ಬಾಗೇಪಲ್ಲಿ ತಾಲ್ಲೂಕು ಪಂಚಾಯ್ತಿ ಕಛೇರಿಯಲ್ಲೊಂದು ಮಾತಿನ ಚಕಮಕಿ ಜನರಿಗೂ ಅಧಿಕಾರಿಗಳಿಗೂ ನಡೆಯಿತು. ಜನರಿಗೂ ಸ್ವಲ್ಪ ದಾಂಧಲೆಯೂ ನಡೆಯಿತೆಂದು ವರದಿಯಿದೆ. ಈ ಘಟನೆಗೆ ಮೂಲ ಕಾರಣ ಯಾರು? ಈ ಘಟನೆಗೆ ಪ್ರೇರೇಪಿಸಿದವರು ಯಾರು? ಈ ಘಟನೆಯನ್ನು ರಾಜಕೀಯಗೊಳಿಸಲು ಪ್ರಯತ್ನಿಸಿದವರಾರು? ಈ ಘಟನೆಯ ಮುಖಾಂತರ ಭ್ರಷ್ಟ ಅಧಿಕಾರಿಗಳು ಬಚಾವ್ ಆಗಲು ಉರಿಯುತ್ತಿದ್ದ ಬೆಂಕಿಗೆ ಬೀರುಗಳಲ್ಲಿದ್ದ ಪೈಲುಗಳನ್ನು ಹಾಕಿದ್ದು ಎಲ್ಲವೂ ತನಿಖೆಗೆ ಒಳಗಾಗಬೇಕು?

ಹಣ ಝಣಝಣ ಎಂದಾಗ ಮನೆ ಆಯ್ಕೆಯಾದ ಪಟ್ಟಿ ಮಂಗಮಾಯ

ಜೂನ್ ಜುಲೈ ತಿಂಗಳಲ್ಲಿ ಗ್ರಾಮ ಪಂಚಾಯ್ತಿಗಳಿಗೆ ತಾಲ್ಲೂಕು ಪಂಚಾಯ್ತಿಯ ಸಲಹೆಯ ಮೇರೆಗೆ ಪ್ರತಿ ಪಂಚಾಯ್ತಿಗೂ 4 ಅಂಬೇಡ್ಕರ್ ಯೋಜನೆಯ ಮನೆಗಳು ಆಯ್ಕೆ ಮಾಡಲು ಅನುಮತಿ ಕೊಟ್ಟರು. ಅದರ ಮೂಲಕ ಗ್ರಾಮ ಪಂಚಾಯ್ತಿಗಳು ಕಾರ್ಯಪ್ರವೃತ್ತರಾಗಿ ಪ್ರತಿ ಗ್ರಾಮ ಪಂಚಾಯ್ತಿ ನಾಲ್ಕು ಫಲಾನುಭವಿಗಳನ್ನು ಗ್ರಾಮ ಸಭೆಗಳ ಮೂಲಕ ಆಯ್ಕೆ ಮಾಡಿ ತಾಲ್ಲೂಕು ಪಂಚಾಯ್ತಿಗೆ ಕಳುಹಿಸಿದರು. ಆಯ್ಕೆಯಾದ ಫಲಾನುಭವಿಗಳು ನಮಗೆ ಮನೆ ಬಂದೇ ಬಿಟ್ಟಿದೆ ಎಂಬ ಸಂತೋಷದಲ್ಲಿ ತಮ್ಮಲ್ಲಿದ್ದ ಒಡವೆ, ಧನಕರು ಮಾರಿ ಮನೆಗೆ ಅಡಿಪಾಯ ಹಾಕಿಕೊಂಡರು. ಹತ್ತಾರು ಸಲ ಬಿಲ್ಲಿಗೋಸ್ಕರ ತಿರುಗಿದರು. ಅನುಮತಿಗಾಗಿ ಕೋಲಾರಕ್ಕೆ ಪಟ್ಟಿ ಹೋಗಿದೆ ಎಂದು ಸುಮಾರು ಐದಾರು ತಿಂಗಳು ಹೇಳಿದರು. ತಿರುಗಿ ತಿರುಗಿ ಸುಸ್ತಾದ ಬಡಪಾಯಿಗಳ ಸಹನೆಯ ಕಟ್ಟೆ ಒಡೆದಿತ್ತು, ಆಗ ಇದ್ದಕ್ಕಿದ್ದಂತೆ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು ಗ್ರಾಮ ಪಂಚಾಯ್ತಿಗಳಿಗೆ ಕೊಟ್ಟಿದ್ದ ಮನೆಗಳು ವಾಪಸ್ ಪಡೆದು ಅವರಿಗೆ ಬೇಕಾದ ಫಲಾನುಭವಿಯನ್ನು ಆಯ್ಕೆ ಮಾಡಲು ಮುಂದಾದರು.

ಪಂಚಾಯ್ತಿ ನಮ್ಮದು ಸರ್ಕಾರ ನಮ್ಮದು ಆಯ್ಕೆ ನಮ್ಮದೇ ಎಂದ ಭೂಪರು

ಗ್ರಾಮ ಪಂಚಾಯ್ತಿಗಳ ಮೂಲಕ ಗ್ರಾಮ ಸಭೆಗಳಲ್ಲಿ ಆಯ್ಕೆಯಾದ ಪಲಾನುಭವಿಗಳು ಅಧ್ಯಕ್ಷರನ್ನು ಬೇಟಿಯಾದರು. ಅದಕ್ಕೆ ಅವರಿಂದ ಉತ್ತರ ಏನೆಂದರೆ, ತಾಲ್ಲೂಕು ಪಂಚಾಯ್ತಿ ಆಡಳಿತ ನಮ್ಮದು, ಸರ್ಕಾರ ನಮ್ಮದು ಅದರಿಂದ ಅದು ನಮ್ಮಿಷ್ಟ. ಯಾವಾಗ ಬೇಕಾದರೂ ಯಾರನ್ನು ಬೇಕಾದರೂ ಆಯ್ಕೆ ಮಾಡುತ್ತೇವೆ ನೀವ್ಯಾರು ಕೇಳುವುದಕ್ಕೆ? ಈ ಉತ್ತರ ಒಡವೆ, ಧನಕರು ಕಳೆದುಕೊಂಡ 'ಬಡವರಿಗೆ' ಚಿಂತೆಗೀಡುಮಾಡುವಂತಾಯಿತು. ವಿಧಿಯಿಲ್ಲದೇ ಬಂದ ದಾರಿಗೆ ಸುಂಕ ಕೊಟ್ಟು ವಾಪಸ್ಸು ಹೋದರು.

(ಮತ್ತೆ ಸರ್ಕಾರದ ಆಶ್ರಯ ಯೋಜನೆಗೆ 643 ಮನೆಗಳು ಪ್ರತೀ ಕ್ಷೇತ್ರಕ್ಕೆ ಬಂದ ಹಾಗೆ ಇಲ್ಲಿಗೂ ಬಂತು. ಅದರ ಆಯ್ಕೆ ಪ್ರಕ್ರಿಯೆಯನ್ನು ಅಕ್ಟೋಬರ್-ನವೆಂಬರ್ ಒಳಗೆ ಮುಗಿಸಬೇಕಾಗಿತ್ತು.)

ಹೈಕೋರ್ಟ್ ಕಟ್ಟೆ ಹತ್ತಿದ ಹೋರಾಟ

1999-2000 ಸಾಲಿನ ಆಶ್ರಯ ಯೋಜನೆಯಲ್ಲಿ ಸುಮಾರು 500 ಮನೆಗಳು ಮಂಜೂರಾಗಿ ಗ್ರಾಮ ಸಭೆಗಳ ಮೂಲಕ ಆಯ್ಕೆ ಆಗಿ ಫಲಾನುಭವಿಗಳು ಸಾಲಸೂಲ ಮಾಡಿ ಅಡಿಪಾಯ ಹಾಕಿ, ಕೆಲವರು ಇದ್ದುಬದ್ದ ಗುಡಿಸಲುಗಳನ್ನು ಬೀಳಿಸಿ ಪಾಯ ಹಾಕಿಕೊಂಡಿದ್ದರು. ಸೂರಿಲ್ಲದ ನಮಗೆ ಒಂದು ಮನೆ ಬರುತ್ತಿದೆ ಎಂದು ಸಂತೋಷದಿಂದ ತಾಲ್ಲೂಕು ಪಂಚಾಯ್ತಿ ಬಿಲ್ಲಿಗಾಗಿ ತಿರುಗಾಡಿದರು. ಆದರೆ, ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸಿಬ್ಬಂದಿಯು ಉದ್ದೇಶಪೂರ್ವಕವಾಗಿ ಆ ಪಟ್ಟಿಯನ್ನು ತಡೆಹಿಡಿಯಲು ಪ್ರಯತ್ನಿಸಿತು. ಹಲವಾರು ಬಾರಿ ಆ ಫಲಾನುಭವಿಗಳು ಧರಣಿ ಪ್ರತಿಭಟನೆಗಳನ್ನು ಮಾಡಿದರು. ಆ ಮನೆಗಳ ಅಂತಿಮ ಅನುಮೋದನೆಯನ್ನು ಆಶ್ರಯ ಸಮಿತಿ ಮಾಡುವುದು ಎಂದು ಸರ್ಕಾರದಿಂದ ಹೊರಡಿಸಿದ ಆದೇಶವಿದ್ದರೂ, ದುರುದ್ದೇಶದಿಂದ ಜಿಲ್ಲಾ ಪಂಚಾಯ್ತಿ ಅನುಮೋದನೆ ಬೇಕೆಂದು, ಜಿಲ್ಲಾ ಪಂಚಾಯ್ತಿಗೆ ಕಳುಹಿಸಿದ್ದೇವೆಂದು ತಿಳಿಸಿದರು. ಕಡೆಗೆ ನಿರಂತರ ಹೋರಾಟದೊಂದಿಗೆ, ಜಿಲ್ಲಾ ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೀಸಲಾತಿಯ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡಿಲ್ಲವೆಂದು ಆದೇಶ ನೀಡಿ 500 ಮನೆಗಳ ಪೈಕಿ 145 ಫಲಾನುಭವಿಗಳಿಗೆ ಕೊಡಬಹುದೆಂದು ಆದೇಶ ನೀಡಿದರು. ಆ ಆದೇಶದ ವಿರುದ್ಧ ಫಲಾನುಭವಿಗಳು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ಜಿ.ಪ. ಕಾರ್ಯನಿರ್ವಾಹಕ ಅಧಿಕಾರಿಗಳು ಕೊಟ್ಟ ಆದೇಶವನ್ನು ಕೋರ್ಟಿನಲ್ಲಿ ರದ್ದು ಪಡಿಸಿತು. ಅದರ ಅರ್ಥ ಎಲ್ಲಾ 500 ಫಲಾನುಭವಿಗಳಿಗೆ ಚೆಕ್ ವಿತರಿಸಬೇಕೆಂದು ಅರ್ಥ. ಆದರೆ, ತಾಲ್ಲೂಕು ಪಂಚಾಯ್ತಿ ಅಧಿಕಾರಿಗಳು ಅದನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಂಡು ಯಾರಿಗೂ ಚೆಕ್ ಕೊಡಬಾರದೆಂದು ಆದೇಶ ನೀಡಿದರು. ಇದು ಆ ಬಡಪಾಯಿಗಳನ್ನು ಇನ್ನಷ್ಟು ಚಿಂತೆಗೆ ಈಡು ಮಾಡಿತು.

ಶಾಸಕರು, ಅಧಿಕಾರಿಗಳ ವಂಚನೆಯ ರಂಪಾಟ

ಆ ಬಿಲ್ಲುಗಳಿಗಾಗಿ ಒಂದು ವರ್ಷದ ಕಾಲ ನಿರಂತರವಾಗಿ ತಾಲ್ಲೂಕು ಪಂಚಾಯ್ತಿಗೆ ತಿರುಗಿದ್ದಾರೆ. ಹತ್ತಾರು ಬಾರಿ ಪ್ರತಿಭಟನೆ ಮಾಡಿದರು. ಪ್ರತಿಭಟನೆ ಮಾಡಿದಾಗೆಲ್ಲಾ ಬೆಂಗಳೂರಿಗೆ ಶಾಸಕರ ಹತ್ತಿರ ಮತ್ತು ಜಿಲ್ಲಾ ಸಚಿವರ ಹತ್ತಿರ ಕಾರ್ಯ ನಿರ್ವಾಹಕರು ಓಡುವುದು ಆ ಬಿಲ್ಲು ಕೊಡಬಾರದು ಎಂದು ಅವರಿಂದ ಹುಕುಂ. ಈ ರೀತಿ ಜನರನ್ನೂ ಸತಾಯಿಸುವ ಸರ್ಕಸ್ ಒಂದು ವರ್ಷ ನಡೆಯಿತು. ಈಚೆಗೆ ಅದು ಶಾಸಕರು ಮತ್ತು ಇ.ಓ.ರವರ ಮದ್ಯೆ ರಂಪಾಟ ನಡೆದು ಇ.ಓ.ರವರು ನಿಮಗೋಸ್ಕರ 500 ಮನೆಗಳನ್ನು ನಿಲ್ಲಿಸಿದ್ದೇವಲ್ಲಾ ಸಾರ್! ಎಂದು ಹೇಳಿದ್ದಕ್ಕೆ ನಾನೇನು ಆ ಮನೆಗಳನ್ನು ನಿಲ್ಲಿಸು ಎಂದು ನಾನು ಹೇಳಿದೆನೇನಯ್ಯ? ಯಾಕೆ ನಿಲ್ಲಿಸಿದೆ? ಎಂದು ಹೇಳಿದರಂತೆ. ಸಾಮಾನ್ಯ ಬಡಪಾಯಿಗಳು ರಾಜಕೀಯ ಕಾರಣಗಳಿಗಾಗಿ ಮನೆ ಕಳೆದುಕೊಂಡು ಇದ್ದ ಬದ್ದ ದನಕರು ಮಾರಿ ದಿವಾಳಿಯಾದದ್ದು ಹೀಗೆಯೇ.

ಇಂತಹ ಅಧಿಕಾರಿಗಳು ಬಡಜನರನ್ನು ರೊಚ್ಚಿಗೆಬ್ಬಿಸುವುದು ಹೇಗೆಂದು ಸ್ವಲ್ಪ ಮಟ್ಟಿಗೆ ಅರ್ಥವಾಗಿರಬಹುದು. ಇಂತಹ ಅಧಿಕಾರಿಗಳ ಸಂಖ್ಯೆ ಜಾಸ್ತಿಯಾಗಿ ಈ ದೇಶದ ನಿಜವಾದ ಬಡವನಿಗೆ ಸಿಗಬೇಕಾದ ಸೌಲಭ್ಯ ಸಿಗದೇ ಅಭಿವೃದ್ಧಿ ಸಾಧ್ಯವಿಲ್ಲದೇ, ಅವರ ಜೇಬು ತುಂಬಿಕೊಂಡು ಬೆಂಗಳೂರಿನಲ್ಲಿ ಅವರ ಬಂಗಲೆಗಳು, ಸೈಟುಗಳು ಬೆಳೆಯುತ್ತಿವೆ.

ಮತ್ತೆ ಸರ್ಕಾರದ ಆಶ್ರಯ ಯೋಜನೆಗೆ 643 ಮನೆಗಳು ಪ್ರತಿ ಕ್ಷೇತ್ರಕ್ಕೆ ಮಂಜೂರಾದವು. ಬಾಗೇಪಲ್ಲಿಗೂ 643 ಮನೆಗಳು ಮಂಜೂರಾದವು. ಅವುಗಳ ಆಯ್ಕೆ ಪ್ರಕ್ರಿಯೆ ಸೆಪ್ಟೆಂಬರ್ ಅಕ್ಟೋಬರ್ ಒಳಗೆ ಮುಗಿಸಬೇಕಾಗಿತ್ತು. ಆದರೆ ಅದು ಇಂದಿಗೂ ಸಕ್ರಿಯವಾಗಿ ನಡೆದಿಲ್ಲ. ಬದಲು ಮುಖ್ಯಮಂತ್ರಿಯವರೇ ಹೇಳಿಕೆ ನೀಡಿ ಡಿಸೆಂಬರ್ 25ರ ಒಳಗೆ ಆಶ್ರಯ ಸಮಿತಿಗಳು ಆಯ್ಕೆ ಮಾಡದಿದ್ದರೆ ಜಿಲ್ಲಾದಿಕಾರಿಗಳಿಗೆ ಅಧಿಕಾರ ನೀಡಲಾಗುವುದು ಎಂದು ಹೇಳಿದರು. ಆದರೆ ಮುಖ್ಯಮಂತ್ರಿಗಳು ಅದನ್ನು ಇಳಿಸಿಕೊಳ್ಳಲಿಲ್ಲ. ಡಿಸೆಂಬರ್ 25 ಕಳೆದರೂ ಆಯ್ಕೆ ಪ್ರಕ್ರಿಯೆ ಮುಗಿಯಲಿಲ್ಲ. ಡಿಸೆಂಬರ್ 25ರ ನಂತರ ಪಟ್ಟಿ ಮಾಡಿ ಕಳುಹಿಸಿದರು. ಆದರೆ ಆ ಪಟ್ಟಿಗೆ ಜಿಲ್ಲಾ ಪಂಚಾಯ್ತಿಯಲ್ಲಿ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು ತಡೆಯಾಜ್ಞೆ ತಂದರು. ಅಧ್ಯಕ್ಷರಿಗೂ ಶಾಸಕರಿಗೂ ಮತ್ತು ಶಾಸಕರಿಗೂ ಆಶ್ರಯ ಸಮಿತಿ ಸದಸ್ಯರಿಗೂ ನಿರಂತರ ರಂಪಾಟ ನಡೆಯುತ್ತಿತ್ತು. ಸಮಿತಿ ಸದಸ್ಯರು ಪ್ರತಿ ಮನೆಗೆ 3000 ರೂ ಪಡೆದಿದ್ದಾರೆ ಎಂದು ಸುದ್ದಿಗಳು ತಾಲ್ಲೂಕಿನಾದ್ಯಂತ ಹಬ್ಬಿವೆ. ಅದರ ಜೊತೆಗೆ ಕಾಂಗ್ರೆಸ್ಸಿನ ಪುಡಿ ನಾಯಕರುಗಳು ಪ್ರತಿ ಊರಿನಲ್ಲಿ 10 ರಿಂದ 15 ಜನರಿಂದ ಹಣ ವಸೂಲಿ ಮಾಡಿದ್ದಾರೆ. ಅದರಿಂದ ಪ್ರತಿಯೊಬ್ಬರಿಗೂ 10-15 ಮನೆಗಳನ್ನೂ ಕೊಡುವುದಕ್ಕೆ ಸಾಧ್ಯವಿಲ್ಲದೇ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಿಗೆ ಕೇಳಿದಷ್ಟು ಮನೆಗಳು ಕೊಡಲಿಲ್ಲವೆಂದು ತಡೆಯಾಜ್ಞೆ ತಂದರು. ಆದರೆ, ಮತ್ತೆ ಎಲ್ಲರನ್ನೂ ಸಮಾಧಾನಪಡಿಸಲು ಸಾಧ್ಯವಾಗಲಿಲ್ಲ. ಹಣ ಪಡೆದವರೆಲ್ಲರಿಗೂ ಮನೆ ಕೊಡಿಸಲು ಸಾದ್ಯವಾಗುವುದಿಲ್ಲ. ಹಣ ವಾಪಸ್ಸು ಕೊಡಲೂ ಆಗದೆ, ಏನಾದರೂ ಮಾಡಲೇಬೇಕು ಎಂಬ ನಿರ್ಣಯಕ್ಕೆ ಬಂದರು. ಯಾವುದಾದರೂ ಒಂದು ಘಟನೆಯ ಮುಖಾಂತರ ಹಣ ತೆಗೆದುಕೊಂಡಿರುವವರಿಗೆ ಸಮಾಧಾನಪಡಿಸಬೇಕು. ಅದಕ್ಕೆ ಫೆ. 2 ಕ್ಕೆ ಕಾದರು.

ಫೆ. 7 ರಂದು ತಾಲ್ಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿಗಳು ಕಾಂಗ್ರೆಸಿನ ಪ್ರತಿ ನಾಯಕರಿಗೂ ಗೊತ್ತಾಗದೇ ಕಛೇರಿಯ ಕೆಲಸ ನಿರ್ವಹಿಸುತ್ತಾ ಶಾಸಕರಿಗೆ ಬೇಕಾದವರಿಗೆ ಚೆಕ್ ವಿತರಿಸುತ್ತಿದ್ದರು. ಒಂದು ಕಡೆ ಕಾಂಗ್ರೆಸ್ಸಿನ ಕೆಲವು ನಾಯಕರನ್ನು ರೊಚ್ಚಿಗೆಬ್ಬಿಸಿತು. ಅದರ ಜೊತೆ ಈ ಹಿಂದೆ ಅಂಬೇಡ್ಕರ್ ಯೋಜನೆಯ ಗ್ರಾಮ ಸಭೆಗಳಲ್ಲಿ ಆಯ್ಕೆಯಾದ ಪಲಾನುಭವಿಗಳಿಗೆ ಮತ್ತು 1999-2000 ಸಾಲಿನ ಆಶ್ರಯ ಯೋಜನೆಯ ಫಲಾನುಭವಿಗಳಲ್ಲಿ ಅಸಮಾಧಾನ ಮೂಡಿಸಿತು.

ರೈತ ಹೋರಾಟದ ದಿನ ಸಂಚಿಗೆ ಬಳಕೆ

ಅದೇ ದಿನ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕೇಂದ್ರ ಸರ್ಕಾರದ ಆಮದು ನೀತಿಗಳನ್ನು ವಿರೋಧಿಸಿ ಜೈಲ್ ಭರೋ ಕಾರ್ಯಕ್ರಮವಿತ್ತು. ಆ ಕಾರ್ಯಕ್ರಮಕ್ಕೆ ನೂರಾರು ಜನ ರೈತರು ಯುವಜನರು ವಿದ್ಯಾರ್ಥಿಗಳು ಬಂದರು. ಬೆಳಗ್ಗೆ 11-00 ಗಂಟೆಗೆ ಮೆರವಣಿಗೆಯಲ್ಲಿ ಹೊರಟು ಬಾಗೇಪಲ್ಲಿ ಡಾ।। ಹೆಚ್.ಎನ್. ವೃತ್ತದಿಂದ ಎನ್.ಹೆಚ್.ಎಫ್ ರಸ್ತೆಯ ವರೆಗೆ ಹಾದು ಸುಮಾರು 12-30 ಯಿಂದ 2 ಗಂಟೆಯವರೆಗೆ ರಸ್ತೆ ತಡೆ ಮಾಡಿದರು. 2 ಗಂಟೆಗೆ ಪೋಲೀಸರು ದಸ್ತಗಿರಿ ಮಾಡಿ ನಂತರ ಬಿಡುಗಡೆಗೊಳಿಸಿದರು. ಇದೆಲ್ಲಾ ಮುಗಿಯುವ ಹೊತ್ತಿಗೆ 3 ಗಂಟೆಯಾಯಿತು. ಮತ್ತೆ ಅಲ್ಲಿಂದ ಜನರೆಲ್ಲಾ ಪೋಲೀಸರು ಬಸ್‌ಸ್ಟಾಂಡಿನಲ್ಲಿ ಸಿಕ್ಕ ಸಿಕ್ಕ ಸಿಪಿಐ(ಎಂ) ಕಾರ್ಯಕರ್ತರನ್ನು ಎಳೆದೆಳೆದು ಜೀಪಿಗೆ ಹಾಕಿಕೊಂಡು ಬರುತ್ತಿದ್ದರು. ಕಾರಣ ಕೇಳಿದರೆ, ಸುಮಾರು ಮದ್ಯಾಹ್ನ 11.30ರ ಸಮಯದಲ್ಲಿ ಇ.ಓ. ಕಛೇರಿಯ ಪಿಟೋಪಕರಣಗಳನ್ನು ಆಚೆಗೆ ಎಸೆದು ಬೆಂಕಿ ಹಚ್ಚಿದ್ದಾರೆಂದು, ಅದಕ್ಕೆ ಸಿಪಿಐ(ಎಂ) ಕಾರ್ಯಕರ್ತರೇ ಕಾರಣ ಎಂದು ಕಾಂಗ್ರೆಸ್‌ನ ಸುಮಾರು 60-70 ಜನರ ಗುಂಪೊಂದು ಮೆರವಣಿಗೆ ಹೊರಟು ಠಾಣೆಗೆ ಬರುತ್ತಿತ್ತು.



ಫೆ. 7 ರಂದು ರೈತರ ಪ್ರದರ್ಶನ ಮತ್ತು ಪಿಕೆಟಿಂಗ್

ಅಸಮಾಧಾನಗೊಂಡ ಫಲಾನುಭವಿಗಳು ಜೈಲ್ ಭರೋ ಕಾರ್ಯಕ್ರಮಕ್ಕೆ ಬಂದಿದ್ದು ಕೆಲವರು ತಾ. ಪ. ಕಛೇರಿಯ ಹತ್ತಿರ ಹೋಗಿರಬಹುದು. ಅದನ್ನೇ ನೆಪವಾಗಿಸಿಕೊಂಡ ಕೆಲವು ಕಾಂಗ್ರೆಸ್ಸಿನ ಕಿಡಿಗೇಡಿಗಳು ಸೇರಿಕೊಂಡು ಅಸಮಾದಾನಗೊಂಡ ಫಲಾನುಭವಿಗಳನ್ನು ಪಿಟೋಪಕರಣಗಳನ್ನು ನಾಶಪಡಿಸಿದರು. ಅದನ್ನೇ ನೆಪವಾಗಿಸಿಕೊಂಡ ಅಧಿಕಾರಿಗಳು ವಿವಿಧ ಯೋಜನೆಗಳಲ್ಲಿ 18 ಲಕ್ಷ ರೂಪಾಯಿಗಳ ದುರುಪಯೋಗ ಪಡಿಸಿಕೊಂಡ ದಾಖಲೆಗಳಿದ್ದ ಅಂತಹ ಕಡತಗಳನ್ನು ಬೆಂಕಿಗೆ ಹಾಕಿ ಸುಟ್ಟು ಕೈತೊಳೆದುಕೊಂಡರು. ಜಿಲ್ಲೆಯ ಹಲವಾರು ಕಡೆ ಆಶ್ರಯ ಯೋಜನೆಗಳಲ್ಲಿ ತನಿಖೆ ಆರಂಭವಾಯಿತು. ಅದು ಬಾಗೇಪಲ್ಲಿಗೂ ಬರಬಹುದೆಂಬ ಭಯ ಅಧಿಕಾರಿಗಳಿಗೆ ಕಾಡುತ್ತಿತ್ತು. 18 ಲಕ್ಷ ರೂಪಾಯಿಗಳ ದುರುಪಯೋಗವನ್ನು ಮುಚ್ಚಿಹಾಕಲು ಒಂದು ಒಳ್ಳೆಯ ಸದಾವಕಾಶ ಅವರಿಗೆ ಒದಗಿಸಿದಂತಾಗಿತ್ತು. ಅವರಿಗೆ ಮಾತ್ರವಲ್ಲದೇ, ಕಾಂಗ್ರೆಸ್‌ನ ಕೆಲವು ನಾಯಕರುಗಳಿಗೆ

(ಮನೆಗಳಿಗೆ ಹೂ ತೆಗೆದುಕೊಂಡ) ಈ ಘಟನೆಯಿಂದ ನಿಮಗೆ ಮನೆ ಬರಲಿಲ್ಲ ಎಂದು ಹೇಳುವುದಕ್ಕೆ ಅನುಕೂಲವಾಯಿತು.

ಇದನ್ನೇ ಕಾಯುತ್ತಿದ್ದ ಕಾಂಗ್ರೆಸ್ ಮತ್ತು ಶಾಸಕ ಸಂಪಂಗಿಯವರ ಗುಂಪುಗಳು ಘಟನೆಗೆ ಸಿಪಿಐ(ಎಂ) ಕಾರ್ಯಕರ್ತರೇ ಕಾರಣ ಎಂದು ಕಾಂಗ್ರೆಸ್‌ನ ಗುಂಪು ಮೆರವಣಿಗೆಯಲ್ಲಿ ಹೊರಟು ಸುಂದರಯ್ಯ ಭವನಕ್ಕೆ ಕಲ್ಲು ಹೊಡೆದು ಕಿಟಕಿ ಗ್ಲಾಸುಗಳನ್ನು ಒಡೆದು ದೊಂಬಿ ಮಾಡಲು ಯತ್ನಿಸಿದರು. ಅಷ್ಟರೊಳಗೆ ಪೋಲೀಸರ ಮಧ್ಯೆ ಪ್ರವೇಶದಿಂದ ಪೋಲೀಸ್ ಸ್ಟೇಷನ್‌ವರೆಗೂ ನಡೆದು ಧರಣಿ ಮಾಡಿ ಸಿಪಿಐ(ಎಂ) ನಾಯಕರು, ಮಾಜಿ ಶಾಸಕರು ಆದ ಶ್ರೀರಾಮರೆಡ್ಡಿಯವರನ್ನು ಬಂಧಿಸಬೇಕೆಂದು ಒತ್ತಾಯಿಸಿದರು. ಇನ್ನೊಂದು ಶಾಸಕರ ನೇತೃತ್ವದಲ್ಲಿನ ಇನ್ನೊಂದು ಗುಂಪು ಇ.ಓ. ಕಛೇರಿಯ ಹತ್ತಿರ ಶ್ರೀರಾಮರೆಡ್ಡಿಯವರನ್ನು ಬಂದಿಸಬೇಕೆಂದು ದರಣಿ ಮಾಡಿದರು. ಆದರೆ, ಅಲ್ಲಿಗೆ ದಾವಿಸಿದ ಜಿಲ್ಲಾಧಿಕಾರಿಗಳು, ಡಿವೈಎಸ್‌ಪಿ ಎಲ್ಲರೂ ಅದನ್ನು ನಿರಾಕರಿಸಿದರು. ಆದರೆ ಘಟನೆಗೆ ಸಂಬಂದವೇ ಇಲ್ಲದ ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿ ವೆಂಕಟಸ್ವಾಮಿರೆಡ್ಡಿಯವರನ್ನು ವಿನಾಕಾರಣ, ದುರುದ್ದೇಶದಿಂದ ಕಾಂಗ್ರೆಸ್‌ನ ಅಧಿಕಾರದ ಬಲದಿಂದ ಬಂದಿಸಿ ಜೈಲಿಗೆ ಕಳುಹಿಸಿದರು. ಸಿಕ್ಕ ಸಿಕ್ಕವರನ್ನು ಕೆಂಪು ಶರ್ಟ್ ಹಾಕಿದ್ದವರನ್ನು ದಸ್ತಗಿರಿ ಮಾಡಿದರು. ರಾತ್ರಿಯೆಲ್ಲಾ ಸಿಪಿಐ(ಎಂ) ಕಾರ್ಯಕರ್ತರ ಮನೆಗಳಿಗೆ ಹೋಗಿ ಹೆಂಗಸರು ಮಕ್ಕಳನ್ನು ಬೆದರಿಸಿ ಬೆಳಗ್ಗೆ ಹಾಜರುಪಡಿಸಬೇಕೆಂದು ಬೆದರಿಕೆ ಹಾಕಿದರು. 150 ಜನರ ಮೇಲೆ ಕೇಸ್ ಹಾಕಲಾಗಿದೆ.

ಮುಖಂಡರ ಬಂಧನ ; ಕೆರಳಿದ ಜನ

ಅಷ್ಟರಲ್ಲಿ ಕಾರ್ಯದರ್ಶಿ ವೆಕಟಸ್ವಾಮಿರೆಡ್ಡಿಯವರನ್ನು ಬಂಧಿಸಿರುವುದು ಹಳ್ಳಿ ಹಳ್ಳಿಗೂ ಹರಡಿತು. ಜೊತೆಗೆ ಶ್ರೀರಾಮರೆಡ್ಡಿಯವರನ್ನು ಬಂಧಿಸುವರೆಂಬ ಸುದ್ದಿ ಸಹ. ಮಾರನೇ ದಿನ ಬೆಳಗ್ಗೆ 8 ಗಂಟೆಗೆ ಸಾವಿರಾರು ಜನ ಬಾಗೇಪಲ್ಲಿಗೆ ಬಂದರು. ಪ್ರತಿಭಟನೆ ಮಾಡಬೇಕೆಂದು ಜನ ಪಟ್ಟು ಹಿಡಿದರು. 11 ಗಂಟೆ ಹೊತ್ತಿಗೆ 2-3 ಸಾವಿರ ಜನ ಸೇರಿದರು. ಸುಂದರಯ್ಯ ಭವನಕ್ಕೆ ಕಲ್ಲೆಸೆದು ಗ್ಲಾಸುಗಳನ್ನು ಒಡೆದ ಕಾಂಗ್ರೆಸ್‌ನ ಗೂಂಡಾಗಳನ್ನು ಬಂಧಿಸಬೇಕೆಂದು, ಆಶ್ರಯ ಯೋಜನೆಯಲ್ಲಿ ಆದ ದುರುಪಯೋಗದ ತನಿಕೆ ಮಾಡಬೇಕೆಂದು ಘೋಷಣೆಗಳೊಂದಿಗೆ ಮೆರವಣಿಗೆ ಮಾಡಿ ಪೋಲೀಸ್ ಠಾಣೆಯ ಎದುರು ಧರಣಿ ಹೂಡಲಾಯಿತು. ಧರಣಿಯನ್ನು ಉದ್ದೇಶಿಸಿ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ, ಕಾಂಗ್ರೆಸ್‌ನ ಸ್ವಂತ ಆಸ್ತಿಯನ್ನು ನಾಶ ಮಾಡಲಿಲ್ಲ. ಅವರಿಗೆ ವೈಯಕ್ತಿಕವಾಗಿ ತೊಂದರೆ ಉಂಟುಮಾಡಲಿಲ್ಲ. ಕಾಂಗ್ರೆಸ್ಸಿನ ಕಿಡಿಗೇಡಿಗಳೂ ಸೇರಿಕೊಂಡು ಅಸಮಾಧಾನಗೊಂಡ ಫಲಾನುಭವಿಗಳು, ಮತ್ಯಾರ್‍ಯೋರೋ ಸೇರಿಕೊಂಡು ಮಾಡಿದ ಕೃತ್ಯಕ್ಕೆ ಸಿಪಿಐ(ಎಂ) ಕಾರ್ಯಕರ್ತರೇ ಕಾರಣ ಎಂದು ಹೇಳುವುದು ಖಂಡನೀಯವೆಂದು, ರಾಜಕೀಯ ದುರುದ್ದೇಶದಿಂದ ಸುಂದರಯ್ಯ ಭವನದ ಮೇಲೆ ಕಲ್ಲೆಸೆದಿರುವ ಪುಡಾರಿಗಳನ್ನು ಬಂಧಿಸಬೇಕೆಂದು ಒತ್ತಾಯಿಸಿದರು. ವಿನಾಕಾರಣ ನಮ್ಮ ಪಕ್ಷದ ಕಾರ್ಯಕರ್ತರನ್ನು ಬಂದಿಸಿರುವುದು ಖಂಡಿಸುತ್ತಾ ಅಧಿಕಾರದ ಬಲ ಉಪಯೋಗಿಸಿ ಚಳುವಳಿಗಳನ್ನು ಬಗ್ಗುಬಡಿಯುವುದು ಸಾಧ್ಯವಾಗುವುದಿಲ್ಲವೆಂದು ಎಚ್ಚರಿಸಿದರು.

ಮೆರವಣಿಗೆಯ ನೇತೃತ್ವವನ್ನು ಜಿ.ಪ. ಸದಸ್ಯರಾದ ಶ್ರೀರಾಮಪ್ಪ ಮಾಜಿ ಸದಸ್ಯರಾದ ಸಿ.ಡಿ. ಗಂಗುಲಪ್ಪ ಪಕ್ಷದ ನಾಯಕರಾದ, ರಾಜು, ಡಿವೈಎಫ್‌ಐ ನಾಯಕರಾದ ಭಾಸ್ಕರರೆಡ್ಡಿ, ಪಟ್ಟಣ ಪಂಚಾಯ್ತಿ ಸದಸ್ಯರಾದ ರಾಮಕೃಷ್ಣಪ್ಪ ವಹಿಸಿದ್ದರು.

ಇದಾದನಂತರವೂ ಪೋಲೀಸರು ಶಾಸಕನ ಹಾಗೂ ಕಾಂಗ್ರೆಸ್‌ನವರ ಮಾತಿನಂತೆ ದಬ್ಬಾಳಿಕೆ ಮುಂದುವರಿಸಿದ್ದಾರೆ. ಸುಳ್ಳು ಮೊಕದ್ದಮೆಯಲ್ಲಿ ಸಿಪಿಐ(ಎಂ) ಹಾಗೂ ರೈತ ಸಂಘದ ಕಾರ್ಯಕರ್ತರನ್ನು ಒಳಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

ಫೆ-13 ರಂದು ರಾಜ್ಯವ್ಯಾಪಿ ಪ್ರತಿಭಟನೆ - ಹಲವು ಜಿಲ್ಲಾ ಬಂದ್

ಕೃಷಿ ಉತ್ಪಾದನೆಗಳ ಬೆಲೆಯ ಸಾರ್ವತ್ರಿಕ ಕುಸಿತದಿಂದಾಗಿ ರಾಜ್ಯದ ಎಲ್ಲಾ ಭಾಗಗಳ ರೈತರ ಜೀವನದಲ್ಲಿ ಅಲ್ಲೋಲಕಲ್ಲೋಲವುಂಟಾಗಿದೆ. ಕರಾವಳಿ ಮತ್ತು ಮಲೆನಾಡಿನ ಜೀವನದ ಆಧಾರಗಳಾದ ತೆಂಗು, ಅಡಿಕೆ, ಕಾಫಿ, ಮೊದಲಾದ ವಸ್ತುಗಳ ಬೆಲೆ, ಉತ್ತರ ಕರ್ನಾಟಕದ ಬೆಳೆಗಳಾದ ಜೋಳ, ಸಜ್ಜೆ, ತೊಗರಿ, ಈರುಳ್ಳಿ, ಹತ್ತಿ, ಮೆಣಸಿನಕಾಯಿಗಳ ಬೆಲೆ, ದಕ್ಷಿಣ ಕರ್ನಾಟಕದ ಪ್ರಮುಖ ಬೆಳೆಗಳಾದ ತರಕಾರಿ, ತೆಂಗು, ಹಣ್ಣು ಹಂಪಲುಗಳು, ಹಾಲು, ರೇಷ್ಮೆಗಳ ಬೆಲೆ ಹಾಗೂ ರಾಜ್ಯದ ಎಲ್ಲಾ ಭಾಗಗಳ ನೀರಾವರಿ ಪ್ರದೇಶದಲ್ಲಿ ಬೆಳೆಯುವ ಭತ್ತ, ಕಬ್ಬು ಮೆಕ್ಕೆಜೋಳಗಳ ಬೆಲೆ, ಒಣ ಬೇಸಾಯದ ಪ್ರದೇಶದಲ್ಲಿ ವ್ಯಾಪಕವಾಗಿ ಬೆಳೆಯುವ ಕಡಲೆಕಾಯಿ, ಸೂರ್ಯಕಾಂತಿ ಮೊದಲಾದ ಎಣ್ಣೆ ಬೀಜಗಳ ಬೆಲೆ ಕುಸಿದಿದೆ.

ಹಿಂದಿನ ವರ್ಷದ ಅರ್ಧದಷ್ಟು ಕೂಡ ಬೆಲೆ ಸಿಗದಂತಹ, ಇನ್ನೂ ಕೆಲವು ಬೆಳೆಗಳಲ್ಲಿ ಮೂರನೇ ಒಂದು ಭಾಗದಷ್ಟು ಕೂಡ ಸಿಗದಂತಹ ಪರಿಸ್ಥಿತಿ ಒಂದು ಕಡೆ, ವಿದ್ಯುತ್‌ದರ ಡೀಸೆಲ್, ಸೀಮೆಎಣ್ಣೆ ಬೆಲೆ, ಸಾಗಾಣಿಕೆದರ, ರಸಗೊಬ್ಬರ ಕೀಟನಾಶಕಗಳ ಬೆಲೆ, ರೇಷನ್ ದರಗಳ ಏರಿಕೆ ಮುಂತಾದುವು ರೈತನನ್ನು ಅಡಕೊತ್ತಿನಲ್ಲಿ ಸಿಕ್ಕಿಸಿ ಜರ್ಝರಿತನನ್ನಾಗಿ ಮಾಡಿವೆ. ಹಲವಾರು ಕಡೆ ತನ್ನಿಂದ ತಾನೇ ಹೋರಾಟಗಳಿಗೆ ಇಳಿಯುವಂತೆ ಮಾಡಿವೆ.

ಇವುಗಳಿಗೆಲ್ಲಾ ಕಾರಣವಾದ ಕೇಂದ್ರ ಸರ್ಕಾರದ ಜಾಗತೀಕರಣ, ಉದಾರಿಕರಣ, ಖಾಸಗೀಕರಣ ಅದರಲ್ಲಿಯೂ ಮುಖ್ಯವಾಗಿ ಆಮದುನೀತಿ ಪರಿಮಾಣಾತ್ಮಕ ನಿರ್ಬಂಧಗಳ ಸಡಿಲಿಕೆ ಇವುಗಳನ್ನ ಅಖಿಲಭಾರತ ಮಟ್ಟದಲ್ಲಿ ವಿರೋಧಿಸಲು ದೇಶದಾದ್ಯಂತ 12 ರೈತ, ಕೂಲಿಕಾರ ಸಂಘಟನೆಗಳು ಫೆ. 5-7 ರಂದು ಚಳುವಳಿಗೆ ಕರೆ ನೀಡಿದವು. ಈ ಕರೆಗೆ ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳೆಯರ ಸಂಘಟನೆಗಳು ಫೆ. 7 ರಂದು ಈ ಹೋರಾಟಕ್ಕೆ ಸೇರಿಕೊಂಡವು.

ಗುಲ್ಬರ್ಗಾದಲ್ಲಿ ತೊಗರಿ ಬೆಳೆಗಾರರು ನಿರಂತರವಾಗಿ 4 ವರ್ಷಗಳ ಸತತ ಬೆಲೆ ಕುಸಿತದಿಂದಾಗಿ ಸರಿಕಷ್ಟದಲ್ಲಿದ್ದಾರೆ. ಆದ್ದರಿಂದಲೇ ಆ ಭಾಗದಲ್ಲಿ ಆತ್ಮಹತ್ಯೆಯ ಪ್ರಕರಣಗಳು ಅತ್ಯಂತ ಹೆಚ್ಚಿವೆ. ಈ ಹಿನ್ನೆಲೆಯಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಸುಮಾರು ಆರುತಿಂಗಳಿಂದಲೂ ನಿರಂತರ ಹೋರಾಟ ಸಾಗಿದೆ. ಫೆ. 5-7 ರ ವರೆಗೆ ನಡೆದ ರೈತ ಚಳುವಳಿಯಲ್ಲಿ ಅದು ಪರಾಕಾಷ್ಠೆಗೇರಿದೆ. ವ್ಯಾಪಕವಾಗಿ ರಸ್ತಾ ರೋಖೋ ನಡೆದಿದೆ. ಇಂತಹ ಸಂದರ್ಭದಲ್ಲಿ ಒಂದು ರಸ್ತೆಯಲ್ಲಿ ರಸ್ತಾ ರೋಖೋ ನಡೆಸುತ್ತಿದ್ದ ಡಿವೈಎಫ್‌ಐ ಕಾರ್ಯಕರ್ತ ಯುವಕರ ಮೇಲೆ ಲಾಠಿ ಚಾರ್ಜ್ ಮಾಡಲಾಗಿದೆ. ಪೋಲೀಸ್ ಠಾಣೆಯಲ್ಲಿಯೂ ಅಮಾನುಷವಾಗಿ ಲಾಠಿ ಚಾರ್ಜ್ ಮಾಡಿದ್ದಾರೆ. ಗಾಯಗೊಂಡ ಯುವಕರಿಗೆ ಯಾವುದೇ ವೈದ್ಯರ ಸಹಾಯ ನೀಡದೆ ಜೈಲಿಗೆ ಕಳುಹಿಸಲಾಗಿದೆ.

ತೀವ್ರ ಒತ್ತಾಯದ ಮೇರೆಗೆ ಅವರನ್ನು ಆಸ್ಪತ್ರೆಗೆ ಕರೆತಂದರು. ಹೀಗೆ ತರುವಾಗ ಅವರಿಗೆ ಕೈ ಕೋಳ ತೊಡಿಸಿ ಮೆರವಣಿಗೆ ಮಾಡಿದ್ದನ್ನು ಕರ್ನಾಟಕ ಪ್ರಾಂತ ರೈತಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ನೀಲಾ, ಪ್ರಾಂತ ರೈತಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಪ್ಪ ತಡಕಲ್‌ರವರು ಪ್ರಶ್ನಿಸಿದಾಗ ಪೋಲೀಸ್ ಅಡಿಷನಲ್ ಎಸ್.ಪಿ. ರಾಜಪ್ಪನವರು ಇವರುಗಳ ಮೇಲೆ ಪೋಲೀಸ್ ಧಾಳಿಮಾಡಿಸಿ ಸಿಕ್ಕಾಪಟ್ಟೆ ಹೊಡೆಸಿದ್ದಾರೆ. ವಿರೂಪಾಕ್ಷಪ್ಪ ತಡಕಲ್‌ರವರಿಗೆ ತಲೆ ಒಡೆಯುವಂತೆ ಪೆಟ್ಟಾಗಿದೆ. ಮಾರುತಿ ಮಾನ್ಪಡೆಯವರ ಮೇಲೆ ನೇರವಾಗಿ ಎ.ಎಸ್.ಪಿ. ರಾಜಪ್ಪನವರೇ ಹಲ್ಲೆ ಮಾಡಿದ್ದಾರೆ. ನಂತರ ಪೊಲೀಸರ ಮೇಲೆ ಹಲ್ಲೆ ಮಾಡಿದರೆಂಬ ಆರೋಪ ಹೊರಿಸಿ ಜೈಲಿಗೆ ತಳ್ಳಿದ್ದಾರೆ. ಗುಲ್ಬರ್ಗಾದ ಹೊಟೆಲ್‌ನ ಕೊಲೆಯ ಕ್ರಿಮಿನಲ್ ಚೀಫ್ ಧರ್ಮರಾಜ್ ತಂಡ ಬಂಧನವಾಗದಂತೆ ಇದೇ ಎಎಸ್‌ಪಿ ರಾಜಪ್ಪ ಆಶ್ರಯ ನೀಡಿದ್ದು- ಎಂಬ ಆರೋಪವಿದೆ. 'ಇವ ಖರ್ಗೆ ಮನುಷ್ಯಾರೀ' ಎಂಬುದು ಗುಟ್ಟಿನ ಸಂಗತಿಯೇನಲ್ಲ.

ದಮನಕೋರರರೇ ನಿಮಗಿದೋ ಎಚ್ಚರಿಕೆ!

ಗೃಹ ಮಂತ್ರಿಗಳ ಜಿಲ್ಲೆಯಾದ ಗುಲ್ಬರ್ಗದಲ್ಲಿಯೇ ಸುಪಾರಿಕೊಲೆಗಳು, ಕೆಲವು ಕಾಂಗ್ರೆಸ್ ರಾಜಕಾರಣಿಗಳಿಂದಲೇ ಕೊಲೆಗಳು, ರಸಗೊಬ್ಬರ ಕಲಬೆರಕೆ, ಕ್ರಿಮಿನಾಶಕ ಕಲಬೆರಕೆ ಹಗರಣಗಳ, ದಲಿತ ಮೇಲೆ ದೌರ್ಜನ್ಯಗಳು ಬೆತ್ತಲೆಸೇವೆಗಳು ಹೆಚ್ಚಾಗಿವೆ. ಈಗ ಅವರ ಜಿಲ್ಲೆಯಲ್ಲಿಯೇ ಪ್ರಜಾಸತ್ತಾತ್ಮಕ ಚಳುವಳಿಯನ್ನು ದಮನಮಾಡುವ ಕ್ರಮಗಳು ಖಂಡನೀಯ. ಈಗ ದೌರ್ಜನ್ಯಕ್ಕೊಳಗಾದವರೆಲ್ಲಾ ಅಂತಹ ಸಮಸ್ಯೆ ವಿರುದ್ಧ ಹೋರಾಟದ ಮುಂಚೂಣಿಯಲ್ಲಿದವರು.

ಪ್ರಜಾಸತ್ತಾತ್ಮಕ ಚಳುವಳಿಯ ಮೇಲೆ ಎಸಗಿದ ದೌರ್ಜನ್ಯದ ವಿರುದ್ಧ ಪ್ರತಿಭಟಿಸಲು ರೈತ ಚಳುವಳಿಯನ್ನು ಸಂಘಟಿಸಿದ್ದ ಸಂಘಟನೆಗಳಾದ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ಹಾಗೂ ಈ ಚಳುವಳಿಗೆ ಬೆಂಬಲನೀಡಿದ ಯುವ ವಿದ್ಯಾರ್ಥಿ, ಮಹಿಳಾಸಂಘಟನೆಗಳಾದ ಸಿಐಟಿಯು, ಡಿವೈಎಫ್‌ಐ, ಎಸ್.ಎಫ್.ಐ, ಜನವಾದಿ ಮಹಿಳಾ ಸಂಘಟನೆಗಳು ಫೆ. 13 ರಂದು ರಾಜ್ಯದಾದ್ಯಂತ ಪ್ರತಿಭಟನೆಗೆ ಕರೆ ನೀಡಿವೆ. ಅಂದು ಪ್ರತಿಭಟನಾ ಸಭೆ, ಮೆರವಣಿಗೆ, ಮೊದಲಾದುವನ್ನೂ ನಡೆಸಲಾಗುತ್ತದೆ.

ಈ ಪ್ರತಿಭಟನೆಯ ದಿನವನ್ನು ಜಿಲ್ಲಾ ಬಂದ್ ಆಗಿ ಆಚರಿಸಲು ಗುಲ್ಬರ್ಗ, ಬೀದರ್, ಕೊಪ್ಪಳ, ರಾಯಚೂರು, ಬಿಜಾಪುರ ಬಳ್ಳಾರಿ ಜಿಲ್ಲೆಯ ಘಟಕಗಳು ಯೋಜಿಸಿವೆ.

ಇಂದು ರೈತ ಚಳುವಳಿ ತೀವ್ರವಾಗುತ್ತಿರುವುದು ಅವರಿಗುಂಟಾದ ಸಂಕಷ್ಟದಿಂದ. ಅದನ್ನು ನಿವಾರಿಸುವ ಯತ್ನ ಮಾಡದೆ ಚಳುವಳಿಯ ದಮನಕ್ಕೆ ಕೈಹಾಕುವುದು ಚಳುವಳಿಯ ನಾಯಕರ ಮೇಲೆ ವ್ಯಯಕ್ತಿಕ ಧಾಳಿಮಾಡುವುದು ಈ ಚಳುವಳಿಯ ಬೆಂಕಿಗೆ ತುಪ್ಪ ಹಾಕಿದಂತೆ ಎಂದು ಈ ಸಂಘಟನೆಗಳು ಎಚ್ಚರಿಸಿವೆ. ರಾಜ್ಯದ ಪ್ರಜಾಸತ್ತಾತ್ಮಕ ಚಳುವಳಿ ಒಕ್ಕೊರಲಿನಿಂದ ಈ ದಮನವನ್ನು ಖಂಡಿಸಬೇಕೆಂದು ವಿನಂತಿಸಿವೆ. ಈ ರಾಜ್ಯ ವ್ಯಾಪಿ ಪ್ರತಿಭಟನೆ ಹಾಗೂ ಜಿಲ್ಲಾ ಬಂದ್‌ಗಳಲ್ಲಿನ ಆಗ್ರಹಗಳೆಂದರೆ

1. ಗುಲ್ಬರ್ಗದ ಎ.ಎಸ್.ಪಿ. ರಾಜಪ್ಪನವರನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆಗೆ ಆಜ್ಞೆ ಮಾಡಬೇಕು.
2. ರೈತ ಚಳುವಳಿಕಾರರ ಮೇಲೆ ಗುಲ್ಬರ್ಗ ಹಾಗೂ ಇತರೆಡೆಗಳಲ್ಲಿ ಹಾಕಿದ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು.
3. ಕರ್ನಾಟಕದ ರೈತರ ಸಂಕಷ್ಟದ ಪರಿಸ್ಥಿತಿಯ ಪರಿಹಾರ ಮಾರ್ಗಕ್ಕಾಗಿ ರೈತ ಸಂಘಟನೆಗಳನ್ನು ರಾಜ್ಯ ಸರ್ಕಾರ ಮಾತುಕತೆಗೆ ಕರೆಯಬೇಕು. ಗುಲ್ಬರ್ಗದಲ್ಲಿ ತೊಗರಿ ಬೆಳೆಗೆ 2000ರ [illegible] ಬೆಲೆ ಖಾತರಿಗೊಳಿಸಲು ಕ್ರಮ ತೆಗೆದುಕೊಳ್ಳಬೇಕು.

ಈ ಪ್ರತಿಭಟನೆಯ ಕರೆಯನ್ನು ಫೆಬ್ರವರಿ 5 ರಿಂದ 7 ರವರೆಗೆ ನಡೆದ ಹೋರಾಟದ ನಾಯಕತ್ವ ವಹಿಸಿದ್ದ ಎಲ್ಲಾ ರೈತ-ಕೂಲಿಕಾರರ ಸಂಘಟನೆಗಳು ಬೆಂಬಲಿಸಿದ್ದ ಸಹೋದರ ಸಂಘಟನೆಗಳು ನೀಡಿವೆ. ಈ ಪ್ರತಿಭಟನೆಗೆ ಸಿಪಿಐ(ಎಂ) ರಾಜ್ಯ ಸಮಿತಿ ಬೆಂಬಲಿಸಿದೆ.

ಗೋಳು ತೋಡಿಕೊಂಡವರಿಗೆ ಕೋಳ ....

ಪುಟ 7 ರಿಂದ

ರೈತರು, ಮಹಿಳೆಯರು, ವಿದ್ಯಾರ್ಥಿ-ಯುವಜನರು, ಕಾರ್ಮಿಕರು ಗುಲ್ಬರ್ಗಕ್ಕೆ ಬಂದು ಸೇರ ತೊಡಗಿದರು. ಮೆರವಣಿಗೆಗಳ ಮಹಾಪೂರ ಜಿಲ್ಲಾಧಿಕಾರಿಗಳ ಕಛೇರಿಗೆ ಬಂದಾಗ ಪೋಲೀಸರ ಎದೆಗಳು ಬಿಗಿಯಾಗತೊಡಗಿದವು. 15-20 ಪೋಲೀಸ್ ವ್ಯಾನುಗಳು ಬಸ್ಸುಗಳಮೊಸ್ನ ಸಜ್ಜು ಮಾಡಲಾಗಿತ್ತು.

ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ.ಕೃಷ್ಣರವರೇ ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲವೆಂದು ಕೇಂದ್ರ ಸರ್ಕಾರದ ಆಮದು ನೀತಿಯನ್ನು ವಿರೋಧಿಸಿ ಬದಲಾಯಿಸಲು ಒತ್ತಾಯಿಸಿರುವುದು ಇನ್ನೂ ಹಚ್ಚ ಹಸಿರಿರುವಾಗಲೇ ರಾಜ್ಯದ ಗೃಹಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರ ಸ್ವಂತ ಜಿಲ್ಲೆಯಾದ ಗುಲ್ಬರ್ಗಾ ಜಿಲ್ಲೆಯಲ್ಲಿ ಅದೇ ಮಾತನ್ನಾಡುತ್ತಿರುವ ರೈತರ ವಿರುದ್ಧ ಹಾಗೂ ಪ್ರಜಾಪ್ರಭುತ್ವ ಚಳುವಳಿಯಲ್ಲಿ ತೊಡಗಿದ ಜನತೆಯ ಮೇಲೆ ಮತ್ತು ಮುಖಂಡರ ಮೇಲೆ ಪೋಲೀಸರ ದಾಳಿ ದಿನೇ ದಿನೇ ಹೆಚ್ಚುತ್ತಿರುವುದನ್ನು ಖಂಡಿಸಿ ಜಿಲ್ಲಾಧಿಕಾರಿಗಳ ಆವರಣದಲ್ಲಿ ಸೇರಿದ್ದ ಬೃಹತ್ ಬಹಿರಂಗ ಸಭೆಯಲ್ಲಿ ಜನರು ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು.

ಹಲವು ಮುಖಂಡರ ಮೇಲೆ ಡಿ.ಸಿ.ರಾಜಪ್ಪನವರ ನೇತೃತ್ವದಲ್ಲಿ ಪಿ.ಐ. ಆದ ರಮೇಶ್ ಕುಮಾರ್ ಸೇರಿ ಇತರ ಪೋಲೀಸರ ಧಾಳಿಯನ್ನು ಖಂಡಿಸಿ, ತಪ್ಪಿತಸ್ಥ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳಬೇಕೆಂದು ಹಾಗೂ ಬಂಧನದಲ್ಲಿದ್ದ ಚಳುವಳಿಗಾರರನ್ನು ಬೇಷರತ್ತಾಗಿ ಬಿಡುಗಡೆ ಮಾಡಲು ಒತ್ತಾಯಿಸಿ ಹಲವು ರೈತ, ವಿದ್ಯಾರ್ಥಿ ಯುವಜನ, ಮಹಿಳಾ, ಕಾರ್ಮಿಕ ಸಂಘಟನೆಗಳು ಸೇರಿ ಫೆಬ್ರವರಿ 8 ರಂದು 'ಕಲ್ಬುರ್ಗಿ ಬಂದ್' ಗೆ ಕರೆ ಕೊಟ್ಟರು. ಸಾವಿರಗಟ್ಟಲೆ ಮಹಿಳೆಯರು ಸೇರಿದ್ದರಿಂದ ಪೋಲೀಸರು ನಿಯಂತ್ರಣ ಕಳೆದುಕೊಂಡವರಂತೆ ನಿಂತಿದ್ದು ಎಲ್ಲರ ಕಣ್ಣಿಗೂ ಕಾಣಿಸುತ್ತಿತ್ತು.

'ಗುಲ್ಬರ್ಗಾ ಬಂದ್' ಪೂರ್ಣ ಯಶಸ್ವಿ

ರಾಷ್ಟ್ರವ್ಯಾಪಿ ಕರೆಯ ಮೇರೆಗೆ ಹೋರಾಟ ಮಾಡುತ್ತಿದ್ದ ಚಳುವಳಿಗಾರರ ಮೇಲೆ ಲಾಠಿ ಪ್ರಹಾರ ಮಾಡಿ ಕೈದಿಗಳಂತೆ ರೈತರಿಗೆ ಕೈಕೋಳ ತೊಡಿಸಿರುವುದನ್ನು ವಿರೋಧಿಸಿದ ಮತ್ತು ರೈತ ಮಹಿಳಾ ಮುಖಂಡರ ಮೇಲೆಯೂ ಲಾಠಿ ಪ್ರಹಾರ ಮಾಡಿ ಮರಣಾಂತಿಕ ಹಲ್ಲೆ ಮಾಡಿರುವ ಪೋಲೀಸರ ದೌರ್ಜನ್ಯವನ್ನು ವಿರೋಧಿಸಿ ನಡೆಸಿದ ಗುಲ್ಬರ್ಗಾ ಬಂದ್‌ಗೆ ವ್ಯಾಪಕ ಬೆಂಬಲ ಸಿಕ್ಕಿತು.

ಪುನಃ ಎಲ್ಲಿಲ್ಲದ ಉತ್ಸಾಹ, ಸಾವಿರಗಟ್ಟಲೆ ರೈತರು, ಮಹಿಳೆಯರು, ಕಾರ್ಮಿಕರು ವಿದ್ಯಾರ್ಥಿ ಯುವಜನರು ಗುಂಪು ಗುಂಪಾಗಿ ಮೆರವಣಿಗೆ ನಡೆಸಿ ಸೂಪರ್ ಮಾರ್ಕೆಟನಲ್ಲಿ ಬಹಿರಂಗ ಸಭೆ ನಡೆಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲೊಬ್ಬರಾದ ಪ್ರಸನ್ನಕುಮಾರ್ ಅವರು ಕೇಂದ್ರ ಸರ್ಕಾರದ [illegible] ಮತ್ತು ರಾಜ್ಯ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಬಯಲಿಗೆಳೆದು, ಚಳುವಳಿ ನಿರತ ಕಾರ್ಯಕರ್ತರ ಮೇಲೆ ಮತ್ತು ರೈತ ಮಹಿಳಾ ಮುಖಂಡರ ಮೇಲೆ ದೌರ್ಜನ್ಯ ನಡೆಸಿದ ಡಿ.ಸಿ. ರಾಜಪ್ಪ ಮತ್ತು ರಮೇಶ್ ಕುಮಾರ್ ಹಾಗೂ ಶಹಾಬಾದ್‌ನ ನಾಡಿಗಾರ ಇತರರನ್ನು ಸಸ್ಪೆಂಡ್ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಸಭೆಯನ್ನುದ್ದೇಶಿಸಿ ಪ್ರಾಂತ ರೈತ ಸಂಘದ ಅಧ್ಯಕ್ಷ ಚನ್ನಪ್ಪ ಆನೆಗುಂದಿ, ಸಿಐಟಿಯು ಮುಖಂಡ ಚಂದು ಜಾಧವ, ವಕೀಲರಾದ ಬಸವರಾಜ ಮರಡಿ, ವಿಲಾಸ ಕುಮಾರ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಶಂಕರ ಕಟ್ಟಿ ಸಂಗಣ, ರೈತ ಮುಖಂಡ ಮೌಲಾಮುಲ್ಲಾ, ವಿದ್ಯಾರ್ಥಿ ಮುಖಂಡರಾದ ಶೌಕತ್ ಅಲಿ ಆಲೂರ್, ಜೈಲಾಲ್ ತೋಟದಮನಿ, ಡಿವೈಎಫ್‌ಐ ನ ಶ್ರೀಮಂತ ಬಿರಾದಾರ, ರಾಜ್ಯ ರೈತ ಸಂಘದ ಬಸಿರೆಡ್ಡಿ ಕರಡಿ ಮತ್ತಿತರರು ಮಾತನಾಡಿ ಪೋಲೀಸರ ದೌರ್ಜನ್ಯವನ್ನು ಖಂಡಿಸಿ ಬಂಧನದಲ್ಲಿರುವ ಮುಖಂಡರನ್ನು, ರೈತರನ್ನು ಬೇಷರತ್ತಾಗಿ ಬಿಡುಗಡೆಗೊಳಿಸಿ ಅವರ ಮೇಲೆ ಹಾಕಿದ ಸುಳ್ಳು ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದರು. ಬಂದ್ ಸಂಪೂರ್ಣ ಯಶಸ್ವಿಯಾಗಿದ್ದು ಸಂಘರ್ಷದ ರಣಕಹಳೆ ಜಿಲ್ಲೆಯಾದ್ಯಂತ ಮೊಳಗತೊಡಗಿದೆ.

ಕೇರಳದಲ್ಲಿ ಕಾಂಗ್ರೆಸ್‌ನ ವಿಮೋಚನಾ ಯಾತ್ರೆ

ಪುಟ 5 ರಿಂದ

ಸರ್ಕಾರದ ವಿರುದ್ಧವಾದ ಚಳುವಳಿಗೆ ಆಂಟೋನಿ ಮತ್ತು ಅವರ ಹಿಂಬಾಲಕರು ಮುಂದಾಗಿ ಮಾರ್ಕ್ಸಿಸ್ಟರನ್ನು ವನವಾಸಕ್ಕೆ ಕಳುಹಿಸಿಕೊಡುತ್ತೇವೆ ಎಂದು ಹೇಳುತ್ತಿರುವುದು ದೊಡ್ಡ ವಿಪರ್ಯಾಸವಾಗಿದೆ. 1957 ರ ವಿಮೋಚನಾ ಸಮರದ ರೀತಿಯಲ್ಲಿಯೇ ಈ ಬಾರಿಯ ವಿಮೋಚನಾ ಯಾತ್ರೆಗೆ ಕಾಂಗ್ರೆಸ್ ಹೊರಟಿದೆ. ದೇಶವನ್ನು ಎಲ್ಲಾ ರೀತಿಯಲ್ಲಿ ಸರ್ವನಾಶ ಮಾಡುತ್ತಿರುವ, ಜನರನ್ನು ಧರ್ಮದ ಹೆಸರಿನಲ್ಲಿ ಬೇರ್ಪಡಿಸುತ್ತಿರುವ ಬಿಜೆಪಿಯ ಫ್ಯಾಸಿಸ್ಟ್ ಅಪಾಯವನ್ನು ಮರೆತು ಮಾರ್ಕಿಸ್ಟರ ಆಡಳಿತದಿಂದ ಕೇರಳವನ್ನು ವಿಮೋಚನೆಗೊಳಿಸುತ್ತೇವೆ ಎಂದು ಆಂಟನಿ ಹೊರಟಿರುತ್ತಾರೆ. 1957-59 ರ ವಿಮೋಚನಾ ಸಮರ ಎಂಬ ಹೋರಾಟದ ನೆಪದ ಸಂದರ್ಭದಲ್ಲಿ ಒಂದು ಅಲ್ಪಸಂಖ್ಯಾತ ಜನ ವಿಭಾಗವನ್ನು ದಿಕ್ಕು ತಪ್ಪಿಸುವಂತೆ ಮಾಡುವಲ್ಲಿ ಅಂದು ಕಾಂಗ್ರೆಸ್‌ಗೆ ಸಾಧ್ಯವಾಯಿತು. ಆದರೆ ಇಂದು ಈ ಅಲ್ಪಸಂಖ್ಯಾತ ವಿಭಾಗ ಕಮ್ಯುನಿಸ್ಟರ ಜೊತೆಯಲ್ಲಿದ್ದಾರೆ ಎಂಬ ಸತ್ಯವನ್ನು ಕಾಂಗ್ರೆಸ್ ಮರೆತಿದೆ.

1957-59 ರ ಕಾಲಘಟ್ಟದಲ್ಲಿ ಕೇಂದ್ರ ಆಡಳಿತ ಮಾಡಿಕೊಂಡಿದ್ದವರು ಕಾಂಗ್ರೆಸ್. ಆದರೆ ಇಂದು ಭಾರತದ ರಾಜಕೀಯ ಪರಿಸ್ಥಿತಿ ಭಿನ್ನವಾಗಿದೆ. ಇಂದು ಕಾಂಗ್ರೆಸ್ ಪಕ್ಷ ಸಣ್ಣದಾಗಿ ಸೀಸದ ಕಡ್ಡಿಯ ತರಹ ಆಗಿದೆ. ಎಲ್‌ಡಿಎಫ್ ಮೊಟ್ಟ ಮೊದಲನೆಯದಾಗಿ 5 ವರ್ಷ ಪೂರ್ತಿಯಾಗಿ ಆಡಳಿತ ನಡೆಸಿದರು. ಇದಕ್ಕೆ ಮುಂಚೆ ಎಲ್‌ಡಿಎಫ್ ವಿರೋಧಿಗಳು ಹೇಳುತ್ತಿದ್ದರು ಇವರಿಗೆ ಆಡಳಿತ ಮಾಡುವುದಕ್ಕೆ ಬರುವುದಿಲ್ಲ, ಅದಕ್ಕೆ ಸರ್ಕಾರ ಬಿದ್ದು ಹೋಗುತ್ತದೆ ಎಂದು. ಸಿಪಿಐ(ಎಂ) ನೇತೃತ್ವದಲ್ಲಿನ ಎಡರಂಗ ಸರ್ಕಾರದ ಪಶ್ಚಿಮ ಬಂಗಾಳದಲ್ಲಿ 24 ವರ್ಷ ಆಡಳಿತ ನಡೆಸಿಕೊಂಡು ಬಂದಿರುವುದು ಇವರಿಗೆ ಮರೆತು ಹೋಗಿದೆಯೇ?

ಹಿಂದೆ ಕೇರಳದಲ್ಲಿ ಕಾಂಗ್ರೆಸ್‌ನಲ್ಲಿರುವ ಒಂದು ವಿಭಾಗ ಮಾತ್ರ ಬಿಜೆಪಿ ಜೊತೆ ರಹಸ್ಯವಾಗಿ ಹೊಂದಾಣಿಕೆ ಮಾಡಿಕೊಂಡಿತ್ತು. ಆದರೆ ಈಗ ಎಲ್ಲರೂ ರಹಸ್ಯವಾಗಿ ಒಪ್ಪಂದ ಮಾಡಿದ್ದಾರೆ. ಅದರಲ್ಲಿ ಮುಸ್ಲಿಂ ಲೀಗ್, ಕೇರಳ ಕಾಂಗ್ರೆಸ್ ಮಾಣಿ ಗುಂಪು, ಮುಂತಾದ ಎಲ್ಲಾ ಜಾತಿವಾದಿಗಳು ಬಿಜೆಪಿ ವಿರೋಧಿಗಳೆಂದು ಹೇಳಿಕೊಳ್ಳುವವರು ಎಡರಂಗವನ್ನು ಸೋಲಿಸುವುದಕ್ಕಾಗಿ ಬಿಜೆಪಿ ಜೊತೆಯಲ್ಲಿ ರಹಸ್ಯವಾಗಿ ಒಪ್ಪಂದ ಮಾಡಿಕೊಂಡಿದ್ದಾರೆ.

ಇತ್ತೀಚೆಗೆ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾದ ಎಂ.ಎ.ಬೇಬಿ ಮುಖಂಡತ್ವದಲ್ಲಿ ಕನ್ಯಾಕುಮಾರಿಯ ಹತ್ತಿರ ಇರುವ ಪಾರಸಾಲ ಹೊರಟ ಜನ ಜಾಗೃತಿ ಜಾಥ ಮತ್ತು ಕಾಸರಗೋಡಿನಿಂದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕೊಡಿಯೇರಿ ಬಾಲಕೃಷ್ಣನ್ ಅವರ ಮುಖಂಡತ್ವದಲ್ಲಿ ಅಲ್ಲಿಂದ ಹೊರಟ ಜನ ಜಾಗೃತಿ ಜಾಥಾವು ಕೇರಳ ರಾಜ್ಯದ ಮೂಲೆ ಮೂಲೆಯಲ್ಲಿ ಸಂಚರಿಸುವಾದ ಈ ಎರಡು ಜಾಥಾಗಳಿಗೆ ಜನರಿಂದ ಭಾರೀ ಉತ್ಸಾಹದ ಸ್ವಾಗತ ಎಲ್ಲಾ ಕಡೆ ದೊರಕಿದೆ ಹಾಗೂ ಈ ಉತ್ಸಾಹದ ಸ್ವಾಗತದೊಡನೆ ಜಾಥಾ ಮುಂದುವರೆದಿದೆ. ಈ ಜಾಥಾ ಎಡ ಚಳುವಳಿಯ ಬಗ್ಗೆ ಜನಸಾಮಾನ್ಯರಿಗೆ ಇರುವ ನಂಬಿಕೆಯನ್ನು ಎತ್ತಿ ತೋರಿಸಿದೆ ಹಾಗೂ ಭಾರತದ ರಾಜಕೀಯದಲ್ಲೇ ಒಂದು ಪ್ರತಿಶಕ್ತಿಯಾಗಿ ಎಡರಂಗ ಬೆಳೆಯುತ್ತಿದೆ ಎಂಬುದನ್ನೂ ತೋರಿಸಿದೆ. ಆದರೆ ಆಂಟನಿಯ ಕೇರಳ ವಿಮೋಚನಾ ಯಾತ್ರೆ ಹಿಂದಿನ 1957 ವಿಮೋಚನಾ ಹೋರಾಟದ ಒಂದು ಧ್ವನಿಮುದ್ರಿಕೆ ಮಾತ್ರವಾಗಿದ್ದು ಆ ಧ್ವನಿ ಮುದ್ರಿಕೆಯನ್ನೇ ಪುನಃ ಪುನಃ ಹಾಡಿಸುತ್ತಿರುವಂತಿದೆ. ಯು.ಡಿ.ಎಫ್. ನಲ್ಲಿರುವ ಮುಸ್ಲಿಂ ಲೀಗ್ ಹಾಗೂ ಇತರೇ ಅಲ್ಪಸಂಖ್ಯಾತ ಪಕ್ಷಗಳು ಹಿಂದೂ ಫ್ಯಾಸಿಸಂವಾದದ ಅಪಾಯವನ್ನು ಕಂಡೂ ಸಹ ಕಣ್ಣು ಮುಚ್ಚಿ ಕುಳಿತಿವೆ. ಹಿಂದೂ ಫ್ಯಾಸಿಸ್ಟ್ ಶಕ್ತಿಗಳು ಬಾಬ್ರಿ ಮಸೀದಿಯನ್ನು ಉರುಳಿಸಿದ ನಂತರ ಇತ್ತೀಚೆಗೆ ನಡೆದ ಕುಂಭಮೇಳದಲ್ಲಿ ನಾವು ಇನ್ನೂ ಸುಮ್ಮನೆ ಕುಳಿತಿರುವುದಿಲ್ಲ ಎಂದು ಘೋಷಣೆ ಮಾಡಿರುತ್ತಾರೆ. ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟೇ ಕಟ್ಟುತ್ತೇವೆ, ಮಾತ್ರವಲ್ಲ ಇನ್ನೂ ಹಲವು ಮಸೀದಿಗಳನ್ನು ಸ್ವಾಧೀನ ಪಡಿಸುತ್ತೇವೆ ಎಂದು ಘೋಷಣೆ ಮಾಡಿರುತ್ತಾರೆ. ಇಂದಿನ ಭಾರತದ ಸಂವಿಧಾನ ಹಿಂದೂಗಳಿಗೆ ಎದುರಾಗಿದೆ ಇದನ್ನು ಬದಲಾಯಿಸಬೇಕು ಎಂದು ಸಂಘ ಪರಿವಾರದ ಬೇಡಿಕೆ ಇಟ್ಟಿದೆ. ಅಲ್ಪಸಂಖ್ಯಾತರಿಗೆ ರಕ್ಷಣೆ, ಹಿಂದುಳಿದ ವರ್ಗಕ್ಕೆ ಇರುವ ಮೀಸಲಾತಿ ಮತ್ತು ಹಿಂದುಳಿದ ಪಂಗಡಗಳಿಗೆ ಸಂವಿಧಾನದಲ್ಲಿ ಇರುವ ಅನುಕೂಲಗಳನ್ನು ರದ್ದುಗೊಳಿಸಬೇಕು, ಸಂವಿಧಾನದಲ್ಲಿ ಇರುವ ಈ ರಕ್ಷಣೆಗಳು ಸವರ್ಣ ಹಿಂದೂಗಳಿಗೆ ವಿರೋಧವಾಗಿದೆ ಎಂದು ಸಹ ಸಂಘ ಪರಿವಾರ ಶಕ್ತಿಗಳು ಹೇಳಿಕೊಳ್ಳುತ್ತಿದ್ದಾರೆ.

1959 ರ ವಿಮೋಚನಾ ಸಮರದಲ್ಲಿ ಬಿಕರಿಯಾಗಿದ್ದ ಕಮ್ಯುನಿಸ್ಟ್ ವಿರೋಧ ಇಂದು ಕೇರಳದ ಮಣ್ಣಿನಲ್ಲಿ ಬಿಕರಿಯಾಗುತ್ತಿಲ್ಲ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೇರಳದ ಜನತೆ ಪುನಃ ಎಡರಂಗ ಜೊತೆ ನಿಲ್ಲುತ್ತದೆ ಎಂಬ ಸತ್ಯ ಜನವರಿ 30 ರಂದು ಪಾಲಸಾಲ ಹಾಗೂ ಕಾಸರಗೋಡಿನಿಂದ ಹೊರಟ ಜಾಥಾಗಳು ಕೇರಳದ ನಡುವೆ ತ್ರಿಶೂರಿನಲ್ಲಿ ಸಂಧಿಸಿದಾಗ ಕಂಡು ಬಂದಿದೆ. ತ್ರಿಚೂರಿನಲ್ಲಿ ಅಂದು ಕೆಂಬಾವುಟದ ಜೊತೆ ಸಾಗಿದ ಜನ ರಕ್ಷಕ ಚಳುವಳಿಯಾದ ಕುಮ್ಯುನಿಸ್ಟ್ ಪಕ್ಷ ದೊಡ್ಡ ಶಕ್ತಿಯಾಗಿ ಜನಸಾಗರದಲ್ಲಿ ಬೆರೆತಿದೆ ಎಂದು ಸಾಬೀತಾಗಿದೆ. ಜಾಥಾಗಳ ಮುಕ್ತಾಯದ ದಿನ ತ್ರಿಚೂರಿನಲ್ಲಿ ನಡೆದ ಈ ಕೆಂಪು ಜನಸಾಗರವನ್ನು ಉದ್ದೇಶಿಸಿ ಸಿಪಿಐ(ಎಂ) ರಾಷ್ಟ್ರ ಕಾರ್ಯದರ್ಶಿ ಕಾಂ. ಹರಿಕಿಶನ್ ಸಿಂಗ್ ಸುರ್ಜಿತ್ ಮಾತನಾಡುತ್ತಾ ಅಖಿಲ ಭಾರತ ಕಿಸಾನ್ ಸಭಾ ಪ್ರಾರಂಬಿಸಿದ ರೈತ ಚಳುವಳಿ ಇತರ ಜನ ವಿಭಾಗದೊಡನೆ ಸೇರಿ ಬದಲಿ ರಾಜಕೀಯ ಶಕ್ತಿಯೊಂದನ್ನು ಕಟ್ಟಿ ಬೆಳೆಸಲು ಕರೆ ನೀಡಿದರು. ಅಂದು ಕಾಂಗ್ರೆಸ್ ಆರಂಭಿಸಿ, ಬಿಜೆಪಿ ಮುಂದುವರಿಸುತ್ತಿರುವ ಹೊಸ ಆರ್ಥಿಕ ನೀತಿ, ಉದಾರೀಕರಣ, ವಿಶ್ವವ್ಯಾಪಾರಿ ಸಂಘಟನೆ, ಗ್ಯಾಟ್ ಒಪ್ಪಂದ, 1400 ಪದಾರ್ಥಗಳನ್ನು ಯಾವುದೇ ನಿಯಂತ್ರಣವಿಲ್ಲದೆ 2001 ಏಪ್ರಿಲ್‌ನಿಂದ ದೇಶದೊಳಗೆ ಮುಕ್ತವಾಗಿ ಆಮದು ಮಾಡುವುದು ಇವುಗಳ ವಿರುದ್ಧ ಚಳುವಳಿ ಕಟ್ಟಿ ಬೆಳೆಸಲು ಕರೆ ನೀಡಿದರು.

............ಅಬ್ಬಬ್ಬ! ಏನಿದು! ಈ ಶುಲ್ಕ ಏರಿಕೆ!

ತೋರಿಸಲಾಗುತ್ತಿದೆ ಏಕೆ?

ದೇಶ ಸಂವಿಧಾನವನ್ನು ಅಂಗೀಕರಿಸಿದ 10 ವರ್ಷಗಳಲ್ಲಿ 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯವಾದ ಪ್ರಾಥಮಿಕ ಶಿಕ್ಷಣ ನೀಡಬೇಕೆನ್ನುತ್ತದೆ ನಮ್ಮ ಸಂವಿಧಾನದ 14ನೇ ವಿಧಿ. ನಮ್ಮ ಸರ್ಕಾರಗಳೂ 50 ವರ್ಷಗಳಿಂದಲೂ ಅದನ್ನೇ ಹೇಳುತ್ತಾ ಬರುತ್ತಿವೆ. 21ನೇ ಶತಮಾನ ಬರುವುದರೊಳಗೆ ಎಲ್ಲರಿಗೂ ಶಿಕ್ಷಣ ಎಂದು ಘೋಷಿಸಿದ್ದು ಹಲವು ಬಾರಿ ರಾಷ್ಟ್ರಮಟ್ಟದ, ಖಂಡ, ಜಾಗತೀಕ ಮಟ್ಟದ ಹಲವು ಸಮ್ಮೇಳನ, ಶೃಂಗಸಭೆಗಳಲ್ಲಿ ಈ ಬಗ್ಗೆ ಪುಟಗಟ್ಟಲೆ ದಾಖಲೆ ಮಂಡಿಸಿದ್ದು, ಹತ್ತೆಂಟು ಘೋಷಣೆ ಹೊರಡಿಸಿದ್ದು ಆಗಿಹೋಗಿವೆ.

ಕಳೆದ ಒಂದು ದಶಕದಿಂದ ಭಾಷಣಗಳು-ಘೋಷಣೆಗಳ ದನಿ ಬದಲಾಗಿದೆ. ಎಲ್ಲರಿಗೂ ಶಿಕ್ಷಣ ಎನ್ನುತ್ತಿದ್ದವರು, ಶಿಕ್ಷಣಕ್ಕೆ ಹಣ ಕೊಡಲಾಗದು ಎನ್ನುತ್ತಿದ್ದಾರೆ. ಉನ್ನತ ಶಿಕ್ಷಣದ ವಿರುದ್ಧ ಪ್ರಾಥಮಿಕ ಶಿಕ್ಷಣವನ್ನು ಎತ್ತಿ ಕಟ್ಟುತ್ತಾ ಮೆಲ್ಲಗೆ ಆರಂಭವಾದ ಈ ವಾದ ಕ್ರಮೇಣ ಜೋರಾಗಿ, ಈಗ ಪ್ರಾಥಮಿಕ ಶಿಕ್ಷಣದ ಕೊರಳಿಗೂ ಕತ್ತರಿ ಹಿಡಿದಿದೆ.

ಶಿಕ್ಷಣಕ್ಕೆ ಅದರಲ್ಲೂ ಉನ್ನತ ಶಿಕ್ಷಣಕ್ಕೆ ಸಹಾಯಧನ ನೀಡಲಾಗದು, ವಿಶ್ವವಿದ್ಯಾಲಯಗಳು ಉತ್ತಮ ಮಟ್ಟದ ಬೋಧನಾ ಶುಲ್ಕಗಳನ್ನು ನಿಗದಿ ಮಾಡಬೇಕು. ಸ್ವಯಂ ಹಣಕಾಸು ಶಿಕ್ಷಣ ನೀತಿಯನ್ನು ವಿಶ್ವವಿದ್ಯಾಲಯಗಳು ಜಾರಿಗೊಳಿಸಬೇಕು ಎಂದು ಈಗ ಬಹಿರಂಗ ಕರೆ ನೀಡಲಾಗುತ್ತಿದೆ. ಉನ್ನತ ಶಿಕ್ಷಣಕ್ಕೆ ಈಗ ನೀಡಲಾಗುತ್ತಿರುವ ಸಹಾಯಧನವನ್ನು ತತ್‌ಕ್ಷಣದ ಹಂತದಲ್ಲಿ ಶೇಕಡಾ 50 ಕ್ಕಿಳಿಸುವುದು ಹಾಗೂ ಅದರ ಮುಂದಿನ ಹಂತದಲ್ಲಿ ಶೇ 25 ಕ್ಕೆ ಇಳಿಸಬೇಕು ಎನ್ನುತ್ತದೆ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ದಾಖಲೆಗಳು.

ಭಾರತ ದೇಶದ ಉದ್ದಗಲಕ್ಕೆ 6 ರಿಂದ 14 ರ ವಯಸ್ಸಿನ ಮಕ್ಕಳಲ್ಲಿ ಸುಮಾರು 9 ಕೋಟಿ ಮಕ್ಕಳು ಶಾಲೆಯಿಂದ ಹೊರಗಿದ್ದಾರೆ ಎನ್ನುತ್ತವೆ ಅಧಿಕೃತ ದಾಖಲೆಗಳು. ಇವರಲ್ಲಿ 3 ಕೋಟಿ ಮಕ್ಕಳು ಬಾಲ ಕಾರ್ಮಿಕರು. (ಇದು ನಾವು ಪ್ರಾಥಮಿಕ ಶಿಕ್ಷಣಕ್ಕೆ ದೇಶದಲ್ಲಿ ನೀಡಿರುವ ಆದ್ಯತೆ). ಇಂತಹ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಇರುವ ನಮ್ಮ ಸಮಾಜದಲ್ಲಿ [illegible] - ಅದಕ್ಕೂ ಹೆಚ್ಚು ಏರಿಸುವುದು ಎಂದರೆ ಪ್ರಾಥಮಿಕ ಶಿಕ್ಷಣದ ವ್ಯಾಪ್ತಿಯ ಮತ್ತಷ್ಟು ದೊಡ್ಡ ಸಂಖ್ಯೆ ಮಕ್ಕಳನ್ನು ಶಿಕ್ಷಣದ ವ್ಯಾಪ್ತಿಯಿಂದ ಆಚೆ ದಬ್ಬುವುದು ಎಂದೇ ಅರ್ಥ. ಇಲ್ಲಿಯೇ ಸಾಬೀತಾಗುತ್ತದೆ 'ಪ್ರಾಥಮಿಕ ಶಿಕ್ಷಣಕ್ಕೆ ಆದ್ಯತೆ' ಎನ್ನುವ ನಮ್ಮ ಸರ್ಕಾರಗಳ ವಾದಗಳ ಟೊಳ್ಳುತನ.

ಏಕೆ ಹೀಗಾಗುತ್ತದೆ ಎಂಬುದೇ ಈಗ ಮುಖ್ಯವಾದ ಪ್ರಶ್ನೆ. ಧಾರವಾಡದ ನಮ್ಮ ರೈತ ಭರಮಣ್ಣ ಮೊನ್ನೆ ಮೊನ್ನೆ ಏಕೆ ವಿಷ ಕುಡಿದು ಸತ್ತನೋ ಅದೇ ಈ ಶುಲ್ಕ ಏರಿಕೆಗೂ ಕಾರಣ. ಮೂರು ವರ್ಷಗಳ ಹಿಂದೆ ಇದ್ದ ಸೀಮೆಎಣ್ಣೆ ಬೆಲೆಗಿಂತ. ಈಗ ಏಕೆ 3 ಪಟ್ಟು ಬೆಲೆ ಆಗಿದೆಯೋ ಅದೇ ಈ ಶುಲ್ಕ ಏರಿಕೆಗೂ ಕಾರಣ. ಬಾಟಲಿಗೆ ಬಣ್ಣದ ನೀರು ತುಂಬಿ ಕೊಳ್ಳೆ ಹೊಡೆಯುತ್ತಿರುವ ಕೋಕೋಕೋಲಾ ಕಂಪನಿಗೆ ಏಕೆ ಮಾರಾಟ ತೆರಿಗೆಯಿಂದ ರಿಯಾಯಿತಿ ಸಿಕ್ಕಿದೆಯೋ ಅದೇ ಈ ಶುಲ್ಕ ಏರಿಕೆಗೂ ಕಾರಣ. ಅದುವೇ ಈಗ ದೇಶದ ತಾರಕ ಮಂತ್ರವಾಗಿರುವ ಜಾಗತೀಕರಣ, ಜಾಗತೀಕರಣ ಜಾಗತೀಕರಣ.

> **ಎಲ್ಲರಿಗೂ ಶಿಕ್ಷಣ ಎನ್ನುತ್ತಿದ್ದವರು, ಶಿಕ್ಷಣಕ್ಕೆ ಹಣ ಕೊಡಲಾಗದು ಎನ್ನುತ್ತಿದ್ದಾರೆ. ಉನ್ನತ ಶಿಕ್ಷಣದ ವಿರುದ್ಧ ಪ್ರಾಥಮಿಕ ಶಿಕ್ಷಣವನ್ನು ಎತ್ತಿ ಕಟ್ಟುತ್ತಾ ಮೆಲ್ಲಗೆ ಆರಂಭವಾದ ಈ ವಾದ ಕ್ರಮೇಣ ಜೋರಾಗಿ, ಈಗ ಪ್ರಾಥಮಿಕ ಶಿಕ್ಷಣದ ಕೊರಳಿಗೂ ಕತ್ತರಿ ಹಿಡಿದಿದೆ.**

ಒಂದು ಹಂತದವರೆಗೆ ಬಾಯಿ ಮಾತಿನಲ್ಲಾದರೂ ಬದ್ಧತೆಯನ್ನು ಸಾರುತ್ತಿದ್ದ ಸರಕಾರಗಳು ಆಳುವ ಜನಗಳ ಮಾತಿನಲ್ಲಿ ಸ್ಪಷ್ಟವಾದ ಪಲ್ಲಟ ಕಾಣಬರುತ್ತಿದೆ.

ಜಾಗತೀಕರಣದ ಅಬ್ಬರ
ಶುಲ್ಕ ಏರಿಕೆಯ ಉಬ್ಬರ

ದೇಶದಲ್ಲಿ ಜಾಗತೀಕರಣದ ಅಬ್ಬರ ಜೋರಾದಂತೆ ಶುಲ್ಕ ಏರಿಕೆಯ ಉಬ್ಬರವೂ ಹೆಚ್ಚುತ್ತಿದೆ. ಸುಮಾರು 10 ವರ್ಷಗಳ ಹಿಂದೆ ಈ ಮಾತನ್ನು ನಾವು ಹೇಳುವಾಗ ಕೆಲವರು ನಂಬುತ್ತಿರಲಿಲ್ಲ ಮಾತ್ರವಲ್ಲ, ಒಳಗೊಳಗೆ ನಗುವವರು ಇದ್ದರು. ಈಗ ಇದನ್ನು ನಾವು ಹೇಳುವುದಲ್ಲ ಸ್ವತಃ ನಮ್ಮ ಸರಕಾರ ಮಂತ್ರಿಗಳೇ, ಮುಖ್ಯಮಂತ್ರಿಗಳೇ ಬಹಿರಂಗವಾಗಿ ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಪಾಲಿಟೆಕ್ನಿಕ್ ಬೋಧನಾ ಶುಲ್ಕಗಳು(ಏಳೂವರೆ ಪಟ್ಟು) ಏರಿದಾಗ ವಿದ್ಯಾರ್ಥಿ ಸಮುದಾಯದ ವ್ಯಾಪಕ ಪ್ರತಿರೋಧ ವ್ಯಕ್ತವಾಯಿತು. ಆಗ ಕರ್ನಾಟಕದಲ್ಲಿ ಸರ್ಕಾರದ ಪರವಾಗಿ ನಮ್ಮ ವಾರ್ತಾ ಮತ್ತು ಪ್ರಸಾರ ಸಚಿವರೆ ಹೇಳಿಕೆ ನೀಡಿದರು. ಕರ್ನಾಟಕ ರಾಜ್ಯದಲ್ಲಿ ಪಾಲಿಟೆಕ್ನಿಕ್‌ಗಳ ಸುಧಾರಣೆಗೆಂದು ವಿಶ್ವಬ್ಯಾಂಕ್‌ನಿಂದ 92 ಕೋಟಿ ರೂ.ಗಳ ಸಾಲ ಪಡೆಯಲಾಗಿದೆ. ಸಾಲದ ಹಲವು ಷರತ್ತುಗಳಲ್ಲಿ ಪಾಲಿಟೆಕ್ನಿಕ್ ಶಿಕ್ಷಣ ಶುಲ್ಕಗಳನ್ನು ಏರಿಸಬೇಕು ಎಂಬುದು ಒಂದು. ಶುಲ್ಕ ಏರಿಸದೇ ಬೇರೆ ದಾರಿಯೇ ಇಲ್ಲ, ನಾವು ಅಸಹಾಯಕರು ಎನ್ನುತ್ತಾರೆ ಸಚಿವರು.

ಜಗತ್ತಿನಲ್ಲಿ ಏಕಪಕ್ಷೀಯವಾದ ಜಾಗತೀಕರಣವನ್ನು ಪ್ರತಿಪಾದಿಸುವ ತ್ರಿಮೂರ್ತಿಗಳಲ್ಲಿ ವಿಶ್ವ ಬ್ಯಾಂಕ್ ಸಹ ಒಂದು. ಸಾಲ ನೀಡುವ ವಿದೇಶಿ ದಣಿಗಳಿಗೆ ಸಾಲ ಕೊಟ್ಟ ನಂತರ ಬಡ್ಡಿ ವಾಪಸ್ ಹುಟ್ಟುತ್ತದೆಯೋ ಎಂಬುದು ಅವರ ಮೊದಲ ಕಾಳಜಿ. ಹಾಗೇ ಅಸಲಿಗೆ ಭದ್ರತೆ. ಸಾಲಗಾರ ದೇಶಗಳು 'ರಾಷ್ಟ್ರೀಯ ಅಗತ್ಯ', 'ರಾಷ್ಟ್ರೀಯ ಆದ್ಯತೆಗಳು' 'ಸ್ವಾವಲಂಬನೆ' ಇತ್ಯಾದಿ ಹೆಸರಿನಲ್ಲಿ ಶಿಕ್ಷಣ-ಆರೋಗ್ಯ- ಕ್ರೀಡೆ-ಸಂಶೋಧನೆ ಇತ್ಯಾದಿ ಗಳಿಗಾಗಿ ವೆಚ್ಚ ಮಾಡುತ್ತಾ ಹೋದರೆ ತಮ್ಮ 'ಬಡ್ಡಿ' ಹಿತಾಸಕ್ತಿಗೆ ಅಸಲಿನ ಭದ್ರತೆಗೆ ಧಕ್ಕೆ ಬರುತ್ತದೆ. ಹೀಗಾಗಿ ಭಾರತದಂತಹ ದೇಶಗಳು ಶಿಕ್ಷಣ-ಆರೋಗ್ಯ ಸಾಮಾಜಿಕ ವೆಚ್ಚವನ್ನು ಕೃಷಿ-ಸಣ್ಣ ಕೈಗಾರಿಕೆಗಳು ಇತ್ಯಾದಿ ಇತ್ಯಾದಿಗಳಿಗೆ ನೀಡುವ ಎಲ್ಲ ಬಗೆಯ ಸಹಾಯಧನ ನೀತಿಗಳು ಕೊನೆಯಾಗಲಿ ಎನ್ನುತ್ತದೆ. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ(IMF). ಇದರ ಪರಿಣಾಮವನ್ನೇ ನಾವೀಗ ಭಾರತದಲ್ಲಿ ಕರ್ನಾಟಕದಲ್ಲಿ ನೋಡುತ್ತಿದ್ದೇವೆ.

ಇಂತಹ ಜಾಗತೀಕರಣವನ್ನು ಅಪ್ಪಿಕೊಂಡು ಮುಳುಗಲು ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ, ಹೈಟೆಕ್ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನೇತೃತ್ವದ ಕಾಂಗ್ರೆಸ್ ಎರಡು [illegible] ಹೆಚ್ಚೇನೂ ವ್ಯತ್ಯಾಸವಿಲ್ಲ. ಒಂದೇ ವ್ಯತ್ಯಾಸವೆಂದರೆ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಶಾಲಾ ಪಠ್ಯಗಳಲ್ಲಿ 'ಕುತುಬ್ ಮಿನಾರ್' ನ್ನು 'ವಿಷ್ಣು ಸ್ತಂಭ' ಎಂದೂ 'ತಾಜ್‌ಮಹಲ್' ನ್ನು 'ತೇಜ್ ಮಹಲ್' ಎಂದೂ ಮುಸ್ಲಿಂ ಅರಸರು ಅದನ್ನು ತಿರುಚಿ ಪುನರ್‌ರಚಿಸಿ ವಿಕೃತ(!)ಗೊಳಿಸಿದ್ದಾರೆಂದು ಕಲಿಸಲಾಗುತ್ತಿದೆ. 'ಜನಾಂಗ'ದ ರಕ್ತ ಪರಿಶುದ್ಧತೆಯನ್ನು ಕಾಯುವ ದೃಷ್ಟಿಯಿಂದ ಜಾತಿ ಪದ್ಧತಿ ಸರಿ ಎಂದು, ಸಣ್ಣವರಿಂದಲೇ ಒಡನಾಟ ದೊರೆತರೆ ಜೀವನದಲ್ಲಿ ಸಾಮರಸ್ಯ ಮೂಡುತ್ತದೆ ಎನ್ನುವ ಕಾರಣಕೊಟ್ಟು ಬಾಲ್ಯ ವಿವಾಹವನ್ನು ಸರಿ ಎಂದು ಕಲಿಸಲಾಗುತ್ತಿದೆ. ಹಿಂದೂ ಸಂಸ್ಕೃತಿಯ ಹಿರಿಮೆಯ ಹೆಸರಿನಲ್ಲಿ 'ಸತಿ' ಪದ್ಧತಿಯನ್ನು ಸಮರ್ಥಿಸಲಾಗುತ್ತಿದೆ.

ಈ ಎಲ್ಲಾ ಕ್ರಮಗಳ ಮೂಲಕ ತಾವು ದೇಶವನ್ನು ಸನಾತನ ಸುವರ್ಣಯುಗಕ್ಕೆ ಒಯ್ಯುತ್ತೇವೆ ಎಂದುಕೊಂಡಿದ್ದಾರೆ ಈ ಹಿಂದೂ ಮೂಲಭೂತವಾದಿಗಳು. ಅವರು ನಮ್ಮನ್ನು ಮಧ್ಯಯುಗದ ಅಂಧಕಾರಕ್ಕೆ ಒಯ್ಯುತ್ತಿದ್ದಾರೆ. ಅಂದೂ ಶಿಕ್ಷಣವನ್ನು ಅರಮನೆ-ಅಗ್ರಹಾರ, ಅಂತಃಪುರಗಳಿಗೆ ಮಾತ್ರ ಸೀಮಿತಗೊಳಿಸ ಲಾಗಿತ್ತಲ್ಲವೇ. ಈಗಲೂ ಅದೇ ಸ್ಥಿತಿ ಮತ್ತೊಂದು ರೂಪದಲ್ಲಿ ಬರುತ್ತಿದೆ. ಶಾಲಾ-ಕಾಲೇಜುಗಳಿಗೆ ಎಲ್ಲರಿಗೂ ಪ್ರವೇಶವಿಲ್ಲ. ಯಾರು ತೆರುತ್ತಾರೆ ಡೊನೇಷನ್ ಮಣ-ಮಣ, ಅವರಿಗೆ ಮಾತ್ರ ಸಿಗುತ್ತದೆ ಶಿಕ್ಷಣ. ಜಾಗತೀಕರಣದ ಶಕ್ತಿಗಳಿಗೆ ಬೇಕಾಗಿರುವುದೂ ಅದೇ ಅಲ್ಲವೇ?

ಎಷ್ಟೆಲ್ಲಾ ಶುಲ್ಕ ಏರಿಕೆಗಳ ನಡುವೆ ಶುಲ್ಕ ಇಳಿಕೆಯ ಬಗೆಗೆ ವರದಿ ಇರುವುದು ಒಂದೇ ಒಂದು. ಅದು ಇಂಜಿನಿಯರಿಂಗ್ ಶುಲ್ಕ. ವರ್ಷಕ್ಕೆ ಸುಮಾರು 40 ಸಾವಿರ ರೂ. ಶುಲ್ಕ ಕಡಿತವಾಗಿದೆ! ಯಾರಿಗೆ ಅಂತೀರಿ. ಅದರೆ NRI ಗಳು, ಅನಿವಾಸಿ ಭಾರತೀಯರಿಗೆ ಹೇಗಿದೆ ಜಾಗತೀಕರಣದ ಲೀಲೆ.

ಹಣದ ಸದ್ದು ಝಣ ಝಣ
ಬಡವರ ಜೇಬು ಭಣ ಭಣ
ಅವರಿಗೆ ಏತಕೆ ಶಿಕ್ಷಣ
ತಂದಿರೋ ವಂತಿಗೆ ಮಣ-ಮಣ
ಪ್ರವೇಶ ನಿಮಗೆ ತಕ್ಷಣ
ಉಸಿರೆತ್ತದಿರಿ, ಇದಕ್ಕಲ್ಲ ಕಾರಣ
ಜಾಗತೀಕರಣ, ಖಾಸಗೀಕರಣ
ಪೂರ್ವ ಜನ್ಮದ ಪಾಪವಣ್ಣ!
ಬನ್ನಿರೆಲ್ಲಾ ಜೊತೆಗೂಡಿ
ಅಪ್ಪಟ 'ಸ್ವದೇಶಿ'
ಸರಸ್ವತಿ ಮಂತ್ರವ ಜಪಿಸಿಬಿಡಿ!

ಗೋಬೆಲ್ಸ್ ಸಂತತಿ ಸೃಷ್ಟಿಸಿದ 'ಹನುಮಂತ ಇಗೋ....'

ಉತ್ತರ ಕನ್ನಡದ ಒಂದು ದಿನಪತ್ರಿಕೆ 'ಧ್ಯೇಯನಿಷ್ಠ ಪತ್ರಕರ್ತ'ದಲ್ಲಿ ಒಂದು ವಿಚಿತ್ರ ಸುದ್ದಿ ಪ್ರಕಟ ಆಗಿತ್ತು. 'ಇಗೋ! ಹನುಮಂತ!' ಎನ್ನುವ ತಲೆಬರಹದ ಅಡಿಯಲ್ಲಿ ಮಂಗ ಮತ್ತು ಮನುಷ್ಯನ ಚಹರೆಯುಳ್ಳ ಒಂದು ಚಿತ್ರವನ್ನು ಕೊಟ್ಟು, ಅದಕ್ಕೆ ಕೊಟ್ಟ ವಿವರಣೆ ಹೀಗಿದೆ "ಕಲಿಯುಗದಲ್ಲಿ ದೇವರು ಮನುಷ್ಯನ ಕಣ್ಣಿಗೆ ಕಾಣಿಸಿಕೊಳ್ಳುವುದಿಲ್ಲ ಎಂಬ ಸಾಮಾನ್ಯ ನಂಬಿಕೆಗೆ ವ್ಯತಿರಿಕ್ತವಾಗಿ ಸುಮಾರು ಒಂದು ವರ್ಷದ ಈಚೆಗೆ ದಕ್ಷಿಣ ಭಾರತದ ವ್ಯಕ್ತಿಯೋರ್ವರಿಗೆ ಹನುಮಂತ ಕಾಣಿಸಿಕೊಂಡಿದ್ದು ಮಾತ್ರವಲ್ಲ ಅವರ ಬಿಂಬಗ್ರಾಹಿ(ಕ್ಯಾಮರಾ)ಯಲ್ಲಿರುವ ಫಿಲ್ಮ್ ಮೇಲೆ ಕೂಡ ಮೂಡಿದ್ದಾನೆ. ಆ ಘಟನೆಗೆ ಪುರಾವೆಯಾಗಿ ಇಲ್ಲಿ ಮುದ್ರಿತವಾಗಿರುವ ಹನುಮಂತನ ಛಾಯಾಚಿತ್ರವಿದೆ"

ಪತ್ರಿಕೆಯನ್ನು ಪ್ರಜಾಪ್ರಭುತ್ವ ವ್ಯವಸ್ಥೆಯ ಒಂದು



ಕಂಭ ಎಂದು ಕರೆಯುತ್ತಾರೆ. ಅಂತರ ವಸ್ತುನಿಷ್ಠ ವಿಶ್ಲೇಷಣೆ, ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವ ಜವಾಬ್ದಾರಿ ಪತ್ರಿಕೆಯ ಮೇಲಿದೆ. ಅದು ಈ ಪತ್ರಿಕಾಧ್ಯೇಯ ಕೂಡ. ಆದರೆ ಒಂದಷ್ಟು ಪತ್ರಿಕೆಗಳು ಇವರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿವೆ. ಜನರನ್ನು ಮತ್ತೊಂದಿಷ್ಟು ಹಿಂದಕ್ಕೊಯ್ಯುವ, ಕಂದಾಚಾರ, ಮೌಢ್ಯವನ್ನು ಬೆಳೆಸುವ, ದೇಶವನ್ನು

> **"ಯುಗಧರ್ಮಕ್ಕೆ ಅನುಗುಣವಾಗಿ ಈಗ ಹನುಮಂತ ಹೀಗಾಗಿದ್ದಾನೆ. ಆದರೆ ತ್ರೇತಾಯುಗದಲ್ಲಿ ಆತ ಈಗಿನ ತನ್ನ ಆಕೃತಿಗಿಂತ 20 ಪಟ್ಟು ಬೃಹತ್ ಆಗಿದ್ದ" ಎಂದು ಬರೆದಿದ್ದಾರೆ. ಈ ಎಲ್ಲಾ ಮಾಹಿತಿ ಕೊಟ್ಟವರು ಆಧ್ಯಾತ್ಮಿಕವಾಗಿ ಬಹಳ ಸಾಧನೆ ಮಾಡಿರುವ ಓರ್ವ ಸಾಧಕರು" ಎಂದಿದೆ. ಸಾಧಕ ಎಂದರೆ ಹುಚ್ಚ ಎಂದು ಅರ್ಥ ಇರಲಿಕ್ಕಿಲ್ಲ ಅಲ್ಲವೇ?**

20 ನೇ ಶತಮಾನದಿಂದ 19 ರ ಕಡೆಗೆ ಒಯ್ಯುವ ಕ್ರಿಯೆಯಲ್ಲಿ ಉದ್ದೇಶಪೂರ್ವಕವಾಗಿ ತಲ್ಲೀನ ಆಗಿವೆ. ವಸ್ತುನಿಷ್ಠತೆ ಎಂದರೆ ಕೋಮು ಭಾವನೆಯನ್ನು ಜಾಗ್ರತ ಮಾಡುವುದು ಎಂದೇ ತಿಳಿದಿರುವವರ ಮನಸ್ಥಿತಿ ಇದು. ಆರ್.ಎಸ್.ಎಸ್., ವಿಶ್ವ ಹಿಂದೂ ಪರಿಷತ್ ಮತ್ತು ಅದರ ರಾಜಕೀಯ ಮುಖವಾದ ಬಿಜೆಪಿಯ ಸಿದ್ಧಾಂತವಲ್ಲದೆ ಇದು ಇನ್ನೇನೂ ಅಲ್ಲ, ಅಂತಹ ಸುದ್ದಿ ಪ್ರಕಟಿಸುವುದರಲ್ಲಿ ಎತ್ತಿದ ಕೈಯಾದ 'ಧ್ಯೇಯನಿಷ್ಠ ಪತ್ರಕರ್ತ' ನಿಗೆ ರೈತ ಆತ್ಮಹತ್ಯೆ ಮಾಡಿಕೊಂಡಿರುವುದಕ್ಕಿಂತ ಹನುಮಂತನ ಸುಳ್ಳು ಚಿತ್ರ ಕೊಡುವುದರಲ್ಲಿಯೇ ಹೆಚ್ಚು ಆಸಕ್ತಿ ಇರುವುದು ಆಶ್ಚರ್ಯದ ಮಾತಲ್ಲ.

ಈ ಸುದ್ದಿ ಎಷ್ಟು ಅವೈಜ್ಞಾನಿಕ ಸಂಗತಿ ಎನ್ನುವುದನ್ನು ಆ ಚಿತ್ರವೇ ಹೇಳುತ್ತಿದೆ. ಈ ಚಿತ್ರವನ್ನು ಕಂಪ್ಯೂಟರ್‌ನಲ್ಲಿ ಮಾಡಿರುವುದು ಅಥವಾ ಒಬ್ಬ ಕಲಾವಿದ ಬಿಡಿಸಿದ ಚಿತ್ರವೆಂದು ತಿಳಿಯಲು ಬಹಳ ಬುದ್ಧಿವಂತಿಕೆ ಬೇಕಾಗಿಲ್ಲ. ಹುಬ್ಬುಗಳು, ಕೈ ಬೆರಳಿಗೆ ಕೊಟ್ಟ ಶೇಡಿಂಗ್, ತಲೆಯ ಭಾಗ ಎಲ್ಲವೂ ಇದೊಂದು ಚಿತ್ರವೆಂಬುದನ್ನು ಸ್ಪಷ್ಟಪಡಿಸುತ್ತದೆ. ಇನ್ನೂ ಸ್ವಲ್ಪ ತಾಳ್ಮೆಯಿಂದ ಕಲಾವಿದ ವರ್ತಿಸಿದ್ದರೆ ಇನ್ನೂ ಸುಂದರವಾದ ಚಿತ್ರ ಬಿಡಿಸಬಹುದಾಗಿತ್ತಲ್ಲ ಎಂದು ನಾವು ಒಂದು ಸಲಹೆ ಕೊಡಬಹುದು.

ಈ ಚಿತ್ರ ತೆಗೆದವರು ಯಾರು ಎಂದಾಗಲೀ, ಈ ಚಿತ್ರ ತೆಗೆದ ವ್ಯಕ್ತಿಯ ಬಗ್ಗೆ ವಿವರ ಕೊಟ್ಟ ಜಗದ್ಗುರುಗಳ ವಿದ್ಯಾಗುರುಗಳ ರಕ್ತ ಸಂಬಂಧಿಯಾರು ಎನ್ನುವುದನ್ನಾಗಲೀ, ಈ ಸ್ಥಳ ಹಿಮಾಲಯ ಪ್ರಾಂತದ ಯಾವ ಸ್ಥಳವೆಂದಾಗಲಿ ನಮೂದಿಸದೇ ಬರೆದ ಬರಹ ಇದು.

ದಿಕ್ಕೆಡಿಸುವ 'ಧ್ಯೇಯನಿಷ್ಠ ಪತ್ರಿಕೆ'

ಇದಕ್ಕೊಂದು ಕತೆ ಬೇರೆ. ಗುಹೆಯಲ್ಲಿ ಹೋಗಿದ್ದು, ಬೆಳಕು ಕಂಡಿದ್ದು, ಬೆಳಕಿನ ಚಿತ್ರ ತೆಗೆದಾಗ ಹನುಮಂತ ಪ್ರತ್ಯಕ್ಷ ಆಗಿದ್ದು (ಲಾಲ್ ಕೃಷ್ಣ ಅಡ್ವಾಣಿ ಪ್ರತ್ಯಕ್ಷ ಆಗದಿದ್ದುದು ಆಶ್ಚರ್ಯ) ಚಿತ್ರ ತೆಗೆದವರ ತಲೆ ತಿರುಗಿ ಬಿದ್ದದ್ದು, ಆತನ ಕಣ್ಣೇ ಕುರುಡಾದದ್ದು (ದೇವರನ್ನು ನೋಡಿದ ತಪ್ಪಿಗೆ ಕಣ್ಣು ಕುರುಡಾಯ್ತಂತೆ! ಪುರಾಣದಲ್ಲಿ ಎಲ್ಲೂ ಇಂತಹ ಕಥೆ ಇಲ್ಲ) ಹೀಗೆ ಸುಳ್ಳಿನ ಒಂದು ಕಂತೆಯನ್ನು ನಿಜ ಸಂಗತಿ ಎಂದು ಪತ್ರಿಕೆಯ ಮುಖಪುಟದಲ್ಲಿ ಪ್ರಕಟಿಸಲಾಗಿದೆ.

ಮುಂದುಗಡೆ ಬೆಳಕು ಪ್ರಜ್ವಲ ಆಗಿದ್ದಾಗ ಫೋಟೋ ತೆಗೆಯಲು ಬರುವುದಿಲ್ಲ ಎಂಬುದಾದರೂ ಮಾನ್ಯ ಸಂಪಾದಕರಿಗೆ ಅರ್ಥವಾಗಬಹುದಾಗಿತ್ತು. ಆದರೆ ಜನರನ್ನು ಮೋಸಗೊಳಿಸುವ ಹಂತದಲ್ಲಿ ಅದು ನೆನಪಾಗಿರಲಿಕ್ಕಿಲ್ಲ. ಪಾಪ!

"ಯುಗಧರ್ಮಕ್ಕೆ ಅನುಗುಣವಾಗಿ ಈಗ ಹನುಮಂತ ಹೀಗಾಗಿದ್ದಾನೆ. ಆದರೆ ತ್ರೇತಾಯುಗದಲ್ಲಿ ಆತ ಈಗಿನ ತನ್ನ ಆಕೃತಿಗಿಂತ 20 ಪಟ್ಟು ಬೃಹತ್ ಆಗಿದ್ದ" ಎಂದು ಬರೆದಿದ್ದಾರೆ. ಈ ಎಲ್ಲಾ ಮಾಹಿತಿ ಕೊಟ್ಟವರು ಆಧ್ಯಾತ್ಮಿಕವಾಗಿ ಬಹಳ ಸಾಧನೆ ಮಾಡಿರುವ ಓರ್ವ ಸಾಧಕರು" ಎಂದಿದೆ. ಸಾಧಕ ಎಂದರೆ ಹುಚ್ಚ ಎಂದು ಅರ್ಥ ಇರಲಿಕ್ಕಿಲ್ಲ ಅಲ್ಲವೇ?

'ಧ್ಯೇಯನಿಷ್ಠ ಪತ್ರಕರ್ತ' ದಂತಾ ಪತ್ರಿಕೆಯ ಪರಂಪರೆಯೇ ನಮ್ಮಲ್ಲಿದೆ. ಇವರ ಹಿರಿಯಣ್ಣನಂತಿದ್ದ 'ತರಂಗ' ಕೂಡ ಇಂತಹ ವರದಿ ನೀಡುವುದರಲ್ಲಿ ಎತ್ತಿದ ಕೈ. ಜಿಗಳ್ಳಿಯಲ್ಲಿ ದೀಪ ಹತ್ತಾರು ವರ್ಷಗಳಿಂದ ಎಣ್ಣೆ ಇಲ್ಲದೆ ಉರಿಯುತ್ತಿದೆಯೆಂದೋ, ದೆವ್ವದ ಫೋಟೋ ತೆಗೆದಿದ್ದೇವೆ ಎಂದು, ದೆವ್ವದ ಜೊತೆ ಮಾತಾಡಿದ್ದೇವೆಂದು ಸುಳ್ಳು ಚಿತ್ರ ಹಾಕಿ ಜನರನ್ನು ನಂಬಿಸಿ ಮೂರ್ಖರನ್ನಾಗಿಸುವುದು, ಪ್ರಳಯ ಆಗುತ್ತದೆಂದು ಪತ್ರಿಕೆಯನ್ನು ಹೆಚ್ಚು ಪ್ರತಿಯನ್ನು ಪ್ರಿಂಟ್ ಮಾಡಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಇವರಿಗೆಲ್ಲ ಚಟವಾಗಿ ಹೋಗಿದೆ.

ಜನರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದನ್ನು ಬಿಟ್ಟು ಅವರು ಮೂಢನಂಬಿಕೆ, ಕಂದಾಚಾರ ತುಂಬುವುದು, ಸಂವಿಧಾನ ವಿರೋಧಿ ಕೃತ್ಯವಲ್ಲವೇ? ಇಂಥವರು ಬಯಸುವ ಸಂವಿಧಾನ ಹೇಗಿರಬಹುದು ಯೋಚಿಸಿ

- ವಿಠ್ಠಲ ಭಂಡಾರಿ

ಕನಿಷ್ಠ ಕೂಲಿ ಸಿಗದ ಹೆಂಚಿನ ಕಾರ್ಮಿಕರು

ಹಲವು ಏರಿಳಿತಗಳನ್ನು ಕಂಡ ಹೆಂಚಿನ ಕೈಗಾರಿಕೆಗಳಲ್ಲಿ ಕೆಲಸಗಾರರಿಗೆ ಸರಕಾರದ ಕಾನೂನಿನಂತೆ ಕನಿಷ್ಠ ಕೂಲಿಯ ಜಾರಿಯಿಲ್ಲ. ಆದಕ್ಕಾಗಿ ಮಾಲಿಕರ ಅಡ್ಡವಾದಗಳು. ಹೋರಾಟದಿಂದಗಳಿಸಿದ ಈ ಹಕ್ಕನ್ನು ಬಿಡಲು ಕಾರ್ಮಿಕರೂ ತಯಾರಿಲ್ಲ. ಹೀಗಾಗಿ ಕರಾವಳಿ ತೀರದುದ್ದಕ್ಕೂ ಹೋರಾಟದ ಅಲೆಗಳು.

ಕರಾವಳಿ ಕರ್ನಾಟಕದಲ್ಲಿ ಶತಮಾನಗಳ ಇತಿಹಾಸವಿರುವ ಹಂಚು ಕೈಗಾರಿಕೆಯಲ್ಲಿ ದುಡಿಯುತ್ತಿರುವ ಸಾವಿರಗಟ್ಟಲೆ ಕಾರ್ಮಿಕರು ಇಂದು ಕ್ರೂರ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಹಂಚಿನ ಮಾರಾಟ ಬೆಲೆಗಳಲ್ಲಿ ಮಾಲಿಕರು ತಮ್ಮ ಮನಬಂದಂತೆ ಏರಿಳಿತ ಮಾಡಿ, ತಮ್ಮೊಳಗೆ ಕಟು ಸ್ಪರ್ಧೆಮಾಡಿ, ವ್ಯಾಪಾರದಲ್ಲಿ ನಷ್ಟ ತೋರಿಸುತ್ತಾರೆ. ಈ ನಷ್ಟವನ್ನು ಕಡಿಮೆ ಕೂಲಿಯ ಮೂಲಕ ಮತ್ತೇ ಹೆಚ್ಚು ಶ್ರಮಭಾರದ ಮೂಲಕ ಕಾರ್ಮಿಕರ ಮೇಲೆ ಹೇರುತ್ತಿದೆ. ಇದರಿಂದಾಗಿ ಹಂಚು ಕಾರ್ಮಿಕರು ತೀವ್ರ ಶೋಷಣೆಯನ್ನು ದಬ್ಬಾಳಿಕೆಗಳನ್ನು ಅನುಭವಿಸುವಂತಾಗಿದೆ.

ಇಡೀ ಕೈಗಾರಿಕೆಗೆ ಸಮಾನರೂಪದ ಕನಿಷ್ಠ ಕೂಲಿ ಈತನಕ ಜಾರಿಯಾಗದಿರುವುದರಿಂದ ಕರಾವಳಿಯ ಮೂರು ಜಿಲ್ಲೆಗಳ ಕಾರ್ಮಿಕರ ವೇತನಗಳಲ್ಲಿ ಗಣನೀಯ ಪ್ರಮಾಣದ ಅಂತರಗಳಿವೆ. ಈ ರೀತಿಯ ತಾರತಮ್ಯಗಳಿಂದಾಗಿಯೇ ಕಡಿಮೆ ಕೂಲಿಗೆ ದುಡಿಸುವ ಮಾಲಿಕರು ಕಡಿಮೆ ಬೆಲೆಗೆ ತಮ್ಮ ಉತ್ಪನ್ನವನ್ನು ಮಾರಾಟ ಮಾಡಿ ಇತರ ಮಾಲಿಕರ ಮಾರುಕಟ್ಟೆಯನ್ನು ಆಕ್ರಮಿಸುತ್ತಾರೆ. ಇದರಲ್ಲಿ ಅಂತಿಮವಾಗಿ ಕಷ್ಟ-ನಷ್ಟಕ್ಕೆ ಒಳಗಾಗುವವರು ಕಾರ್ಮಿಕರು, ಹೀಗಾಗಿ ಇಡೀ ಕೈಗಾರಿಕೆಗೆ ಅನ್ವಯವಾಗುವಂತೆ ಸರಕಾರವು ಕನಿಷ್ಠ ಕೂಲಿ ನಿಗದಿ ಮಾಡಿ ಜಾರಿಗೊಳಿಸಬೇಕೆಂದು ಒತ್ತಾಯಿಸಿ ನಾಲ್ಕು ವರ್ಷಗಳ ಹಿಂದೆಯೇ ಹಂಚುಕಾರ್ಮಿಕರು ಹೋರಾಟ ನಡೆಸಿದ್ದರು. ಪೂರ್ತಿ ಶಾಂತಿಯುತವಾಗಿದ್ದ ಈ ಹೋರಾಟವನ್ನು ದಮನಿಸಲು ರಾಜ್ಯ ಸರಕಾರವು ಅಂದು ಮಂಗಳೂರಿನ 218 ಮಂದಿ ಕಾರ್ಮಿಕರ ಮೇಲೆ ದಾವೆ ಹೂಡಿ, ಅವರ ಪೈಕಿ 15 ಮಂದಿಯನ್ನು ಬಂಧನದಲ್ಲಿ ಇಟ್ಟಿತ್ತು. ಇಂತಹ ಧೀರ ಹೋರಾಟಗಳ ಫಲವಾಗಿ ರಾಜ್ಯ ಸರಕಾರವು ದಿನಾಂಕ 8-1-1998ರಂದು ಹಂಚು ಕೈಗಾರಿಕೆಯ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿಗದಿ ಮಾಡಿ ಅಂತಿಮ ಪ್ರಕಟಣೆ ನೀಡಿತ್ತು.

ಆದರೆ ಕರ್ನಾಟಕ ರಾಜ್ಯ ಗೆಜೆಟ್ ಪತ್ರದಲ್ಲಿ ಅದು ಪ್ರಕಟವಾಗಬೇಕಾದರೆ ನಮ್ಮ ಸಂಘಗಳು ಹೈಕೋರ್ಟ್‌ನಿಂದ ಆದೇಶ ಕಳುಹಿಸಬೇಕಾಯಿತು. ಅಂತಿಮವಾಗಿ 2000ನೇ ಇಸವಿ ಡಿಸೆಂಬರ್ 31ರಂದು ಪ್ರಕಟಣೆಯು ರಾಜ್ಯ ಪತ್ರದಲ್ಲಿ ಪ್ರಕಟವಾಯಿತು.

ಹೀಗೆ ಸುಧೀರ್ಘ ಹೋರಾಟದ ಫಲವಾಗಿ ಬಂದಿರುವ ಕನಿಷ್ಠ ಕೂಲಿ ಪ್ರಕಟಣೆಯನ್ನು ಜಾರಿ ಮಾಡಲು ನಿರಾಕರಿಸುತ್ತಿರುವ ಹಂಚು ಕಾರ್ಖಾನೆಗಳ ಮಾಲಿಕರ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ದ.ಕನ್ನಡ ಉಡುಪಿ ಉತ್ತರ ಕನ್ನಡ ಈ ಮೂರು ಜಿಲ್ಲೆಗಳಲ್ಲಿ ಹಂಚು ಕಾರ್ಮಿಕರು ಇದೇ ಫೆಬ್ರವರಿ 5 ರಿಂದ ಅನಿರ್ದಿಷ್ಟಾವಧಿಯ ಮುಷ್ಕರ ಆರಂಭಿಸಿರುತ್ತಾರೆ.

ಹಂಚು ಕಾರ್ಖಾನೆಗಳ ಕೆಲಸದ ವಿಧಾನದಲ್ಲಿ ಒಂದು "ಟಾಸ್ಕ್" ಎಂಬುವುದು 8 ಗಂಟೆಗಳ ಕೆಲಸಕ್ಕೆ ಸಮಾನ ಎಂಬುವುದು ಆರಂಭದಿದಲೂ ಕಾರ್ಮಿಕರೂ ಮಾಲಿಕರೂ ಒಪ್ಪಿಕೊಂಡು ಬಂದ ಪದ್ಧತಿ. ಹಿಂದೆ ಕೂಡಾ ಕನಿಷ್ಠ ಕೂಲಿ ಪ್ರಕಟಣೆಗಳಲ್ಲಿ ಈ ರೀತಿಯ ಉಲ್ಲೇಖಗಳಿದ್ದುವು. ಒಂದು ಟಾಸ್ಕ್ ಅಂದರೆ 8 ಗಂಟೆಯ ಕೆಲಸ ಅಂತ ಒಪ್ಪಿ ಈ ಹಿಂದೆ 2-3 ಬಾರಿ ಕನಿಷ್ಟ ಕೂಲಿಯನ್ನು ಜ್ಯಾರಿಮಾಡಿದ್ದು, ಈಗಲೂ ಪುನಃ ಮಾಲಿಕರು 8 ಗಂಟೆಯ ಬಗ್ಗೆ ವಿವಾದ ಸೃಷ್ಟಿಮಾಡುತ್ತಿದ್ದಾರೆ. ಅದೇ ಪ್ರಶ್ನೆಯನ್ನು ಎತ್ತುವುದು ಕೈಗಾರಿಕೆ ಮತ್ತು ಕಾರ್ಮಿಕರ ಹಿತ ದೃಷ್ಟಿಯಿಂದ ಸಮಂಜಸವಲ್ಲ ಕೈಗಾರಿಕೆಯಲ್ಲಿ ಸಮಸ್ಯೆಗಳಿವೆ ಎಂಬ ಕಾರಣ ನೀಡಿ ಕಾರ್ಮಿಕರಿಗೆ ನ್ಯಾಯೋಚಿತವಾಗಿ ಸಲ್ಲತಕ್ಕ ಕನಿಷ್ಟ ಕೂಲಿಯನ್ನು ಮಾಲಿಕರು ನಿರಾಕರಿಸಲು ಸಾಧ್ಯವಿಲ್ಲ.

ಕನಿಷ್ಟ ಕೂಲಿಯ ಅಧಿಸೂಚನೆ 4ನೇ ಪುಟದಲ್ಲಿ ಸ್ಪಷ್ಟಪಡಿಸಿದಂತೆ ಈ ಅನುಸೂಚಿಯಲ್ಲಿ ಸೂಚಿಸಿದ ದರಗಳು ರಾಜ್ಯ ಸರಾಸರಿ ಗ್ರಾಹಕ ಬೆಲೆ ಸೂಚ್ಯಾಂಕ (1960-100) 1836 ಅಂಶಗಳಿಗೆ ಲಭಿಸುವ ತುಟ್ಟಿಭತ್ತೆ ದರಗಳನ್ನು ಒಳಗೊಂಡಿರುತ್ತದೆ. ರಾಜ್ಯ ಸರಾಸರಿ ಆಧಾರದ ಮೇಲೆ ಗ್ರಾಹಕ ಬೆಲೆ ಸೂಚ್ಯಾಂಕದಲ್ಲಿ 1836 ಅಂಶಗಳಿಗೆ ಹೆಚ್ಚಾಗಿರುವ ಪ್ರತಿ ಅಂಶಕ್ಕೆ ದಿನ ಒಂದಕ್ಕೆ 3 ಪೈಸೆಯಂತೆ ಎಲ್ಲಾ ದರ್ಜೆ ಕಾರ್ಮಿಕರಿಗೆ ತುಟ್ಟಿಭತ್ತೆ ಕೊಡಬೇಕಾಗಿದೆ. ಅದುದರಿಂದ 1836 ಅಂಶಗಳು ದಿನಾಂಕ 1-2-1998ರಂದು ಚಾಲ್ತಿಯಲ್ಲಿದ್ದ ಅಂಶಗಳಾಗಿವೆ.

ಕನಿಷ್ಟ ಕೂಲಿ ಮತ್ತು ಏರಿಳಿತ ತುಟ್ಟಿಭತ್ತೆ ಸೇರಿ ಕುಶಲಕಾರ್ಮಿಕರಿಗೆ ರೂ. 83-21, ಅರೆ ಕುಶಲ ಕಾರ್ಮಿಕರಿಗೆ ರೂ. 80-76 ಮತ್ತು ಕುಶಲರಲ್ಲದವರಿಗೆ ರೂ. 76-96 ಈಗ ಕೊಡಬೇಕಾಗಿದೆ. ಈ ರೀತಿ ಬಹಳ ಕಡಿಮೆ ಸರಕಾರ ನಿಗದಿಮಾಡಿದ ಕನಿಷ್ಟ ಕೂಲಿಯನ್ನು ಇವತ್ತಿನ ಪರಿಸ್ಥಿತಿಯಲ್ಲಿ ಮಾಲಿಕರು ಕೊಡಲು ಸಾಧ್ಯವಾಗದು ಅಂತ ಹೇಳುವುದು ಹಾಗೂ ಹೊಸ ವಿವಾದಗಳನ್ನು ಸೃಷ್ಟಿಮಾಡುವುದು ಕಾರ್ಮಿಕ ವಿರೋಧಿ ನೀತಿಯಾಗಿದ್ದು ಕ್ರೂರ ಶೋಷಣೆಯನ್ನು ಮುಂದುವರಿಸುವ ತಂತ್ರವಾಗಿದೆ ಅಂತ ಹೇಳಬೇಕಾಗಿದೆ.

ಸಮರಧೀರ ಸಂಘಟನೆಯಾದ ಸಿಐಟಿಯುವಿನ ಸಂಘಗಳ ಸದಸ್ಯರಾಗಿರುವ ಹಂಚು ಕಾರ್ಮಿಕರು 3 ಜಿಲ್ಲೆಗಳಲ್ಲಿ ಹೋರಾಟವನ್ನು ಯಶಸ್ವಿಯಾಗಿ ನಡೆಯಿಸಿದ್ದಾರೆ ಹಾಗೂ ಕನಿಷ್ಟ ಕೂಲಿಯನ್ನು ಪಡೆಯಲಿದ್ದಾರೆ ಎಂಬ ವಿಶ್ವಾಸವಿದೆ.

- ಕೆ. ಶಂಕರ್



ಅನುಭವಿಸಿದ ಅಮಾನುಷ ಕಿರುಕುಳ - ಹಲವು ಷಡ್ಯಂತ್ರ

"ನಾನು ಕಮ್ಯುನಿಸ್ಟ್ ಅಲ್ಲ.... ನಾನೆಂದೂ ಯಾವುದೇ ರಾಜಕೀಯ ಪಕ್ಷದ ಸದಸ್ಯತ್ವ ಪಡೆದಿಲ್ಲ... ನಾನು ಯಾವುದೇ ಸಂಘ ಸಂಸ್ಥೆಯಲ್ಲಿ ಕೆಲಸ ಮಾಡಿಲ್ಲ ಮತ್ತು ಮಾಡುತ್ತಿಲ್ಲ. ನಾನು ಶಾಂತಿವಾದಿ......'ರಾಷ್ಟ್ರೀಯತೆಯನ್ನು ಬದಲಾಯಿಸುವ ಅಗತ್ಯ ನನಗೆ ಕಂಡು ಬರಲಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಾನು ಇಡೀ ಪ್ರಪಂಚದ ನಾಗರಿಕ' ಅಮೇರಿಕನ್ ಸರ್ಕಾರ ನಾನಾ ವಿಧದಲ್ಲಿ ನೀಡಿದ ಕಿರುಕುಳಗಳಿಗೆ ಚಾಪ್ಲಿನ್ ನೀಡಿದ ಉತ್ತರವಿದು



ಇತಿಹಾಸದ ಪುಟಗಳಿಂದ

ಚಾರ್ಲಿ ಚಾಪ್ಲಿನ್
ಚಾಪ್ಲಿನ್ ಮತ್ತು ಕಮ್ಯುನಿಸಂ

ಅಮೇರಿಕಾದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜಸ್ಟೀಸ್ ಮರ್ಫೀ ತನ್ನ ಪ್ರಿಯಮಿತ್ರ ಚಾಪ್ಲಿನನ್ನು ಪ್ರತ್ಯೇಕವಾಗಿ ಕಂಡು ವಸ್ತುಸ್ಥಿತಿ ವಿವರಿಸಿದ. ಜೋನ್ನಾ ಬ್ಯಾರಿ ತನ್ನ ಗರ್ಭದಲ್ಲಿರುವ ಭ್ರೂಣವನ್ನು ನೆಪವಾಗಿರಿಸಿಕೊಂಡು ಕೋರ್ಟಿನಲ್ಲಿ ಖಟ್ಲೆ ಹೂಡಿದ್ದರೆ, ಚಾಪ್ಲಿನ್ ಕಂಡರಾಗದ ರಾಜಕಾರಣಿಗಳು, ಪತ್ರಕರ್ತರು, ಜೋನ್ನಾಳನ್ನೇ ಒಂದು ಅಸ್ತ್ರವನ್ನಾಗಿ ಪ್ರಯೋಗಿಸುತ್ತಿರುವರೆಂಬ ಸಂಗತಿ ಕುರಿತು ಮರ್ಫಿಯವರು ಕೂಲಂಕುಷ ವಿವರ ನೀಡಿದರು. ಆಕೆಯೊಂದಿಗೆ ಅವರೆಲ್ಲ ಸೇರಿ ಚಾಪ್ಲಿನ್ ಮೇಲೆ ಪಿತೃತ್ವದ ಖಟ್ಲೆ ಹೂಡಲಿರುವುದರ ಬಗ್ಗೆ ಚಿಕ್ಕ ಮಾಹಿತಿ ನೀಡುತ್ತಲೇ ನ್ಯಾಯಮೂರ್ತಿಗಳು ಖಟ್ಲೆ ವಿರುದ್ಧ ಹೋರಾಡುವುದಕ್ಕೆ ಚಿಕ್ಕ ನ್ಯಾಯವಾದಿಯನ್ನು ನೇಮಿಸಿ ಕೊಂಡರೆ ಸಾಕೆಂದು ಸಲಹೆ ನೀಡಿದರು. ಅವರ ಅನುಕಂಪದ ಮಾತುಗಳಿಂದ, ಸಲಹೆಯಿಂದ ಚಾಪ್ಲಿನ್ ಎಷ್ಟೋ ಧೈರ್ಯ ತಂದುಕೊಂಡ. ರಾಜಕಾರಣಿಗಳು, ಪೀತ ಪತ್ರಕರ್ತರೊಂದಿಗೆ ಷಾಮೀಲಾಗಿ ಚಾಪ್ಲಿನ್‌ನನ್ನು ಖಳನಾಯಕನ ಪಟ್ಟಿಯಲ್ಲಿ ಸೇರಿಸುವಲ್ಲಿ ಯಶಸ್ವಿಯಾಗಿಬಿಟ್ಟಿದ್ದರು.

ಆದರೂ ಎದೆಗುಂದದೆ ಚಾಪ್ಲಿನ್ ತನ್ನ ಪರವಾಗಿ ವಾದಿಸಲು ಕಿರಿಯ ವಯಸ್ಸಿನ, ಚುರುಕು ಬುದ್ಧಿಯ ಪ್ರತಿಭಾವಂತ ನ್ಯಾಯವಾದಿ ಲಾಯ್ಡ್ ರೈಟ್‌ನನ್ನು ನೇಮಿಸಿಕೊಂಡನು. ಸರಕಾರ ಆಸಕ್ತಿ ವಹಿಸಿಕೊಡದೆಂದು ವಾದಿಸಿದ್ದು, ಎರಡನೇ ಕೆಲಸವೆಂದರೆ ಬ್ಯಾರಿಯ ನ್ಯಾಯವಾದಿಯನ್ನು ಸಂಪರ್ಕಿಸಿ ತಾಯಿ ಹೊಟ್ಟೆಯಲ್ಲಿರುವ ಮಗುವಿನ ರಕ್ತಪರೀಕ್ಷೆ ಮಾಡಿದರೆ ಚಾಪ್ಲಿನ್ ನಿರ್ದೋಷಿಯೆಂಬುದು ಸಾಬೀತಾಗುತ್ತದೆ ಎಂದು ಚರ್ಚಿಸಿ ರಾಜಿಸೂತ್ರ ಕುದುರಿಸಿದ್ದು. ಈ ರಾಜಿ ಸೂತ್ರದಂತೆ ಚಾಪ್ಲಿನ್ ಬ್ಯಾರಿಗೆ ಇಪ್ಪತ್ತೈದು ಸಹಸ್ರ ಡಾಲರ್ ಕೊಡುವುದು. ಆಕೆ ಅದಕ್ಕೆ ಒಪ್ಪಿ ರಕ್ತ ಪರೀಕ್ಷೆಗೆ ಸಮ್ಮತಿಸುವುದು.. ಆದರೆ ಅದೇ ರಕ್ತ ಗುಂಪಿನವರು ತನ್ನ ಹಾಗೆ ಅನೇಕರು ಇರುತ್ತಾರಲ್ಲ. ಆ ರಕ್ತದ ಗುಂಪು ಆಪಾದಿತ ತಂದೆಯದೂ ಆಗಿರಬಹುದು, ಅಥವಾ ತಾಯಿಯದೂ ಆಗಿರಬಹುದು... ಅಥವಾ ಇನ್ನಾರದೋ ಆಗಿರಬಹುದು; ಆದರೆ ಇಷ್ಟು ಮಾತ್ರದಿಂದ ನ್ಯಾಯಾಲಯ ತೃಪ್ತವಾಗಲಾರದು.

ಬ್ಯಾರಿಯ ಗರ್ಭದಿಂದ ಮಗು ಹೊರಬಂದ ನಂತರ ನ್ಯಾಯಮೂರ್ತಿಗಳ ಸಂಘ ನ್ಯಾಯ ವಿಚಾರಣೆಯನ್ನು ಬೇರೆ ರೀತಿಯಲ್ಲಿ ಆರಂಭಿಸಿತು. ಕೆಲವು ಸ್ನೇಹಿತರು ಪ್ರಸಿದ್ಧ ಕ್ರಿಮಿನಲ್ ಲಾಯರ್ ಗಿಸ್ಲೆರ್‌ನ ನೆರವು ಪಡೆಯುವಂತೆ ಚಾಪ್ಲಿನ್‌ಗೆ ಸಲಹೆ ನೀಡಿದರು. ಅದರಂತೆ ಲಾಯ್ಡ್ ರೈಟ್ ಗಿಸ್ಲೆರನನ್ನು ಭೇಟಿ ಮಾಡಿ ಚರ್ಚಿಸಿದ. ಸರ್ಕಾರದ ವಿರುದ್ಧ ಒಂದು ಮನವಿ ಪತ್ರವನ್ನು ಸಿದ್ಧಪಡಿಸಿ ನ್ಯಾಯಾಲಯಕ್ಕೆ ವಿಧಿವತ್ತಾಗಿ ಸಲ್ಲಿಸಿದ. ಆದರೆ ಸರಕಾರ ಚಾಪ್ಲಿನ್ Mann Act ಅನ್ನು ಉಲ್ಲಂಘಿಸಿರುವನೆಂದು ಆರೋಪಿಸಿತು. ಹೆಣ್ಣುಗಳನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸ್ಥಳಾಂತರಿಸಿ ಸೂಳೆಗಾರಿಕೆಗೆ ಪ್ರಚೋದಿಸುವುದನ್ನು ನಿಯಂತ್ರಿಸುವ ಕಾಯಿದೆಯೇ Mann Act ಆಗಿತ್ತು. ಈ ಶಾಸನದ ಪ್ರಕಾರ ಪರಿತ್ಯಕ್ತ ಹೆಂಡತಿಯನ್ನು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಕರೆದೊಯ್ದು ಸಂಭೋಗಿಸಿದರೂ ಅಪರಾಧವೇ! ಇದಕ್ಕೆ ಕನಿಷ್ಟವೆಂದರೆ ಐದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಲಾಗುತ್ತಿತ್ತು. ಇಂಥದೊಂದು ಗುರುತರ ಅಪರಾಧವನ್ನು ಚಾಪ್ಲಿನ್ ಮೇಲೆ ಸರಕಾರ ಹೊರಿಸಿತು. ಇದೊಂದೂ ಅರ್ಥವಾಗದೆ ಚಾಪ್ಲಿನ್ ಕಕ್ಕಾವಿಕ್ಕಿಯಾದ. ಲಾಯ್ಡ್ ಮತ್ತು ಗಿಸ್ಲರ್ ಅವನಿಗೆ ಧೈರ್ಯ ಹೇಳಿದರು.

ಸರಕಾರ ಕೋರ್ಟಿಗೆ ಚಾರ್ಜಶೀಟ್ ಸಲ್ಲಿಸಿತು. ಖಟ್ಲೆ ವಿಚಾರಣೆಯನ್ನು ಕೋರ್ಟ್ ಆರಂಭಿಸಿತು. ದೋಷಾರೋಪಣೆಯನ್ನು ಪ್ರಾಥಮಿಕವಾಗಿ ಕೋರ್ಟ್ ಅಂಗೀಕರಿಸಿತು. ಇದರ ವಿರುದ್ಧ ಚಾಪ್ಲಿನ್ ಹೋರಾಟ ಆರಂಭಿಸಿದ. ಈ ದೋಷಾರೋಪಣೆ ನಿಜವಾದಲ್ಲಿ ಅವನು ಕನಿಷ್ಟವೆಂದರೂ ಇಪ್ಪತ್ತು ವರ್ಷ ಕಾರಾಗೃಹವಾಸ ಅನುಭವಿಸಬೇಕಾಗಿತ್ತು.

ಬ್ಯಾರಿ ಮಗುವಿನ ರಕ್ತಪರೀಕ್ಷೆ ಮಾಡಿದ ನಂತರ ಚಾಪ್ಲಿನ್ ನಿರಪರಾಧಿ ಎಂಬ ಸತ್ಯ ಹೊರಗೆ ಬಿತ್ತು. ಆದರೆ ಸರಕಾರ ಗಾಯಗೊಂಡ ಕಾಡುಮೃಗದಂತೆ ವಿಚಾರಣೆಯನ್ನು ಮುಂದುವರಿಸಿತು. ಗಿಸ್ಲರ್ ಮನೆಯಲ್ಲಿದ್ದಾಗ ಚಾಪ್ಲಿನ್‌ಗೆ ಸ್ಯಾನ್‌ಫ್ರಾನ್ಸಿಸ್ಕೋದ ಕ್ಯಾಥೊಲಿಕ್ ಚರ್ಚ್‌ನ ಫಾದರ್‌ನಿಂದ ಪತ್ರ ಬಂತು. ಜೋನ್ ಬ್ಯಾರಿ ಎಂಬ ಮಹಿಳೆಯನ್ನು ಚಾಪ್ಲಿನ್‌ಗೆ ತೊಂದರೆ ಕೊಡಲಿಕ್ಕೆಂದೇ ಅಮೇರಿಕಾದ ಫ್ಯಾಸಿಸ್ಟ್ ಸಂಸ್ಥೆ ನೇಮಿಸಿರುವುದೆಂದೂ ಅಗತ್ಯಬಿದ್ದರೆ ತಾನು ಕೋರ್ಟಿಗೆ ಬಂದು ಸಾಕ್ಷಾಧಾರ ಸಹಿತ ಹೇಳಿಕೆ ನೀಡುವುದಾಗಿಯೂ ಫಾದರ್ ಅದರಲ್ಲಿ ಉಲ್ಲೇಖಿಸಿದ್ದ. ಚಾಪ್ಲಿನನಕ್ರಿಮಿನಲ್ ಲಾಯರ್ ಗಿಸ್ಲೆರ್ ಇದರಿಂದ ಹೊಸ ಸಮಸ್ಯೆ ಉದ್ಭವಿಸಬಹುದೆಂದು ಆಲೋಚಿಸಿ ಅದನ್ನು ದೂರವಿರಿಸಿದ.

ಅಮೇರಿಕಾ ಸರಕಾರ ಫೆಡರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ (FBI) ಹೊಸ ಹೊಸ ಸಾಕ್ಷ್ಯಾಧಾರಗಳನ್ನು ಕ್ರೋಢೀಕರಿಸುವ ಪ್ರಯತ್ನ ಮಾಡಿದವು. ಚಾಪ್ಲಿನ್ ಮತ್ತು ಆತನ ವಕೀಲರಿಬ್ಬರು ಕೆಲವು ತಿಂಗಳುಗಳ ಕಾಲ ಸರಕಾರ ಹೂಡಿದ್ದ ಖಟ್ಲೆ ವಿರುದ್ಧ ನಿರ್ವಿರಾಮವಾಗಿ ಹೋರಾಡಿದರು. ಅಮೇರಿಕಾದಲ್ಲಿ ತನ್ನ ಘನತೆ ಗೌರವ ಕಾಪಾಡಿಕೊಳ್ಳುವುದಕ್ಕಾಗಿ, ತಾನು ನಿರಪರಾಧಿ ಎಂದು ಸಾಬೀತು ಪಡಿಸುವುದಕ್ಕಾಗಿ ಚಾಪ್ಲಿನ್ ಹಗಲಿರುಳು ಶ್ರಮಿಸದೆ ಇರಲಿಲ್ಲ. ಅದುವರೆಗೆ ವಾಸ್ತವವನ್ನು ತಿರುಚಿ ಬರೆಯುತ್ತಿದ್ದ ಪತ್ರಿಕೆಗಳು ಕ್ರಮೇಣ ಚಾಪ್ಲಿನ್‌ನಿಂದ ದೂರ ಸರಿದವು.

ವಿಚಾರಣೆ ಕೆಲವು ತಿಂಗಳುಗಳ ಕಾಲ ನಡೆಯಿತು. ವಿಚಾರಣೆ ಎಲ್ಲ ಮುಗಿದು ತೀರ್ಪು ಕೊಡುವ ಕೋರ್ಟ್‌ನ ಒಳ ಹೊರಗೆ ನೂರಾರು ಮಂದಿ ಕುತೂಹಲದಿಂದ ಜಮಾಯಿಸಿದರು. ಒಂದು ಕಡೆ ಚಾಪ್ಲಿನ್ ತನ್ನ ವಕೀಲ ಗಿಸ್ಲರ್ ಸಂಗಡ ಕೂತಿದ್ದ. ಕೋರ್ಟ್‌ನ ಗುಮಾಸ್ತ ಟೇಬಲ್ ಮೇಲೆ ಮೂರು ಸಾರಿ ಗುದ್ದಿದ ನಂತರ ನಿಶ್ಶಬ್ದ ಆವರಿಸಿತ್ತು.

ಕೋರ್ಟ್‌ನ ವಕ್ತಾರ ತೀರ್ಪು ಓದಲಾರಂಭಿಸಿದ.

ಚಾರ್ಲಸ್ ಚಾಪ್ಲಿನ್ ಕೇಸ್ 33706 ರ ಕ್ರಿಮಿನಲ್..... ನಿರಪರಾಧಿ..

ಜನಜಂಗುಳಿ 'ಹೊ' ಎಂದು ಹರ್ಷೋದ್ಗಾರ ವ್ಯಕ್ತಪಡಿಸಿತು.

ಚಾರ್ಲಸ್ ಚಾಪ್ಲಿನ್ ಎರಡನೇ ಕೇಸಿನಲ್ಲೂ ನಿರಪರಾಧಿ

ಜನರು 'ಹೊ' ಎಂದು ಹರ್ಷೋದ್ಗಾರ ವ್ಯಕ್ತಪಡಿಸಿದರು.

ನ್ಯಾಯಾಧೀಶರು ಚಾಪ್ಲಿನ್‌ನನ್ನು ಆಪಾದನೆಗಳಿಂದ ಮುಕ್ತಗೊಳಿಸಿ ಅಭಿನಂದಿಸಿದರು. ಗಿಸ್ಲರ್‌ನ ಸಲಹೆಯಂತೆ ಚಾಪ್ಲಿನ್ ನ್ಯಾಯಮೂರ್ತಿಗಳ ಕೈಕುಲುಕಿ ಕೃತಜ್ಞತೆಯನ್ನು ಅರ್ಪಿಸಿದ.

ಭಾವೋದ್ವಿಗ್ನಗೊಂಡ ಚಾಪ್ಲಿನನ್ನು ಗಿಸ್ಲರ್ ಸಂತೈಸಿದ. ಚಾಪ್ಲಿನ್ ಕಮ್ಯುನಿಸ್ಟ್‌ನೆಂದು ಸಂದೇಹಿಸಿ ಸರಕಾರ ಕೊಡಬಾರದ ಕಷ್ಟಕೊಟ್ಟು ಸೋಲನ್ನು ಒಪ್ಪಿಕೊಂಡಿತ್ತು. ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಲೆಂದೇ ಚಿತ್ರಗಳನ್ನು ನಿರ್ಮಿಸಿದ, ತಾತ್ವಿಕವಾಗಿ ರಾಜಕೀಯ ವ್ಯವಸ್ಥೆಯನ್ನು ಎದುರು ಹಾಕಿಕೊಂಡು ಹೋರಾಡಿ ಗೆದ್ದ ಚಾಪ್ಲಿನ್ ಅಮೇರಿಕಾ ಚರಿತ್ರೆಯಲ್ಲಿ ತನ್ನದೇ ಆದ ಪುಟಗಳನ್ನು ಬರೆದ ಮಹಾನ್ ನಟ.... ಆತನಿಗೆ ಸರಿಸಾಟಿ ಯಾರೂ ಇರಲಾರರು..

ಚಾಪ್ಲಿನ್ ಮನ್ಸ್ಯೂವರ್ಡ್ಯೂ ಚಿತ್ರದ ಸಂಕಲನ ಕಾರ್ಯವನ್ನು ಮಾಡುತ್ತಿದ್ದಾಗ ಯುನೈಟೆಡ್ ಸ್ಟೇಟ್ಸ್ ಮಾರ್ಷಲ್ ಆಫೀಸಿನಿಂದ ಒಂದು ನೋಟೀಸ್ ಬಂತು. ಅಂಥ ನೋಟೀಸು ಬಂದದ್ದು ಚಾಪ್ಲಿನ್ ಸೇರಿದಂತೆ ಹತ್ತೊಂಬತ್ತು ಮಂದಿಗೆ. ಕೂಡಲೇ ವಾಷಿಂಗ್‌ಟನ್‌ನಲ್ಲಿರುವ ಅಮೆರಿಕಾ ವ್ಯತಿರಿಕ್ತ ಕಾರ್ಯಕಲಾಪದ ಸಂಘ(Un American Activities Committee) ದಲ್ಲಿ ಹಾಜರಿರಬೇಕೆಂದು ಅದರಲ್ಲಿ ಸೂಚಿಸಲಾಗಿತ್ತು. ಕಾರಣ ಚಾಪ್ಲಿನ್ ಕಳೆದ ನಲವತ್ತು ವರ್ಷಗಳಿಂದ ಅಮೆರಿಕಾದಲ್ಲಿದ್ದರೂ ಅಮೇರಿಕಾದ ಪೌರತ್ವವನ್ನು ಪಡೆದಿರಲಿಲ್ಲ. ಅವನು ಬ್ರಿಟನ್ ಪೌರತ್ವದಲ್ಲಿಯೇ ಮುಂದುವರಿದಿದ್ದ... ಈ ವಿಚಾರಣೆಯ ಮುಖ್ಯ ಉದ್ದೇಶ ಅವನನ್ನು ಒಂದು ವರ್ಷ ಕಾರಾಗೃಹ ಶಿಕ್ಷೆಗೆ ಒಳಪಡಿಸುವುದಾಗಿತ್ತು. ಅವನು ಕೆಲಸ ಬದುಕು ಬಿಟ್ಟು ವಾಷಿಂಗ್‌ಟನ್‌ಗೆ ಹೋಗುವುದು, ಮತ್ತೆ ಅವರು ವಿಚಾರಣೆಯನ್ನು ಹತ್ತು ದಿನಗಳಿಗೆ ಮುಂದೂಡುವುದು,ಹೀಗೆ ಎರಡು ಮೂರು ಸಾರಿ ಆಯಿತು. ಕಮಿಟಿಯ ಈ ಕಿರುಕುಳದಿಂದ ಬೇಸತ್ತ ಚಾಪ್ಲಿನ್ ಅವರಿಗೆ.....

"ನಾನು ಕಮ್ಯುನಿಸ್ಟ್ ಅಲ್ಲ.... ನಾನೆಂದೂ ಯಾವುದೇ ರಾಜಕೀಯ ಪಕ್ಷದ ಸದಸ್ಯತ್ವ ಪಡೆದಿಲ್ಲ... ಯಾವುದೇ ಸಂಘ ಸಂಸ್ಥೆಯಲ್ಲಿ ಕೆಲಸ ಮಾಡಿಲ್ಲ ಮತ್ತು ಮಾಡುತ್ತಿಲ್ಲ. ನಾನು ಶಾಂತಿವಾದಿ... ನನ್ನಿಂದ ನೀವು ಹೇಳಿಕೆ ಬಯಸುತ್ತಿರುವುದು ಇದೇ ಎಂದು ಭಾವಿಸುತ್ತಿರುವೆ. ನಾನು ಎಂದು ನಿಮ್ಮೆದುರು ಹಾಜರಿರಬೇಕೆಂದು ದಯವಿಟ್ಟು ನಿರ್ದಿಷ್ಟವಾಗಿ ತಿಳಿಸಬೇಕೆಂದು ಕೋರುತ್ತಿರುವೆ" ಎಂದು ಮುಂತಾಗಿ ಸವಿವರವಾಗಿ ಬರೆದ.

ಕೆಲವು ದಿನಗಳ ನಂತರ ಯು.ಎ.ಎ.ಸಿ. ಕಮಿಟಿಯಿಂದ ಬಂದ ಪತ್ರದಲ್ಲಿ ಕಮಿಟಿ ಎದುರು ಹಾಜರಾಗಬೇಕಾದ ಅಗತ್ಯವಿಲ್ಲವೆಂದು ತಿಳಿಸಲಾಯಿತು. ಆದರಿಂದ ಚಾಪ್ಲಿನ್ ಸಮಾಧಾನದ ಉಸಿರು ಬಿಟ್ಟ.

ಮನ್ಸ್ಯೂವರ್ಡ್ಯೂ ಚಿತ್ರ ಬಿಡುಗಡೆಗೊಂಡ ಕೆಲವು ದಿನಗಳ ನಂತರ ಚಾಪ್ಲಿನ್ ಪತ್ರಕರ್ತರ ಸಮಾರಂಭದಲ್ಲಿ ಪಾಲ್ಗೊಳ್ಳಬೇಕಾಯಿತು. ತನ್ನ ಇಂದಿನ ಮತ್ತು ಮುಂದಿನ ಚಿತ್ರಗಳ ಬಗ್ಗೆ ಪತ್ರಕರ್ತರು ಪ್ರಶ್ನೆಗಳನ್ನು ಕೇಳಬಹುದೆಂದು ಚಾಪ್ಲಿನ್ ಊಹಿಸಿದ. ಅದನ್ನು ಸೂಚ್ಯವಾಗಿ ಪ್ರಸ್ತಾಪಿಸಿದ ಆದರೆ ರಾಜಕೀಯ ಪಕ್ಷಗಳ ವಕ್ತಾರರೆಂತಿದ್ದ ಪತ್ರಕರ್ತರಿಗೆ ಅವನ ಚಿತ್ರಗಳ ಗೊಡವೆ ಬೇಕಾಗಿರಲಿಲ್ಲ, ಅವರಿಗೆ ಬೇಕಾಗಿದ್ದುದು ಅವನನ್ನು ಮತ್ತಷ್ಟು ಸಂದಿಗ್ಧತೆಗೆ ಸಿಲುಕಿಸುವುದು. ಚಾಪ್ಲಿನ್ ಎದುರುಗಡೆ ಕೂತಿದ್ದ ಪತ್ರಕರ್ತೆ.

'ನೀವು ಕಮ್ಯುನಿಸ್ಟರೇನು?' ಎಂದು ಕೇಳಿಯೇಬಿಟ್ಟಳು.

'ಅಲ್ಲ' ಎಂದೊಂದೇ ಮಾತಿನಲ್ಲಿ ಉತ್ತರಿಸಿದ ಚಾಪ್ಲಿನ್. 'ಮುಂದಿನ ಪ್ರಶ್ನೆ ಕೇಳಿ' ಎಂದ.

ಪತ್ರಕರ್ತರಲ್ಲಿ ಗುಜುಗುಜು ಆರಂಭವಾಯಿತು.

'ಅಮೇರಿಕಾದ ಪೌರತ್ವವನ್ನು ಏಕೆ ತೆಗೆದುಕೊಂಡಿಲ್ಲ' ಎಂದು ಮತ್ತೊಬ್ಬ ಮುಖಕ್ಕೆ ರಾಚಿದಂತೆ ಕೇಳಿಯೇಬಿಟ್ಟ.

'ರಾಷ್ಟ್ರೀಯತೆಯನ್ನು ಬದಲಾಯಿಸುವ ಅಗತ್ಯ ನನಗೆ ಕಂಡು ಬರಲಿಲ್ಲ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಾನು ಇಡೀ ಪ್ರಪಂಚದ ನಾಗರಿಕ' ಎಂದು ಚಾಪ್ಲಿನ್ ಅರ್ಥಪೂರ್ಣವಾಗಿ ಸಮಾಧಾನ ನೀಡಿದ.

ಅಷ್ಟರಲ್ಲಿ ಇಬ್ಬರು ಮುವ್ವರು ಪತ್ರಕರ್ತರು ಒಟ್ಟಿಗೆ ಪ್ರಶ್ನೆ ಕೇಳಲು ಎದ್ದು ನಿಂತರು. ಅವರ ಪೈಕಿ ಒಬ್ಬ ಗಟ್ಟಿಯಾಗಿ 'ಆದರೆ ನೀವು ಸಾಕಷ್ಟು ಸಂಪಾದಿಸುತ್ತಿರೋದು ಅಮೇರಿಕಾದಲ್ಲಿ ತಾನೆ!' ಎಂದು ಕೇಳಿದ.

'ಹೌದು' ಚಾಪ್ಲಿನ್ ಮುಗುಳ್ನಗುತ್ತ ಹೇಳಿದ. 'ಇದರಲ್ಲಿ ಮುಚ್ಚು ಮರೆ ಏನೂ ಇಲ್ಲ. ಹಣಕಾಸಿನ ಪ್ರತಿಯೊಂದು ವಿಷಯದ ಬಗ್ಗೆ ಅಧಿಕೃತ ದಾಖಲೆಗಳಿವೆ. ನನ್ನದು ಮೊದಲೆ ಅಂತರ್ರಾಷ್ಟ್ರೀಯ ಮಟ್ಟದ ವ್ಯವಹಾರ. ನನ್ನ ಸಂಪಾದನೆಯಲ್ಲಿನ ಮುಕ್ಕಾಲು ಭಾಗ ಹೊರದೇಶಗಳಿಂದ ಬಂದಿದೆ ಎಂಬುದನ್ನು ಮರೆಯಬೇಡಿ. ಆದರೆ ನಾನು ನೂರಕ್ಕೆ ನೂರರಷ್ಟು ಆದಾಯ ತೆರಿಗೆಯನ್ನು ಅಮೇರಿಕಾ ಸರಕಾರಕ್ಕೆ ಕಟ್ಟುತ್ತಿರುವೆ... ಆದಾಯ ತೆರಿಗೆ ಕಟ್ಟುತ್ತಿರುವ ನಾನು ಅಮೇರಿಕಾದ ಅತ್ಯುತ್ತಮ ಅತಿಥಿ!'

ಪತ್ರಕರ್ತರು ಚಾಪ್ಲಿನ್ ಉತ್ತರದಿಂದ ಒಂದು ಕ್ಷಣ ತಬ್ಬಿಬ್ಬಾದರು. ಅವರ ಪೈಕಿ ಒಬ್ಬ 'ನಿಮಗೆ ಹ್ಯಾನ್ಸ್ ಈಸ್ಲರ್ ಗೊತ್ತಾ!' ಎಂದು ಕೇಳಿದ.

ಮುಂದಿನ ವಾರಕ್ಕೆ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ